# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 22 ಮಂಗಳವಾರ 2023

ಸಂಪುಟ: 44 | ಸಂಚಿಕೆ: 127 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




## ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ

# ಮಂಡ್ಯದಲ್ಲಿ ಬಿಜೆಪಿ ಭಾರಿ ಪ್ರತಿಭಟನೆ

● ನಗರದಲ್ಲಿ ವಾಹನ ತಡೆದು, ರಸ್ತೆಯಲ್ಲಿ ಬೆಂಕಿ ಹಾಕಿ ಆಕ್ರೋಶ ● ಸಂಸದರಾದ ಸುಮಲತಾ, ಪಿ.ಸಿ.ಮೋಹನ್ ಭಾಗಿ



ಮಂಡ್ಯ, ಆ.21(ಮೋಹನ್‌ರಾಜ್)– **ಕೆಆರ್‌ಎಸ್‌ನಿಂದ ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಬಿಜೆಪಿ ವತಿಯಿಂದ ಸೋಮವಾರ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಭಾರಿ ಪ್ರತಿಭಟನೆ ನಡೆಸಲಾಯಿತು.**

ವೃತ್ತದಲ್ಲಿ ಜಮಾಯಿಸಿದ ನೂರಾರು ಬಿಜೆಪಿ ಕಾರ್ಯಕರ್ತರು ಕಿವಿ ಮೇಲೆ ಹೂ ಇಟ್ಟುಕೊಂಡು, ಭತ್ತ, ಕಬ್ಬು ಬೆಳೆಯಲು ನೀರಿಲ್ಲ ಇನ್ನು ಇದೇ ಗತಿ ಎಂದು ಹುರುಳಿ ಕಾಳು ಪ್ರದರ್ಶಿಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ವಾಹನ ತಡೆದು, ರಸ್ತೆಯಲ್ಲಿ ಪೇಪರ್ ಹಾಕಿ ಬೆಂಕಿ ಹಚ್ಚಿದರು. ಈ ವೇಳೆ ಬೆಂಕಿ ನಂದಿಸಲು ಮುಂದಾದ ಪೊಲೀಸರ ▶ 6ನೇ ಪುಟಕ್ಕೆ

## ಯಾವ ತಾಯಿಯೂ ತನ್ನ ಮಕ್ಕಳ ಉಪವಾಸವಿಟ್ಟು ಪಕ್ಕದ ಮನೆ ಮಕ್ಕಳಿಗೆ ಊಟ ಕೊಡಲ್ಲ: ಸಂಸದೆ ಸುಮಲತಾ

**ಮಂಡ್ಯ:** ಯಾವುದೇ ತಾಯಿ ತನ್ನ ಮಕ್ಕಳನ್ನು ಉಪವಾಸ ಇಟ್ಟು ಪಕ್ಕದ ಮನೆ ಮಕ್ಕಳಿಗೆ ಊಟ ಕೊಡಲ್ಲ. ಆದರೆ ನಮ್ಮ ರಾಜ್ಯ ಸರ್ಕಾರ ನಮ್ಮ ರೈತರಿಗೆ, ನಮ್ಮ ಜನಕ್ಕೆ ಅನ್ಯಾಯ ಮಾಡಿ ಪಕ್ಕದ ರಾಜ್ಯಕ್ಕೆ ನೀರು ಕೊಟ್ಟರೆ ಒಪ್ಪಲು ಸಾಧ್ಯವಿಲ್ಲ ಎಂದು ಸಂಸದೆ ಸುಮಲತಾ ಅಂಬರೀಷ್ ಕಿಡಿಕಾರಿದರು.

ಪ್ರತಿಭಟನೆ ವೇಳೆ ಮಾತನಾಡಿದ ಅವರು, ಕಾವೇರಿ ನಮ್ಮ ತಾಯಿ. ರಾಜಕೀಯವಾಗಿ ಯಾರೂ ನೋಡಬೇಡಿ. ಮೊದಲು ನಮ್ಮ ರೈತರ ಹಿತ ಕಾಪಾಡಬೇಕು. ಆದರೆ ಕಾಂಗ್ರೆಸ್ ಸರ್ಕಾರ ನಮ್ಮ ರೈತರ ಹಿತಾಸಕ್ತಿ ಬಲಿಕೊಟ್ಟು ತಮಿಳುನಾಡಿಗೆ ನೀರು ಹರಿಸಲು ಹೊರಟಿದೆ ಎಂದು ಕಿಡಿಕಾರಿದರು. ಕೇಂದ್ರ ಸರ್ಕಾರ ನೀರಿನ ವಿಚಾರದಲ್ಲಿ ಮಧ್ಯ ಪ್ರವೇಶ ಮಾಡಿಲ್ಲ. ರಾಜ್ಯ ಸರ್ಕಾರ ಇದನ್ನು ಸುಳ್ಳು ಹೇಳಿ ದಾರಿ ತಪ್ಪಿಸುವ ಕೆಲಸ ಮಾಡುತ್ತಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಕಾವೇರಿ ಸಮಸ್ಯೆ ಇತ್ತು. ಆಗಲು ಸುಪ್ರೀಂಕೋರ್ಟ್ ನೆಪ ಹೇಳಿ ತಮಿಳುನಾಡಿಗೆ ನೀರು ಕೊಟ್ಟಿದ್ದರು. ಕೇಂದ್ರದ ನಿರ್ಧಾರಕ್ಕೆ ಅಂಬರೀಷ್ ರಾಜೀನಾಮೆ ಕೊಟ್ಟಿದ್ದರು. ಇದನ್ನು ಪರಿಹಾರ ಮಾಡುವುದಾಗಿದ್ದರೆ ಅಂದೇ ಮಾಡಬಹುದಿತ್ತು ಎಂದರು. ● 6ನೇ ಪುಟಕ್ಕೆ






## ಪ್ರತ್ಯೇಕ ಪೀಠ ರಚನೆಗೆ ಸುಪ್ರೀಂ ಕೋರ್ಟ್ ಒಪ್ಪಿಗೆ

**ನವದೆಹಲಿ:** ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ಮತ್ತೆ ತಿಕ್ಕಾಟಕ್ಕೆ ಕಾರಣವಾಗಿರುವ ಕಾವೇರಿ ನದಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಪ್ರತ್ಯೇಕ ಪೀಠ ರಚನೆಗೆ ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದೆ.

ಕರ್ನಾಟಕಕ್ಕೆ ನೀರು ಬಿಡುವಂತೆ ಸೂಚಿಸಬೇಕು ಎಂದು ಆಗ್ರಹಿಸಿ ತಮಿಳುನಾಡು ಸಲ್ಲಿಸಿದ್ದ ಅರ್ಜಿಯ ವಿಚಾರಣೆಗಾಗಿ ಸುಪ್ರೀಂ ಕೋರ್ಟ್ ಪ್ರತ್ಯೇಕ ಪೀಠ ರಚನೆಗೆ ಒಪ್ಪಿಗೆ ನೀಡಿದೆ. ಕೂಡಲೇ ಈ ಪೀಠ ರಚನೆಯಾಗಲಿದ್ದು, ವಿಚಾರಣೆ ಕೂಡ ಆರಂಭವಾಗಲಿದೆ ಎಂದು ಹೇಳಲಾಗಿದೆ.

ಸುಪ್ರೀಂಕೋರ್ಟ್‌ನಲ್ಲಿ ಸಿಜೆಐ ಪೀಠದ ಮುಂದೆ ತಮಿಳುನಾಡು ಸರ್ಕಾರ ಅರ್ಜಿ ಸಲ್ಲಿಸಿದ್ದು, ತಮಿಳುನಾಡು ಪರ ಹಿರಿಯ ವಕೀಲ ಮುಕುಲ್ ರೋಹಟಗಿ ಅರ್ಜಿ ಪ್ರಸ್ತಾಪಿಸಿದ್ದಾರೆ. ಸುಪ್ರೀಂ ಕೋರ್ಟ್ 2023 ಆಗಸ್ಟ್ 14ರಿಂದ ಅನ್ವಯವಾಗುವಂತೆ ಕರ್ನಾಟಕದ ಜಲಾಶಯದಿಂದ 24,000 ಕ್ಯೂಸೆಕ್ ನೀರು ಬಿಡುಗಡೆ ಮಾಡಲು ಅದಕ್ಕೆ ನಿರ್ದೇಶಿಸುವಂತೆ ಕೋರಿದ ಮನವಿಯನ್ನು ವಿಚಾರಣೆ ವೇಳೆ ಪ್ರಸ್ತಾವಿಸುವಂತೆ ತಮಿಳುನಾಡು ಸರಕಾರಕ್ಕೆ ಸೂಚಿಸಿತ್ತು. ಹಿರಿಯ ವಕೀಲ ಮುಕುಲ್ ರೋಹ್ಟಗಿ, ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ ನೇತೃತ್ವದ ಪೀಠದ ಮುಂದೆ ಈ ಮನವಿ ಮಾಡಿದ್ದರು.

## ನಿಲ್ದಾಣಕ್ಕೆ ಬಾರದ ಬಸ್‌ಗಳು: ಪ್ರಯಾಣಿಕರ ಪರದಾಟ

**ಮಂಡ್ಯ:** ನಗರದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ವಾಹನ ಸಂಚಾರದಲ್ಲಿ ವ್ಯತ್ಯಯದ ಜೊತೆಗೆ ಕೆಎಸ್ ಆರ್‌ಟಿಸಿ ನಿಲ್ದಾಣಕ್ಕೆ ಬಸ್‌ಗಳು ಬಾರದೆ ಪ್ರಯಾಣಿಕರು ಪರದಾಡುವಂತಾಯಿತು. ವಾಹನ ತಡೆದ ಹಿನ್ನೆಲೆಯಲ್ಲಿ ಸುಗಮ ಸಂಚಾರಕ್ಕೆ ಅಡ್ಡಿಯಾಯಿತು. ಬೆಂಗಳೂರು ಮತ್ತು ಮೈಸೂರು, ತುಮಕೂರು ಕಡೆಯಿಂದ ನಿಲ್ದಾಣಕ್ಕೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ಗಳು ಪ್ರತಿಭಟನೆ ಹಿನ್ನೆಲೆಯಲ್ಲಿ ಬರಲಿಲ್ಲ. ಇದರಿಂದ ▶ 6ನೇ ಪುಟಕ್ಕೆ

## ನೀರಿನ ಪ್ರಮಾಣ ಕಡಿತ

### ಸಂಪೂರ್ಣ ನಿಲ್ಲಿಸುವುದಾಗಿ ಶಾಸಕ ರಮೇಶ್‌ಬಾಬು ಹೇಳಿದ್ದರು



ಮಂಡ್ಯ, ಆ.21– ಸೋಮವಾರ ಸಂಜೆಯೊಳಗೆ ತಮಿಳುನಾಡಿಗೆ ಹರಿಸುತ್ತಿರುವ ನೀರು ನಿಲ್ಲಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದು ಶಾಸಕ ಎ.ಬಿ.ರಮೇಶ್ ಬಾಬು ಬಂಡಿಸಿದ್ದೇಗೌಡ ತಿಳಿಸಿದ್ದರು. ಆದರೆ 12000 ಕ್ಯುಸೆಕ್ ಬಿಡಲಾಗಿದ್ದ ನೀರನ್ನು 9 ಸಾವಿರ ಕ್ಯುಸೆಕ್‌ಗೆ ಕಡಿತಗೊಳಿಸಲಾಗಿದೆ. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಮೇಶ್‌ಬಾಬು ಅವರು, ಮಳೆ ಕೊರತೆಯಿಂದ ನೀರಿನ ಸಮಸ್ಯೆ ಉಂಟಾಗಿದೆ. ಕಾವೇರಿ ಪ್ರಾಧಿಕಾರದ ಆದೇಶದ ಮೇರೆಗೆ ಜೂನ್ ನಲ್ಲಿ 10 ಟಿಎಂಸಿ, ಜುಲೈನಲ್ಲಿ 34 ಟಿಎಂಸಿ, ಆಗಸ್ಟ್‌ನಲ್ಲಿ 50 ಟಿಎಂಸಿ ನೀರು ಕೊಡಲು ಒತ್ತಡವಿದೆ ಎಂದು ವಿವರಿಸಿದರು. ನಾವು ಸಂಕಷ್ಟ ▶ 6ನೇ ಪುಟಕ್ಕೆ

## ಕೃಷಿ ಅಧಿಕಾರಿಗಳು ಸಿಐಡಿ ಕಸ್ಟಡಿಗೆ

ಮಂಡ್ಯ, ಆ.21(ಮೋಹನ್‌ರಾಜ್)– ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ರಾಜ್ಯಪಾಲರಿಗೆ ಪತ್ರ ಬರೆದ ಆರೋಪದ ಮೇಲೆ ಭಾನುವಾರ ಸಿಐಡಿ ಪೊಲೀಸರಿಂದ ಬಂಧನಕ್ಕೊಳಗಾಗಿದ್ದ ಮೈಸೂರಿನ ಇಬ್ಬರು ಕೃಷಿ ಅಧಿಕಾರಿಗಳನ್ನು 3 ದಿನಗಳ ಕಾಲ ಸಿಐಡಿ ಕಸ್ಟಡಿಗೆ ನೀಡಿ ಮಂಡ್ಯದ ಜೆಎಂಎಫ್‌ಸಿ ನ್ಯಾಯಾಧೀಶರು ಆದೇಶ ಹೊರಡಿಸಿದ್ದಾರೆ.

ಮೈಸೂರು ಮೂಲದ ಕೃಷಿ ಅಧಿಕಾರಿಗಳಾದ ಗುರುಪ್ರಸಾದ್, ಸುದರ್ಶನ್‌ರನ್ನು ಬಂಧಿಸಿದ್ದ ಸಿಐಡಿ ಅಧಿಕಾರಿಗಳು ಭಾನುವಾರ ರಾತ್ರಿ ಮಂಡ್ಯದ ಜೆಎಂಎಫ್‌ಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, 5 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡುವಂತೆ ಮನವಿ ಮಾಡಿದರು. ಆದರೆ 3 ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿ ನ್ಯಾಯಾಧೀಶರು ಆದೇಶಿಸಿದ್ದು, ವಿಚಾರಣೆ ಬಳಿಕ ಸಿಐಡಿ ಅಧಿಕಾರಿಗಳು ನ್ಯಾಯಾಧೀಶರ ಮುಂದೆ ಬಂಧಿತ ಅಧಿಕಾರಿಗಳನ್ನು ▶ 8ನೇ ಪುಟಕ್ಕೆ

## ಆಪರೇಷನ್ ಹಸ್ತಗೆ ಪರ್ಯಾಯವಾಗಿ ಆಪರೇಷನ್ ಕಮಲ

● ರಾಜ್ಯ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಗಂಭೀರ ವಿಚಾರ ಚರ್ಚೆ
● ಎಸ್.ಟಿ.ಸೋಮಶೇಖರ್, ಶಿವರಾಂ ಹೆಬ್ಬಾರ್, ಭೈರತಿ ಬಸವರಾಜ್ ಸೇರಿ ಇತರರು 'ಕೈ'ವಶವಾಗುವುದನ್ನು ತಡೆಯಲು ಪ್ರತಿತಂತ್ರ ● ಕಾಂಗ್ರೆಸ್‌ನಲ್ಲಿನ ಅತೃಪ್ತ ಶಾಸಕರ ಆಪರೇಷನ್‌ಗೆ ವರಿಷ್ಠರ ಸಲಹೆಯಂತೆ ರಾಜ್ಯ ನಾಯಕರ ಪ್ಲಾನ್

ಬೆಂಗಳೂರು, ಆ.21(ಕೆಎಂಶಿ)– 'ಆಪರೇಷನ್ ಹಸ್ತ'ಗೆ ಪರ್ಯಾಯವಾಗಿ 'ಆಪರೇಷನ್ ಕಮಲ' ಮಾಡಲು ಇಂದಿಲ್ಲಿ ಸಭೆ ಸೇರಿದ್ದ ರಾಜ್ಯ ಬಿಜೆಪಿ ನಾಯಕರು ತೀರ್ಮಾನಿಸಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಸಂಪುಟದಲ್ಲಿ ಅಧಿಕಾರದಲ್ಲಿದ್ದ ಎಸ್.ಟಿ.ಸೋಮಶೇಖರ್, ಶಿವರಾಮ್ ಹೆಬ್ಬಾರ್, ಭೈರತಿ ಬಸವರಾಜ್ ಸೇರಿದಂತೆ ಕೆಲವು ಶಾಸಕರನ್ನು ಕಾಂಗ್ರೆಸ್ ಸೆಳೆಯುತ್ತಿರುವುದನ್ನು ತಡೆಯಲು ಗಂಭೀರ ಚರ್ಚೆ ನಡೆಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸಮ್ಮುಖದಲ್ಲಿ ನಡೆದ ರಾಜ್ಯ ಕೋರ್ ಕಮಿಟಿ ಸಭೆಯಲ್ಲಿ ನಮ್ಮ ಶಾಸಕರನ್ನು ಕಾಂಗ್ರೆಸ್ ಸೆಳೆದರೆ, ಅವರಲ್ಲಿರುವ ಅತೃಪ್ತರನ್ನು ಸೆಳೆಯಲು ಕಾರ್ಯತಂತ್ರ ರೂಪಿಸುವ ಹೊಣೆಗಾರಿಕೆಯನ್ನು ಕೆಲವು ನಾಯಕರಿಗೆ ವಹಿಸಿದೆ.

ನಾಗಪುರ ಆರ್‌ಎಸ್‌ಎಸ್ ಕೇಂದ್ರದ ಸೂಚನೆ ಮೇರೆಗೆ ಇಂದಿಲ್ಲಿ ಸೇರಿದ್ದ ತುರ್ತು ಕೋರ್ ಕಮಿಟಿ ಸಭೆಯಲ್ಲಿ ಆಪರೇಷನ್ ಹಸ್ತ ತಡೆಯುವ ವಿಚಾರವೇ ಪ್ರಮುಖವಾಗಿತ್ತು. ಕಾಂಗ್ರೆಸ್ ಸೇರಲು ತುದಿಗಾಲಲ್ಲಿ ನಿಂತಿರುವವರನ್ನು ಮನವೊಲಿಸಿ ಪಕ್ಷದಲ್ಲೇ ಉಳಿಸಿಕೊಳ್ಳುವುದು. ಒಂದು ವೇಳೆ ಅವರು ಹೊರ ಹೋದರೂ ಕಾರ್ಯಕರ್ತರನ್ನು ಹಿಡಿದಿಟ್ಟುಕೊಳ್ಳಬೇಕು. ಅಂತಹ ಸಂದರ್ಭ ಒದಗಿಬಂದರೆ, ಅವರು ಪ್ರತಿನಿಧಿಸುವ ಕ್ಷೇತ್ರ ಮತ್ತು ಜಿಲ್ಲೆಯಲ್ಲಿ ▶ 8ನೇ ಪುಟಕ್ಕೆ

## ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಆಗಿರುವಾಗ ನೈಸ್ ರಸ್ತೆ ಅಗತ್ಯವಿಲ್ಲ

### ನೈಸ್ ಯೋಜನೆ ಮುಟ್ಟುಗೋಲು ಹಾಕಿಕೊಳ್ಳಿ; ರಾಜ್ಯ ಸರ್ಕಾರಕ್ಕೆ ರಾಜ್ಯದ ದೆಹಲಿ ವಿಶೇಷ ಪ್ರತಿನಿಧಿ ಜಯಚಂದ್ರ ಅಭಿಮತ






ಬೆಂಗಳೂರು, ಆ.21(ಕೆಎಂಶಿ)– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ನಿರ್ಮಾಣ ಮಾಡಿರುವ ಹಿನ್ನೆಲೆಯಲ್ಲಿ ನೈಸ್ ರಸ್ತೆಯ ಅವಶ್ಯಕತೆಯಿಲ್ಲ. ಹೀಗಾಗಿ ನೈಸ್ ಯೋಜನೆಯನ್ನು ರಾಜ್ಯ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಅಭಿಪ್ರಾಯಪಟ್ಟಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೈಸ್ ಯೋಜನೆಗೆ ಸಂಬಂಧಿಸಿದಂತೆ ನಾನೇ 2016ರಲ್ಲಿ ಸದನ ಸಮಿತಿ ▶ 8ನೇ ಪುಟಕ್ಕೆ

# ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ; ಮಡಿಕೇರಿಯಲ್ಲಿ ಧರೆಗುರುಳಿದ ಜನರಲ್ ಕೆ.ಎಸ್.ತಿಮ್ಮಯ್ಯನವರ ಪ್ರತಿಮೆ

● ಹುಟ್ಟಿದ ಮನೆ ಸನ್ನಿಸೈಡ್‌ಗೆ ತಿಮ್ಮಯ್ಯನವರ ಪ್ರತಿಮೆ ಸ್ಥಳಾಂತರ ● ಬಸ್ ಡಿಕ್ಕಿ ಹೊಡೆದ ರಭಸಕ್ಕೆ ಸಂಪೂರ್ಣ ಧ್ವಂಸಗೊಂಡ ಸರ್ಕಲ್ ● ಸ್ವಲ್ಪ ಮಟ್ಟಿಗೆ ಪ್ರತಿಮೆ ಜಖಂ; ಇದೇ ಸ್ಥಳದಲ್ಲಿ ಪ್ರತಿಮೆ ಮರು ಸ್ಥಾಪಿಸಲು ಶಾಸಕರ ನಿರ್ಧಾರ







ಮಡಿಕೇರಿ, ಆ.21–ಮಡಿಕೇರಿ ನಗರದ ಹೃದಯ ಭಾಗದ ಜನರಲ್ ತಿಮ್ಮಯ್ಯ ವೃತ್ತಕ್ಕೆ ಕೆಎಸ್‌ಆರ್‌ಟಿಸಿ ಬಸ್ಸು ಡಿಕ್ಕಿ ಹೊಡೆದ ಪರಿಣಾಮ ವೃತ್ತ ಸಂಪೂರ್ಣ ಧ್ವಂಸವಾಗಿ, ಜನರಲ್ ತಿಮ್ಮಯ್ಯನವರ ಪ್ರತಿಮೆ ಧರೆಗುರುಳಿದೆ. ಸೋಮವಾರ ಮುಂಜಾನೆ ಈ ಘಟನೆ ನಡೆದಿದೆ.

ಮಡಿಕೇರಿಯಿಂದ ಮಂಗಳೂರಿಗೆ ತೆರಳುತ್ತಿದ್ದ ಬಸ್ ಡಿಕ್ಕಿ ಹೊಡೆದಿದೆ. ಈ ಘಟನೆಗೆ ವಿವಿಧ ಸಂಘ–ಸಂಸ್ಥೆಗಳು, ಜನಸಾಮಾನ್ಯರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಬಸ್ ಚಾಲಕನ ವಿರುದ್ಧ ಮಡಿಕೇರಿ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಘಟನೆ ವಿವರ:** ಪುತ್ತೂರು ಡಿಪೋದ ಮಡಿಕೇರಿ ಉಪವಿಭಾಗಕ್ಕೆ ಸೇರಿದ ಈ ಬಸ್ (ಕೆಎ.21–ಎಫ್.0043) ಎಂದಿನಂತೆ ಮಡಿಕೇರಿ ಡಿಪೋದಿಂದ ಬಸ್ ನಿಲ್ದಾಣದ ಮೂಲಕ ಬೆಳಗ್ಗೆ 6 ಗಂಟೆಗೆ ಮಂಗಳೂರಿಗೆ ತೆರಳಬೇಕಿತ್ತು. ಈ ಸಂದರ್ಭ 5.45 ಗಂಟೆಗೆ ಬಸ್ ಡಿಪೋದಿಂದ ಹೊರಟು ಜನರಲ್ ತಿಮ್ಮಯ್ಯ ವೃತ್ತದ ಬಳಿ ಬರುತ್ತಿದ್ದಂತೆಯೇ ಓಂಕಾರೇಶ್ವರ ದೇವಾಲಯ ರಸ್ತೆಯಿಂದ ಟಾಟಾ ಏಸ್ ವಾಹನವೊಂದು ಬಂದಿದೆ. ಈ ವಾಹನಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸುವ ಸಲುವಾಗಿ ಕೆಎಸ್ ಆರ್‌ಟಿಸಿ ಬಸ್ ಚಾಲಕ ದಾವಣಗೆರೆಯ ಕೊಟ್ರೇಗೌಡ ಎಂಬುವರು ಬಸ್ ಅನ್ನು ಎಡಭಾಗಕ್ಕೆ ಚಲಾಯಿಸಿದ್ದಾರೆ. ಈ ವೇಳೆ ಚಾಲಕನ ನಿಯಂತ್ರಣ ಕಳೆದುಕೊಂಡ ಬಸ್, ಡಿವೈಡರ್ ಮೇಲೇರಿ ಹೋಗಿ ಜನರಲ್ ತಿಮ್ಮಯ್ಯ ವೃತ್ತಕ್ಕೆ ಡಿಕ್ಕಿ ಹೊಡೆದಿದೆ. ಇದರಿಂದ ವೃತ್ತದ ಮೇಲೆ 5 ದಶಕಗಳ ಹಿಂದೆ ಸ್ಥಾಪಿಸಲಾಗಿದ್ದ, ಜನರಲ್ ತಿಮ್ಮಯ್ಯ ಅವರ ಕಂಚಿನ ಪ್ರತಿಮೆ ಧರೆಗೆ ಉರುಳಿ ಬಿದ್ದಿದೆ.

**1973ರಲ್ಲಿ ಪ್ರತಿಮೆ ಸ್ಥಾಪನೆ:** ವೀರ ಸೇನಾನಿ, ಪದ್ಮಭೂಷಣ ▶ 6ನೇ ಪುಟಕ್ಕೆ

ಮೈಸೂರು ಮಿತ್ರ



# ಮೈಸೂರು-ಕುಶಾಲನಗರ ರಾಷ್ಟ್ರೀಯ ಹೆದ್ದಾರಿ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆ ತ್ವರಿತಗೊಳಿಸಿ

## ತಹಸೀಲ್ದಾರ್, ಉಪವಿಭಾಗಾಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ





ಮೈಸೂರು,ಆ.21(ಆರ್‌ಕೆ)-ಕೇಂದ್ರ ಸರ್ಕಾರದ ಅನುದಾನದಡಿ ಕೈಗೊಂಡಿರುವ ಮೈಸೂರು-ಕುಶಾಲನಗರ ರಾಷ್ಟ್ರೀಯ ಹೆದ್ದಾರಿ ಯೋಜನೆಗೆ ಅಗತ್ಯವಿರುವ ಭೂಮಿ ಸ್ವಾಧೀನಕ್ಕೆ ತ್ವರಿತ ಕ್ರಮ ಕೈಗೊಳ್ಳುವಂತೆ ಮೈಸೂರು, ಹುಣಸೂರು, ಪಿರಿಯಾಪಟ್ಟಣ ತಾಲೂಕು ತಹಸೀಲ್ದಾರ್‌ಗಳು ಹಾಗೂ ಉಪವಿಭಾಗಾಧಿಕಾರಿಗಳಿಗೆ ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಇಂದಿಲ್ಲಿ ಸೂಚನೆ ನೀಡಿದ್ದಾರೆ.

ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿಯ ಕಟ್ಟಡದ ಕೆ-ಸ್ವಾನ್ ಕೊಠಡಿಯಲ್ಲಿ ಸೋಮವಾರ ನಡೆದ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಮೈಸೂರು-ಕುಶಾಲನಗರ ಹೆದ್ದಾರಿ ಯೋಜನೆ ಅನುಷ್ಠಾನಗೊಳಿಸಲು ಅಗತ್ಯ ಭೂಮಿ ಸ್ವಾಧೀನಪಡಿಸಿಕೊಂಡು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಶಕ್ಕೆ ಒಪ್ಪಿಸಬೇಕಾಗಿದೆ. ಸ್ವಾಧೀನ ಪ್ರಕ್ರಿಯೆಗೆ ಅಡ್ಡಿಯಾಗಿರುವ ಸಾಗುವಳಿ ಜಮೀನುಗಳ ದುರಸ್ತು ಮತ್ತು ಖಾತಾ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಿ ಎಂದು ತಿಳಿಸಿದರು.

ಕನಿಷ್ಠ ಶೇ.80ರಷ್ಟು ಭೂಮಿ ಹಸ್ತಾಂತರಿಸಿದರೆ ಸಾಕು. ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಕಾಮಗಾರಿ ಆರಂಭಿಸುತ್ತಾರೆ. ಭೂಸ್ವಾಧೀನಪಡಿಸಿ ರೈತರಿಗೆ ಪರಿಹಾರ ನೀಡಲು ಸಾಗುವಳಿ ಜಮೀನು ದುರಸ್ತು ಆಗದಿರುವುದರಿಂದ ಅಡಚಣೆಯಾಗುತ್ತಿದೆ. ಆಯಾ ತಾಲೂಕು ತಹಸೀಲ್ದಾರ್‌ಗಳು, ಉಪವಿಭಾಗಾಧಿಕಾರಿಗಳು ಸರ್ವೇಯರ್‌ಗಳಿಂದ ದುರಸ್ತು ಕಾರ್ಯವನ್ನು ತ್ವರಿತವಾಗಿ ಕೈಗೊಂಡು ಖಾತೆ ಮಾಡಿಕೊಡುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.

ಮೊದಲು ಆಯಾ ಗ್ರಾಮದ ಸರ್ವೆ ನಂಬರ್‌ಗಳ ಭೂಮಿಯನ್ನು ಸರ್ವೆ ಮಾಡಿಸಿ, ಸಾಗುವಳಿ ಭೂಮಿಯ ಟೋಟಲ್ ಸ್ಟೇಷನ್ ಮಾಡಿ ರೈತರ ಜಮೀನು ಎಷ್ಟು ಎಂಬುದನ್ನು ದೃಢಪಡಿಸಿ ದುರಸ್ತುಗೊಳಿಸಿ ರೈತರ ಹೆಸರಿಗೆ ಖಾತೆ ಮಾಡಿಕೊಟ್ಟು, ನಂತರ ಸಾಗುವಳಿ ಜಮೀನಾಗಿದ್ದರೆ ದುರಸ್ತಿಗೊಳಿಸಿ ನಿಜವಾದ ಭೂಮಾಲೀಕರಿಗೆ ಪರಿಹಾರ ನೀಡುವಂತೆಯೂ ವಿಭಾಗಾಧಿಕಾರಿಗಳಿಗೆ ತಿಳಿಸಿದರು.

ಎಲೆಕ್ಟ್ರಿಕ್ ಟ್ರಾನ್ಸ್‌ಫಾರ್ಮರ್‌ಗಳು, ಕಂಬಗಳು, ಇನ್ನಿತರ ಪರಿವರ್ತಕಗಳ ಸ್ಥಳಾಂತರ, ಕೆರೆ, ಕಟ್ಟೆ, ಸ್ಮಶಾನ, ಅರಣ್ಯ ಭೂಮಿಗಳು ಮಾರ್ಗ ಮಧ್ಯೆ ಇದ್ದಲ್ಲಿ ನಿಯಮಾನುಸಾರ ಅಗತ್ಯ ಕ್ರಮ ವಹಿಸುವತ್ತ ಗಮನ ಹರಿಸಬೇಕು ಎಂದು ಸೂಚನೆ ನೀಡಿದರು.

ಮುಂದಿನ ವಾರ ಸಂಸದ ಪ್ರತಾಪ್ ಸಿಂಹ ಅವರು ಈ ಸಂಬಂಧ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದು, ಅಷ್ಟರಲ್ಲಿ ಭೂಸ್ವಾಧೀನ ಪ್ರಕ್ರಿಯೆ ಸ್ಥಿತಿಗತಿ ಬಗ್ಗೆ ಪೂರ್ಣ ಮಾಹಿತಿವುಳ್ಳವರಾಗಿರಬೇಕು ಎಂದು ತಿಳಿಸಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಂ, ರಾಷ್ಟ್ರೀಯ ಹೆದ್ದಾರಿ ವಿಶೇಷ ಭೂಸ್ವಾಧೀನಾಧಿಕಾರಿ ಶಿವೇಗೌಡ, ಮೈಸೂರು ಉಪವಿಭಾಗಾಧಿಕಾರಿ ಕೆ.ಆರ್.ರಕ್ಷಿತ್, ಭೂದಾಖಲೆಗಳ ಸಹಾಯಕ ನಿರ್ದೇಶಕ ಚಿಕ್ಕಣ್ಣ, ಹುಣಸೂರು ತಹಸೀಲ್ದಾರ್ ಡಾ. ಅಶೋಕ ಸೇರಿದಂತೆ ಹಲವು ಅಧಿಕಾರಿಗಳು ಹಾಜರಿದ್ದರು.

# ಶಾಲಾ ಮಕ್ಕಳ ಪೌಷ್ಟಿಕ ಆಹಾರಕ್ಕಾಗಿ ವಾರ್ಷಿಕ 10.20 ಕೋಟಿ ರೂ. ವೆಚ್ಚ

## ಮೈಸೂರು ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾಹಿತಿ



ಮೈಸೂರಿನ ಮಹಾರಾಜ ಪ್ರೌಢಶಾಲಾ ಮಕ್ಕಳಿಗೆ ಮೊಟ್ಟೆ, ಬಾಳೆಹಣ್ಣು ಹಾಗೂ ಶೇಂಗಾ ಚಿಕ್ಕಿ ವಿತರಿಸುವ ಕಾರ್ಯಕ್ರಮಕ್ಕೆ ಸೋಮವಾರ ಸಚಿವ ಹೆಚ್.ಸಿ. ಮಹದೇವಪ್ಪ ಚಾಲನೆ ನೀಡಿದರು.

ಮೈಸೂರು, ಆ.21 (ಬಿಎಲ್‌ಯು)- ಶಾಲಾ ಮಕ್ಕಳ ದೈಹಿಕ ಆರೋಗ್ಯ ಸುಧಾರಣೆಗೆ ಪೌಷ್ಟಿಕ ಆಹಾರ ಕಲ್ಪಿಸಲು ರಾಜ್ಯ ಸರ್ಕಾರ ವಾರ್ಷಿಕ 10.20 ಕೋಟಿ ರೂಪಾಯಿ ನೀಡುತ್ತಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಮೈಸೂರಿನ ಮಹಾರಾಜ ಪ್ರೌಢಶಾಲಾ ಮಕ್ಕಳಿಗೆ ಮೊಟ್ಟೆ, ಬಾಳೆಹಣ್ಣು ಹಾಗೂ ಶೇಂಗಾ ಚಿಕ್ಕಿ ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ವರ್ಷದಲ್ಲಿ 80 ದಿನಗಳು ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಲಾಗುವುದು. ಒಬ್ಬ ವಿದ್ಯಾರ್ಥಿಗೆ ವಾರದ ಎರಡು ದಿನ 6 ರೂಪಾಯಿಯಂತೆ ವರ್ಷಕ್ಕೆ 480 ರೂಪಾಯಿ ಆಗಲಿದೆ. ಈ ಮೂಲಕ ಕರ್ನಾಟಕದಲ್ಲಿ 1ರಿಂದ 10ನೇ ತರಗತಿ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಲು ರಾಜ್ಯ ಸರ್ಕಾರ 10,20,70,080 ರೂಪಾಯಿ ನೀಡುತ್ತಿದೆ ಎಂದು ಹೇಳಿದರು.

ಬಡತನ ಇದ್ದ ಕಾರಣ ಬಾಲ್ಯದಲ್ಲಿ ನಮಗೆ ಮೂರು ಹೊತ್ತು ಊಟ-ತಿಂಡಿ ಸಿಗುತ್ತಿರಲಿಲ್ಲ. ರಾಗಿ, ಜೋಳದ ಮುದ್ದೆಗೆ ಉಪ್ಪು, ಮೆಣಸಿನಕಾಯಿ ಬೆರೆಸಿ ಊಟ ಮಾಡುತ್ತಿದ್ದೆವು. ಆದರೆ ಇಂದಿನ ಮಕ್ಕಳಿಗೆ ನಮಗಿದ್ದಂತಹ ಬಡತನದ ಪರಿಸ್ಥಿತಿ ಇಲ್ಲ. ಯಾರೂ ಹಸಿವಿನಿಂದ ಬಳಲಬಾರದು ಎಂಬ ಕಾರಣದಿಂದ ರಾಜ್ಯ ಸರ್ಕಾರ ಹಲವು ವಿಶಿಷ್ಟ ಕಾರ್ಯಕ್ರಮ ರೂಪಿಸಿದೆ. ಇದರಲ್ಲಿ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ಕಾರ್ಯಕ್ರಮ ಕೂಡ ಒಂದು ಎಂದು ಡಾ.ಮಹದೇವಪ್ಪ ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಒಟ್ಟು 2228 ಶಾಲೆಗಳಿವೆ. ಇದರಲ್ಲಿ 2,064 ಸರ್ಕಾರಿ ಶಾಲೆ, 258 ಅನುದಾನಿತ ಶಾಲೆಗಳು ಹಾಗೂ 6 ಮೌಲಾನಾ ಆಜಾದ್ ಮಾದರಿ ಶಾಲೆಗಳಾಗಿವೆ. ಎಲ್ಲಾ ಶಾಲೆಗಳ 46,852 ವಿದ್ಯಾರ್ಥಿಗಳಿಗೆ ವಾರಕ್ಕೆ ಎರಡು ದಿನ ಪೌಷ್ಟಿಕ ಆಹಾರ ನೀಡಲಾಗುವುದು ಎಂದು ಸಚಿವ ಡಾ.ಮಹದೇವಪ್ಪ ಅಂಕಿ ಅಂಶಗಳ ಸಹಿತ ಮಾಹಿತಿ ನೀಡಿದರು.

ವೈಜ್ಞಾನಿಕ ಮತ್ತು ವೈಚಾರಿಕತೆಯ ಶಿಕ್ಷಣ ನೀಡಬೇಕೆಂದು ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಪಾದಿಸಿದರು. ಈ ಹಿನ್ನೆಲೆಯಲ್ಲಿ ಜಾತಿ, ಧರ್ಮದ ಭೇದಭಾವವಿಲ್ಲದೆ ಮಕ್ಕಳು ಶಾಲೆಗಳಲ್ಲಿ ವಿದ್ಯೆ ಕಲಿತು ಸಂವಿಧಾನದ ಆಶಯಗಳಿಗೆ ತಕ್ಕಂತೆ ಬದುಕು ಕಟ್ಟಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಓದಿನ ಜೊತೆಗೆ ಬದುಕು ಕಟ್ಟಿಕೊಳ್ಳುವ ಕೌಶಲ್ಯವನ್ನು ಶಿಕ್ಷಕರು ಮಕ್ಕಳಿಗೆ ತಿಳಿಸಿಕೊಡಬೇಕು ಎಂದು ಇದೇ ವೇಳೆ ಸಚಿವ ಡಾ.ಮಹದೇವಪ್ಪ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಶಾಸಕ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ ಸೇರಿದಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ನುಲಿಯ ಚಂದಯ್ಯ, ಬ್ರಹ್ಮ ಶ್ರೀ ನಾರಾಯಣ ಗುರು ಜಯಂತಿ ಅರ್ಥಪೂರ್ಣ ಆಚರಣೆ



ಮೈಸೂರು,ಆ.21-ಬ್ರಹ್ಮಶ್ರೀ ನಾರಾಯಣಗುರು ಹಾಗೂ ನುಲಿಯ ಚಂದಯ್ಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಬೇರೆ ಬೇರೆ ದಿನಗಳಲ್ಲಿ ಆಚರಣೆ ಮಾಡಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಮ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ನುಲಿಯ ಚಂದಯ್ಯ ಹಾಗೂ ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಆಚರಣೆಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೈಸೂರು ಜಿಲ್ಲಾಡಳಿತದ ವತಿಯಿಂದ ಆ.31ರಂದು ಕಲಾಮಂದಿರದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಅವರ ಜಯಂತಿಯನ್ನು ಆಚರಿಸಲಾಗುವುದು. ನುಲಿಯ ಚಂದಯ್ಯ ಜಯಂತಿ ಆಚರಣೆಗೆ ಸಂಬಂಧಿಸಿದಂತೆ ಸಮುದಾಯದ ಮುಖಂಡರು ಸಮಯಾವಕಾಶ ಕೇಳಿರುವುದರಿಂದ ಮುಂದೆ ದಿನಾಂಕ ತಿಳಿಸಲಾಗುವುದು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮಾತನಾಡಿ, ಬ್ರಹ್ಮಶ್ರೀ ನಾರಾಯಣಗುರು ಜಯಂತಿ ವೇದಿಕೆ ಕಾರ್ಯಕ್ರಮವನ್ನು ಆ.31ರಂದು ಮಧ್ಯಾಹ್ನ 3 ಗಂಟೆಗೆ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗುವುದು. ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಉಳಿದ ಅಂಶಗಳನ್ನು ಜಿಲ್ಲಾ ಶಿಷ್ಟಾಚಾರದಂತೆ ನಡೆಸಲಾಗುವುದು ಎಂದರು.

ಸಮುದಾಯದ ಮುಖಂಡರುಗಳು ನುಲಿಯ ಚಂದಯ್ಯ ಜಯಂತಿಗೆ ಉಪನ್ಯಾಸಕರಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಅವರನ್ನು ಹಾಗೂ ಬ್ರಹ್ಮಶ್ರೀ ನಾರಾಯಣಗುರು ಜಯಂತಿಗೆ ಮಮತೇಶ್ ಕಡೂರು ಅವರ ಹೆಸರನ್ನು ಸೂಚಿಸಿದರು. ಜಯಂತಿಗಳಿಗೆ ವ್ಯಾಪಕ ಪ್ರಚಾರ ನೀಡುವಂತೆ ವಾರ್ತಾ ಇಲಾಖೆಗೆ ಸೂಚಿಸಬೇಕು ಎಂದು ಮನವಿ ಮಾಡಿದರು. ನಗರದ ಒಂದು ರಸ್ತೆಗೆ ನುಲಿಯ ಚಂದಯ್ಯನವರ ಹೆಸರನ್ನು ನಾಮಕರಣ ಮಾಡುವಂತೆ ಸಮುದಾಯದ ಮುಖಂಡರು ಸಭೆಯಲ್ಲಿ ಮನವಿ ಮಾಡಿದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು, ಹುಣಸೂರು ತಾಲೂಕಿನ ಕಾಯಕ ಸಮಾಜದ ಅಧ್ಯಕ್ಷರಾದ ಟಿ.ಕೆ ಹೊನ್ನಪ್ಪ, ನುಲಿಯ ಚಂದಯ್ಯ ಸಮುದಾಯದ ಮುಖಂಡರಾದ ರುಕ್ಮಂದ, ರಾಮಶೆಟ್ಟಿ, ಮೋಹನ್‌ರಾಜ್, ಬ್ರಹ್ಮಶ್ರೀ ಸಮುದಾಯದ ಮುಖಂಡರಾದ ರಾಜಶೇಖರ್ ಕದಂಬ, ಕೃಷ್ಣಮೂರ್ತಿ, ದೇವದಾಸ್ ಜಯರಾಜ್ ಸೇರಿದಂತೆ ವಿವಿಧ ಸಮುದಾಯಗಳ ಮುಖಂಡರು ಉಪಸ್ಥಿತರಿದ್ದರು.

# ಪತ್ರಿಕೋದ್ಯಮ ವಿಭಾಗದ ಜನೋತ್ರಿ ಮಾಧ್ಯಮ ಹಬ್ಬ ಆರಂಭ




ಮೈಸೂರು, ಆ.21(ಬಿಎಲ್‌ಯು)- ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಆಯೋಜಿಸಿದ್ದ ಜನೋತ್ರಿ-23 ಮಾಧ್ಯಮ ಹಬ್ಬ ಸೋಮವಾರ ಆರಂಭವಾಯಿತು. ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜನೋತ್ರಿ-23 ಮಾಧ್ಯಮ ಹಬ್ಬವನ್ನು ಮೈಸೂರು ರಾಜವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್ ಉದ್ಘಾಟಿಸಿದರು. ಆಧುನಿಕ ತಂತ್ರಜ್ಞಾನದ ಹಲವು ಅಂಶಗಳನ್ನು ಅಳವಡಿಸಿಕೊಂಡು ಪತ್ರಿಕೋದ್ಯಮ ವಿದ್ಯಾರ್ಥಿಗಳು ಬೆಳವಣಿಗೆ ಹೊಂದಬೇಕು ಎಂದು ಪ್ರಮೋದಾ ದೇವಿ ಒಡೆಯರ್ ಸಲಹೆ ನೀಡಿದರು. ಪತ್ರಿಕೋದ್ಯಮ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಪದ್ಮನಾಭ, ಪ್ರೊ.ಉಷಾರಾಣಿ, ಪ್ರೊ.ಬಿ.ಪಿ.ಮಹೇಶ್ ಚಂದ್ರಗುರು, ಪ್ರೊ.ಕೆ.ಜೆ.ಜೋಸೆಫ್ ಅವರನ್ನು ಈ ಸಂದರ್ಭದಲ್ಲಿ ಪತ್ರಿಕೋದ್ಯಮ ವಿದ್ಯಾರ್ಥಿಗಳು ಸನ್ಮಾನಿಸಿದರು. ವಿಜಯ ಕರ್ನಾಟಕ ಪತ್ರಿಕೆ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಎಸ್.ಸಪ್ನ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ಆ.21- ಕೆ.ಆರ್.ನಗರದಲ್ಲಿ ತ್ರೈಮಾಸಿಕ ನಿರ್ವಹಣೆ ಕೈಗೊಳ್ಳುವುದರಿಂದ ಆ.22ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕೆ.ಆರ್. ನಗರ ಪಟ್ಟಣ, ಚಂದಗಾಲು, ಹೆಬ್ಬಾಳು, ಸಿದ್ದಾಪುರ, ಬ್ಯಾಡರಹಳ್ಳಿ, ದೊಡ್ಡೇಕೊಪ್ಪಲು, ಲಾವಂದೇಹಳ್ಳಿ ಗ್ರಾಮ ಪಂಚಾಯಿತಿಗೆ ಒಳಪಡುವ ಎಲ್ಲಾ ಗ್ರಾಮಗಳಲ್ಲೂ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

## ಗುತ್ತಿಗೆ ಆಧಾರದ ಮೇಲೆ ನೇಮಕಾತಿಗೆ ಅರ್ಜಿ ಆಹ್ವಾನ

ಮೈಸೂರು,ಆ.21-ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆ.23ರಿಂದ 31ರವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಆಸಕ್ತರು https://mysore.nic.in ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821-2441988 ಅನ್ನು ಸಂಪರ್ಕಿಸಬಹುದು.



ಸಂವಹನ ಟ್ರಸ್ಟ್‌ನ ಗೌರವಾಧ್ಯಕ್ಷರಾಗಿ ಆಯ್ಕೆಯಾದ ವಿಧಾನ ಪರಿಷತ್ ಸದಸ್ಯ ಡಿ.ತಿಮ್ಮಯ್ಯ ಅವರನ್ನು ಟ್ರಸ್ಟ್‌ನ ಅಧ್ಯಕ್ಷ ಡಿ.ಎನ್.ಲೋಕಪ್ಪ, ಸಂಘಟನಾ ಕಾರ್ಯದರ್ಶಿ ಚಂದ್ರಶೇಖರ್ ಅಭಿನಂದಿಸಿದರು.



ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದ ಮರವೊಂದರಲ್ಲಿ 'ಟಿಕಲ್ ಬ್ಲೂ ಫ್ಲೈಕ್ಯಾಚರ್' ಜೋಡಿಯೊಂದು ಮರಿಗಳಿಗೆ ಆಹಾರ ತಿನ್ನಿಸುತ್ತಿರುವುದು.
ಚಿತ್ರ: ಎಂ.ಎನ್. ಲಕ್ಷ್ಮೀನಾರಾಯಣ ಯಾದವ್. ಚಿತ್ರ:

# ಮರಣ ಹೊಂದಿರುವವರ ಖಾತೆಗೆ ಸರ್ಕಾರದ ಪಿಂಚಣಿ ಹಣ ಪಾವತಿ

## ಪಿಂಚಣಿ ಪಟ್ಟಿಯಿಂದ ಕೈಬಿಡದಿದ್ದರೆ ಶಿಸ್ತು ಕ್ರಮ: ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಎಚ್ಚರಿಕೆ



ಮೈಸೂರು,ಆ.21(ಬಿಎಲ್‌ಯು)- ಮರಣ ಹೊಂದಿರುವವರ ಖಾತೆಗೆ ಪಿಂಚಣಿ ಹಣ ಸಂದಾಯ ಆಗುವುದನ್ನು ತಡೆಯದಿದ್ದರೆ ಕಂದಾಯ ಅಧಿಕಾರಿ ಹಾಗೂ ಗ್ರಾಮ ಆಡಳಿತಾಧಿಕಾರಿಯನ್ನು ನೇರ ಹೊಣೆಗಾರರನ್ನಾಗಿ ಮಾಡಿ, ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಎಚ್ಚರಿಕೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ನಡೆದ ವಿಪತ್ತು ನಿರ್ವಹಣೆ ಕುರಿತ ಸಭೆಯಲ್ಲಿ ಮಾತನಾಡಿದ ಅವರು, ವಿವಿಧ ಯೋಜನೆಯಡಿ ಸರ್ಕಾರದಿಂದ ಪಿಂಚಣಿ ಪಡೆಯುತ್ತಿರುವ ಕೆಲವರು ಮರಣ ಹೊಂದಿದ್ದರೂ ಅವರ ಖಾತೆಗೆ ಪಿಂಚಣಿ ಹಣ ಪಾವತಿ ಆಗುತ್ತಿದೆ. ಕೂಡಲೇ ಪರಿಶೀಲನೆ ನಡೆಸಿ ಮರಣ ಹೊಂದಿರುವವರ ಹೆಸರನ್ನು ಪಿಂಚಣಿ ಪಟ್ಟಿಯಿಂದ ಕೈಬಿಡಬೇಕು. ಇಲ್ಲದಿದ್ದರೆ ಸಂಬಂಧಿಸಿದ ಕಂದಾಯ ಅಧಿಕಾರಿ ಹಾಗೂ ಗ್ರಾಮ ಆಡಳಿತಾಧಿಕಾರಿಯನ್ನೆ ನೇರ ಹೊಣೆ ಮಾಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಮಳೆ ಹಾನಿಯಿಂದ ಮನೆ ಬಿದ್ದು ಹೋಗಿರುವ ಸ್ಥಳಗಳಿಗೆ ತಹಸೀಲ್ದಾರ್, ಕಾರ್ಯಪಾಲಕ ಅಭಿಯಂತರರು ಹಾಗೂ ಕಾರ್ಯನಿರ್ವಹಣಾಧಿಕಾರಿಗಳು ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಮಳೆ ಹಾನಿಯಿಂದಲೇ ಮನೆ ಬಿದ್ದಿದೆಯೇ ಎಂದು ಖಚಿತಪಡಿಸಿಕೊಂಡು ಕೂಡಲೇ ಮೊದಲ ಹಂತದ ಪರಿಹಾರವನ್ನು ಮನೆ ಮಾಲೀಕರಿಗೆ ನೀಡಬೇಕು. ಈ ಬಗ್ಗೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಎಂದು ಡಾ.ರಾಜೇಂದ್ರ ಅಧಿಕಾರಿಗಳಿಗೆ ತಾಕೀತು ಮಾಡಿದರು. ಮಳೆಯಿಂದ ಹಾನಿಗೊಳಗಾಗಿರುವ ಶಾಲೆಗಳು, ಅಂಗನವಾಡಿ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿಗೆ 2 ಲಕ್ಷ ರೂ. ಅನುದಾನ ನೀಡಲಾಗುವುದು ಎಂದು ಇದೇ ವೇಳೆ ಡಾ.ರಾಜೇಂದ್ರ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಎಡಿಸಿ ಕವಿತಾ ರಾಜಾರಾಮ್, ಉಪವಿಭಾಗಾಧಿಕಾರಿ ರಕ್ಷಿತ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಡಾ.ರಾಜ್‌ಕುಮಾರ್ ಕುರಿತ ಪುಸ್ತಕ ಬಿಡುಗಡೆ




ಮೈಸೂರು,ಆ.21(ಪಿಎಂ)- ಗೆಜ್ಜೆಹೆಜ್ಜೆ ರಂಗತಂಡ ಮೈಸೂರು ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸುಧಾ ರಮೇಶ್‌ಕುಮಾರ್ ಅವರ 'ಡಾ.ರಾಜ್‌ಕುಮಾರ್ ನಡೆದು ಬಂದ ಹಾದಿ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗೆಜ್ಜೆಹೆಜ್ಜೆ ರಂಗತಂಡದ ಸಂಸ್ಥಾಪಕ ವಿ.ಉದಯಕುಮಾರ್ ಪುಸ್ತಕ ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಅವರು, ಅಣ್ಣಾವ್ರ (ಡಾ.ರಾಜ್‌ಕುಮಾರ್) ಬಗ್ಗೆ ಬರೆಯುವುದು ಸಾಗರದಷ್ಟಿದೆ. ಪುಸ್ತಕದಲ್ಲಿ ಅವರ ಮೇರು ವ್ಯಕ್ತಿತ್ವವನ್ನು ಅನಾವರಣಗೊಳಿಸಿದ್ದು, ಇದರ ಜೊತೆಗೆ ಸಮಕಾಲೀನ ಅದ್ಭುತ ನಟರ ಬಗ್ಗೆಯೂ ಕೃತಿಯಲ್ಲಿ ಬೆಳಕು ಚೆಲ್ಲಲಾಗಿದೆ ಎಂದರು.

ಚಲನಚಿತ್ರ ಹಾಗೂ ರಂಗಭೂಮಿ ಕಲಾವಿದೆ ಎಲ್.ಯಶೋಧ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಬಸವೇಶ್ವರ ಪ್ರಿಂಟರ್ಸ್‌ನ ಮಾಧವ ಆಚಾರ್, ಕೃತಿ ಕರ್ತೃ ಸುಧಾ ರಮೇಶ್‌ಕುಮಾರ್, ಕಿರುಚಿತ್ರ ನಿರ್ಮಾಪಕ ಲೋಕೇಶ್, ಛಾಯಾಗ್ರಾಹಕ ಲೋಕೇಶ್ ಮತ್ತಿತರರು ಹಾಜರಿದ್ದರು.


# ಫ್ಯಾಷನ್ ಶೋನಲ್ಲಿ ಹಲವರಿಗೆ ಪ್ರಶಸ್ತಿ



ಮೈಸೂರು,ಆ.21(ಪಿಎಂ)- ತಿಬ್ಬಾಸ್ ಗ್ರೂಪ್ ಫೌಂಡೇಷನ್‌ನ ತಿಬ್ಬಾಸ್ ಗ್ರೂಪ್ ಮಾಡೆಲಿಂಗ್ ಕಂಪನಿ ವತಿಯಿಂದ ಇತ್ತೀಚೆಗೆ ನಡೆದ ಫ್ಯಾಷನ್ ಶೋನಲ್ಲಿ ಮಕ್ಕಳಿಂದ ಹಿಡಿದು 75 ವರ್ಷ ವಯೋಮಾನದವರೆಗಿನ ಮಾಡೆಲ್‌ಗಳು ಪಾಲ್ಗೊಂಡಿದ್ದರು ಎಂದು ಫೌಂಡೇಷನ್ ಸಂಸ್ಥಾಪಕ ಡಿ.ಸಿ.ನಾಗೇಶ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಟ್ಟು 9 ಟೈಟಲ್‌ಗಳಿಗಾಗಿ ಸ್ಪರ್ಧೆ ನಡೆಯಿತು. ಲಿಟಲ್ ಪ್ರಿನ್ಸೆಸ್ ಟೈಟಲ್ ವಿನ್ನರ್ ಆಗಿ ಧನ್ವಿತ ಅರ್ಜುನ್, ಲಿಟಲ್ ಪ್ರಿನ್ಸ್ ಟೈಟಲ್ ವಿನ್ನರ್ ಆಗಿ ಉದಿತ್ ಹೊರಹೊಮ್ಮಿದರು ಎಂದರು. ಅದೇ ರೀತಿಯಲ್ಲಿ ಪ್ರಿನ್ಸೆಸ್ ಆಗಿ ಅದಿತಿ ಆರ್ಯ, ಪ್ರಿನ್ಸ್ ಆಗಿ ಸಾಗರ್, ಮಾಮ್ ಅಂಡ್ ಡಾಟರ್ ಆಗಿ ಪದ್ಮಶ್ರೀ ಹಾಗೂ ಕಾರುಣ್ಯ ಉಡುಪ, ಮಿಸ್ ಟೀನ್ ಆಗಿ ಭವಾನಿ ಕೀರ್ತನಾ, ಮಿಸ್ಟರ್ ಟೀನ್ ಆಗಿ ರಾಹುಲ್, ಮಿಸ್ ಆಗಿ ಡಿ.ಎಸ್. ಸುಶ್ಮಿತಾ, ಮಿಸ್ಟರ್ ಆಗಿ ಅಭಿಷೇಕ್, ಮ್ಯಾರಿಡ್ ವುಮನ್ ಆಗಿ ಭಾವನಗೌಡ ಹೊರಹೊಮ್ಮಿದರು ಎಂದರು. ಫ್ಯಾಷನ್ ಶೋ ಕೋರಿಯೋಗ್ರಾಫರ್ ಶಿವಾನಿ ಸೇರಿದಂತೆ ವಿವಿಧ ಟೈಟಲ್ ವಿನ್ನರ್‌ಗಳು ಗೋಷ್ಠಿಯಲ್ಲಿದ್ದರು.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

22.8.2023 ಮಂಗಳವಾರ, ಮಳೆ ನಕ್ಷತ್ರ: ಮಖ 17.08.2023ರಿಂದ 30.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ,
ಶುಕ್ಲ ಪಕ್ಷ, ತಿಥಿ: ಷಷ್ಠಿ ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ, ಲೇಖನ ಮತ್ತು ಪ್ರಸ್ತುತಿ-ಟಿ.ಎಸ್.ಗೋಪಾಲ್, 6.40 ಪದಸಂಸ್ಕೃತಿ, ಪ್ರಸ್ತುತಿ-ಕೆ.ಎಲ್.ಪದ್ಮಿನಿ ಹೆಗಡೆ, 9.05 ವಸುದೈವ ಕುಟುಂಬಕಂ-ಭಾರತ ಜಿ-20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಪಿ.ಗುರುಪ್ರಸಾದ್-ಸ್ಯಾಕ್ಸೋಫೋನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ-ಸುಧಾ ಮಧುಸೂದನ್, 12.45 ಭಾಷಾ ಸಾಮ್ಯದ ಶೋಧಕ್ಕೆ ಹೊಸ ಸೂತ್ರಗಳು-ಯಶಸ್ವಿನಿ ಹೆಗಡೆ ಅವರೊಂದಿಗೆ ಸಂದರ್ಶನ, ಸಂದರ್ಶಕರು-ದಿವಾಕರ ಹೆಗಡೆ, 1.20 ಭಾವಗೀತೆಗಳು-ಕೆ.ಆರ್.ಸುಬ್ರಹ್ಮಣ್ಯ, ರತ್ನಮಾಲಾ ಪ್ರಕಾಶ್, ಅರ್ಚನಾ ಉಡುಪ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಎಸ್.ರಾಕೇಶ್-ವೇಣುವಾದನ, 4.00 ಕಥಾ ಕಾಲಕ್ಷೇಪ, 'ಕಿರಾತಾರ್ಜುನ' ವಿದ್ವಾನ್ ಆರ್.ಗುರುರಾಜುಲು ನಾಯ್ಡು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ-ವ್ಯವಸಾಯದ ಅನುಭವ ಹಂಚಿಕೊಳ್ಳುತ್ತಾರೆ ಬಿ.ಎಸ್.ರಮಾನಂದ, 9.30 ಡಾ.ಡಿ.ದೇವೇಂದ್ರಪ್ಪ-ಜಲತರಂಗ್, 10.00 ಗಮಕ ವ್ಯಾಖ್ಯಾನ, ವಾಚನ-ಶ್ರೀಲಕ್ಷ್ಮಿ, ವ್ಯಾಖ್ಯಾನ-ನಿರಂಜನ್

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಬೆಳಗ್ಗೆ 6ರಿಂದ ಪುಣ್ಯಾಹ, ಹೋಮ, ಶ್ರೀಥಕ್ಕೆ ಬಲಿಪೂಜೆ, ಶ್ರೀ ಗಂಗಾಪೂಜೆ, ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರಸ್ವಾಮಿಗೆ ತೈಲಾಭಿಷೇಕ, ಶ್ರೀ ಗಣಪತಿ ಪೂಜೆ, ಶ್ರೀ ರುದ್ರಕಳಶ ಸ್ಥಾಪನೆ ಪೂರ್ವಕ, ಮಹಾರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಬೆಳಗ್ಗೆ 10ಕ್ಕೆ ಮಂಟೇಸ್ವಾಮಿ ದೇವಸ್ಥಾನದಿಂದ ವೇದಘೋಷ, ಮಂಗಳವಾದ್ಯ, ನಂದೀಧ್ವಜ ಕರಡಿ ಮೇಳದೊಂದಿಗೆ ಮಹಾರಥೋತ್ಸವ, ಉದ್ಘಾಟನೆ : ಶ್ರೀ ಶಿವಬಸವಸ್ವಾಮೀಜಿ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್, ಬಿಜೆಪಿ ಮುಖಂಡ ಎಸ್.ಎ. ಅಶೋಕ್, ಸ್ಥಳ: ಟ್ರಸ್ಟ್ ಆವರಣ, ಕೆ.ಆರ್. ಮೊಹಲ್ಲಾ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು ನಿಸರ್ಗ, ಲಯನ್ಸ್ ಕ್ಲಬ್ ಆಫ್ ಮಯೂರಿ, ಲಿಯೋ ಕ್ಲಬ್ ಆಫ್ ಮೈಸೂರು ಯರೀಶ್, ಮೈಸೂರು ಡಿಸ್ಟ್ರಿಕ್ಟ್ ಡೆಫ್ ಅಸೋಸಿಯೇಷನ್ :** ಉಚಿತ ಅಕ್ಯೂಪ್ರೆಶರ್, ಸುಜೋಕ್ ಮ್ಯಾಗ್ನೆಟ್ ಮತ್ತು ವೈಬ್ರೇಷನ್ ತೆರಪಿ ಚಿಕಿತ್ಸೆ, ಸ್ಥಳ: ರಾಹುಲ್ ಕನ್ವೆನ್ಷನ್ ಹಾಲ್, ವಿಶ್ವೇಶ್ವರನಗರ, ಬೆಳಗ್ಗೆ 8ರಿಂದ ಮಧ್ಯಾಹ್ನ 12 ಗಂಟೆವರೆಗೆ, ಸಂಜೆ 4ರಿಂದ 8 ರವರೆಗೆ.

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ-2023, ಸ್ಥಳ: ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ.

■ **ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್:** ಮಂಡಿ ಮೊಹಲ್ಲಾದ 12 ಒಕ್ಕೂಟಗಳ ಪದಾಧಿಕಾರಿಗಳ ಪದಗ್ರಹಣ ಸಮಾರಂಭ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಅಧ್ಯಕ್ಷತೆ: ನಗರ ಪಾಲಿಕೆ ಮಾಜಿ ಸದಸ್ಯ ಎಂ. ಶಿವಣ್ಣ, ಮುಖ್ಯ ಅತಿಥಿಗಳು : ಬಿ. ಜಯರಾಮ್ ನೆಲ್ಲಿತ್ತಾಯ, ಶ್ರೀಮತಿ ವಿ.ಡಿ. ಮಮತಾ, ಡಾ. ಪಿ.ಸಿ. ಕುಮಾರಸ್ವಾಮಿ, ಎಂ. ಲಕ್ಷ್ಮಣ್, ಹೆಚ್.ವಿ. ರಾಜೀವ್, ಶ್ರೀಮತಿ ಸ್ಮಿತಾ ದೇವಯ್ಯ, ಶ್ರೀಮತಿ ನಂದಿನಿ ಶೇಟ್, ಪಾಲಿಕೆ ಸದಸ್ಯ ರಮೇಶ್, ಸ್ಥಳ: ಬಿಕೆಪಿ ಕನ್ವೆನ್ಷನ್ ಹಾಲ್ ಗೀತಾಮಂದಿರ್ ರೋಡ್, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ :** ಭಾರತದಲ್ಲಿ ಬುಡಕಟ್ಟು ಪರಿವರ್ತನೆ: ಸಮಸ್ಯೆಗಳು ಮತ್ತು ಸವಾಲುಗಳು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ನಿವೃತ್ತ ಪ್ರಾಧ್ಯಾಪಕ ಪ್ರೊ. ಹೆಚ್.ಕೆ. ಭಟ್, ಸಮಾರೋಪ ನುಡಿ : ಫೋಕ್‌ಲ್ಯಾಂಡ್ ಐಸಿಎಫ್‌ಸಿ ಸಂಸ್ಥಾಪಕ ಅಧ್ಯಕ್ಷ ಡಾ. ಜಯರಾಜನ್, ಮುಖ್ಯ ಅತಿಥಿಗಳು : ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ. ಕೆ.ಎಂ. ಮೇತ್ರಿ, ಸ್ಥಳ: ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಸಂಜೆ 4.30ಕ್ಕೆ.

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ, ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ ಕುರಿತು ಪ್ರವಚನ, ವಾಚನ: ನಿವೃತ್ತ ಕಾರ್ಯಪಾಲಕ ಅಭಿಯಂತರ ವಿದ್ವಾನ್ ಕೃ. ರಾಮಚಂದ್ರ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಸನಾತನ ಸಭಾ, ಮೈಸೂರು:** ರಾಮಾಯಣ ಪ್ರವಚನ ಮಾಲಿಕೆ ಏಳನೇ ಸರಣಿ, ವಿದ್ವಾನ್ ಗ.ನಾ. ಭಟ್ಟ ಅವರಿಂದ ಶ್ರೀ ಮದ್ವಾಲ್ಮೀಕಿ ರಾಮಾಯಣದ ಕಿಷ್ಕಿಂಧಾಕಾಂಡ ಕುರಿತು ಪ್ರವಚನ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಕೆ.ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6.30ರಿಂದ 8ರವರೆಗೆ.

ಮೈಸೂರು ಮಿತ್ರ



# ಅನಧಿಕೃತ ಜಾಹೀರಾತು, ಫ್ಲೆಕ್ಸ್ ಅಳವಡಿಸಿದರೆ ಕ್ರಮ ಕೈಗೊಳ್ಳಿ



ಸಂದೇಶಸ್ವಾಮಿ

ಮೈಸೂರು, ಆ.21 (ಎಸ್‌ಪಿಎನ್)– ಮೈಸೂರಿನಲ್ಲಿ ಅನಧಿಕೃತ ಜಾಹೀರಾತು ಮತ್ತು ಫ್ಲೆಕ್ಸ್ ಅಳವಡಿಸಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ, ನಗರಪಾಲಿಕೆ ಆಯುಕ್ತರಿಗೆ ಮಾಜಿ ಮೇಯರ್ ಎಸ್. ಸಂದೇಶಸ್ವಾಮಿ (ಎಸ್.ಸತೀಶ್) ಪತ್ರ ಬರೆದಿದ್ದಾರೆ. ಒಂದು ಕಡೆ ಮೈಸೂರು ನಗರದಲ್ಲಿ ಯಾವುದೇ ಜಾಹೀರಾತು ಅಳವಡಿಸಲು ಅವಕಾಶ ಇಲ್ಲ ಎಂದು ಆರ್‌ಟಿಐ ಕಾರ್ಯಕರ್ತರಿಗೆ ಪಾಲಿಕೆ ಅಧಿಕಾರಿಗಳು ಮಾಹಿತಿ ನೀಡುತ್ತಾರೆ. ಮತ್ತೊಂದು ಕಡೆ ನಗರದ ತುಂಬಾ ಅನಧಿಕೃತ ಫ್ಲೆಕ್ಸ್‌ಗಳ ಕಾರುಬಾರು ಜೋರಾಗಿದೆ. ಇದರ ವಿರುದ್ಧ ಕ್ರಮ ಕೈಗೊಳ್ಳಲು ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ, ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.

ಮೈಸೂರು ನಗರ ಪಾರಂಪರಿಕ ನಗರ ಎನ್ನುವ ಕಾರಣಕ್ಕೆ ಈ ಹಿಂದೆಯೇ ನಗರದ ಹೃದಯ ಭಾಗದಲ್ಲಿ ಯಾವುದೇ ಹೋರ್ಡಿಂಗ್ ಅಥವಾ ಜಾಹೀರಾತು, ಫ್ಲೆಕ್ಸ್ ಹಾಕದಂತೆ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಆದರೂ ಈ ನಿರ್ಣಯಕ್ಕೆ ಕಿಮ್ಮತ್ತು ನೀಡದಿರುವುದು ವಿಷಾದದ ಸಂಗತಿ ಎಂದು ಪತ್ರದಲ್ಲಿ ಉಲ್ಲೇಖ ಮಾಡಿದ್ದಾರೆ.

ವಿಶ್ವವಿಖ್ಯಾತಿ ಪಡೆದಿರುವ ಮೈಸೂರು ಅರಮನೆ ಸುತ್ತಮುತ್ತ ರಾಜ–ಮಹಾರಾಜರ ಪ್ರತಿಮೆಗಳಿವೆ. ಇಲ್ಲಿನ ವೃತ್ತಗಳಲ್ಲಿ ಫ್ಲೆಕ್ಸ್ ಬೋರ್ಡ್‌ಗಳು ರಾರಾಜಿಸುತ್ತಿವೆ. ಈ ಜಾಹೀರಾತು ಫಲಕ ಅಳವಡಿಸಿರುವವರು ಮಹಾನಗರಪಾಲಿಕೆಯಿಂದ ಯಾವುದೇ ಅನುಮತಿ ಪಡೆದಿಲ್ಲ. ಶುಲ್ಕ ಪಾವತಿಸುವ ಗೋಜಿಗೆ ಹೋಗಿಲ್ಲ. ಸರ್ಕಾರಿ ಇಲಾಖೆಗಳ ಜಾಹೀರಾತುಗಳೂ ಹೊರತಾಗಿಲ್ಲ. ಇದರಿಂದ ಪಾಲಿಕೆ ಬೊಕ್ಕಸಕ್ಕೂ ಲಕ್ಷಾಂತರ ರೂ ನಷ್ಟವಾಗುತ್ತಿದೆ ಎಂದು ಸಂದೇಶ್‌ಸ್ವಾಮಿ ಪತ್ರದಲ್ಲಿ ವಿವರಿಸಿದ್ದಾರೆ.

ಸಾರ್ವಜನಿಕ ಸ್ಥಳಗಳ ವಿರೂಪ (ವಿರೂಪ ತಡೆಗಟ್ಟುವಿಕೆ) ಕಾಯಿದೆ 1981ರ ಕಲಂ 3, 5 ಹಾಗೂ 8ರ ಪ್ರಕಾರ ನಗರ ವಿರೂಪಗೊಳಿಸಿದವರ ವಿರುದ್ಧ ಪೊಲೀಸ್ ಅಧಿಕಾರಿಗಳು ವಾರೆಂಟ್ ಇಲ್ಲದೇ ದಸ್ತಗಿರಿ ಮಾಡುವ ಅವಕಾಶವಿದ್ದರೂ ಬಳಸಿಕೊಳ್ಳುತ್ತಿಲ್ಲ. ಅಲ್ಲದೆ, ಸರ್ಕಾರಿ ಸಂಸ್ಥೆಗಳು ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ವೃತ್ತಪತ್ರಿಕೆ, ಎಲೆಕ್ಟ್ರಾನಿಕ್ ಮಾಧ್ಯಮ, ಸೋಷಿಯಲ್ ಮೀಡಿಯಾಗಳನ್ನು ಸರಿಯಾಗಿ ಬಳಕೆ ಮಾಡುತ್ತಿಲ್ಲ ಎಂದು ಆರೋಪಿಸಿದ್ದಾರೆ. ರಾಜಧಾನಿ ಬೆಂಗಳೂರಿನಲ್ಲಿ ಇದೇ ರೀತಿಯ ಸಮಸ್ಯೆ ಇತ್ತು. ಹೈಕೋರ್ಟ್ ಮಧ್ಯ ಪ್ರವೇಶಿಸಿ ಬಿಬಿಎಂಪಿ ಆಯುಕ್ತರಿಗೆ ಚಾಟಿ ಬೀಸಿತ್ತು. ಇದರಿಂದ ಎಚ್ಚೆತ್ತುಕೊಂಡು ಅಧಿಕಾರಿಗಳು ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲು ಮುಂದಾಗುತ್ತಿದ್ದಾರೆ. ಮೈಸೂರು ನಗರದಲ್ಲಿಯೂ ಇದೇ ರೀತಿ ಮಾಡಬೇಕಾಗಿದೆ ಎಂದು ಒತ್ತಾಯಿಸಿದ್ದಾರೆ.

# ಕಲೆಯಲ್ಲಿ ಮಗ್ನರಾದಾಗ ಏಕಾಗ್ರತೆ ಹೆಚ್ಚುತ್ತದೆ





ಮೈಸೂರು, ಆ.21(ಎಸ್‌ಪಿಎನ್)– ಮಕ್ಕಳಿಗೆ ಕಲೆಗಳ ಬಗ್ಗೆ ಚಿಕ್ಕದಿನಿಂದಲೇ ಆಸಕ್ತಿ ಮೂಡಿಸಿದರೆ, ಮುಂದಿನ ದಿನಗಳಲ್ಲಿ ಉತ್ತಮ ಜೀವನ ರೂಢಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಉದ್ಯಮಿ ಜಿ.ಎಂ.ಮಂಜುನಾಥ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರ ರಮಾಗೋವಿಂದ ರಂಗಮಂದಿರದಲ್ಲಿ ಹೊರೈಝನ್ ಸಂಸ್ಥೆಯ ಡ್ರಮ್ ತರಬೇತಿ ಶಿಬಿರದ ಸಮಾರೋಪದಲ್ಲಿ ಭಾಗವಹಿಸಿ ಮಾತನಾಡಿದರು. ಕಳೆದ ಏಳು ವರ್ಷಗಳಿಂದ ಹೊರೈಝನ್ ವಿದ್ಯಾರ್ಥಿಗಳನ್ನು ಹತ್ತಿರದಿಂದ ನೋಡುತ್ತಿದ್ದೇನೆ. ಎಂತಹ ತುಂಟ ಮಗುವಾದರೂ ಕಲೆಯಲ್ಲಿ ಮಗ್ನರಾಗಿದ್ದಾಗ ಅವರ ಏಕಾಗ್ರತೆ ಹೆಚ್ಚಾಗುತ್ತದೆ. ಹಾಗಾಗಿ ಪೋಷಕರು ಓದಿನ ಜೊತೆಗೆ ಯಾವುದಾದರ ಕಲೆಗಳಲ್ಲಿ ಮಕ್ಕಳನ್ನು ತೊಡಗಿಸುವ ಅವಶ್ಯಕತೆ ಇದೆ ಎಂದು ಸಲಹೆ ನೀಡಿದರು. ನಾನು ಕೈಗಾರಿಕಾ ಕ್ಷೇತ್ರದಲ್ಲಿದ್ದೇನೆ. ಪ್ರತಿದಿನ ಕೈಗಾರಿಕೋದ್ಯಮಗಳಿಗೆ ಒತ್ತಡ ಇರುತ್ತದೆ. ಕಲೆಯಲ್ಲಿ ತೊಡಗಿಸಿಕೊಂಡಿರುವ ಕಲಾವಿದರಾದ ಶ್ರೀಕಂಠಸ್ವಾಮಿ ಹಾಗೂ ಜೊ ಜೆಕಬ್ ಅವರು ಸದಾ ಹಸ್ಮುಖಿಗಳಾಗಿರುತ್ತಾರೆ. ಅವರನ್ನು ನಾನು ದಿನನಿತ್ಯ ಹತ್ತಿರದಿಂದ ನೋಡುತ್ತಿದ್ದೇನೆ. ಅವರು ಎಂದಿಗೂ ಒತ್ತಡ ತರಿಸಿಕೊಂಡ ದಿನಗಳನ್ನು ನೋಡಲೇ ಇಲ್ಲ ಎಂದು ತಿಳಿಸಿದರು.

ಡ್ರಮ್ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿವೆ ಎಂದು ಹಿರಿಯ ಕಲಾವಿದರಾದ ಜೊ ಜೆಕಬ್ ಹೇಳಿದರು. ಈ ವೇಳೆ ಡ್ರಮ್ ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದ 25ಕ್ಕೂ ಹೆಚ್ಚು ಮಕ್ಕಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

# ಭಾರತದ ಅತ್ಯಂತ ಹಳೆಯ ದೇಶೀಯ ಏಷ್ಯಾಟಿಕ್ ಆನೆ ಇನ್ನಿಲ್ಲ



**ಸೋನಿತ್‌ಪುರ:** ಅಸ್ಸಾಂನಲ್ಲಿ ಭಾರತದ ಅತ್ಯಂತ ಹಳೆಯ ದೇಶೀಯ ಏಷ್ಯಾಟಿಕ್ ಆನೆ ಸೋಮವಾರ ಸಾವನ್ನಪ್ಪಿದೆ. ಆನೆಯ ವಯಸ್ಸು 89 ವರ್ಷ ಎಂದು ಅಂದಾಜಿಸಲಾಗಿದೆ. ವಯೋಸಹಜ ಸಮಸ್ಯೆಗಳಿಂದಾಗಿ ಬಿಜುಲಿ ಪ್ರಸಾದ್ ಎಂಬ ಭವ್ಯ ಜಂಬೋ ಬೆಳಗಿನ ಜಾವ 3.30ರ ಸುಮಾರಿಗೆ ದಿ ವಿಲಿಯಮ್ಸನ್ ಮಾಗೊರ್ ಗ್ರೂಪ್‌ನ ಬೆಹಾಲಿ ಟೀ ಎಸ್ಟೇಟ್‌ನಲ್ಲಿ ಕೊನೆಯುಸಿರೆಳೆದಿದೆ. ಬಿಜುಲಿ ಪ್ರಸಾದ್‌ರೊಂದಿಗೆ ಒಡನಾಟ ಹೊಂದಿರುವ ಪ್ರಾಣಿ ಪ್ರಿಯರು, ಚಹಾ ತೋಟದ ಕೆಲಸಗಾರರು ಮತ್ತು ಸ್ಥಳೀಯರು ಸೇರಿದಂತೆ ಅನೇಕ ಜನರು ಆನೆ ಸಾವಿಗೆ ಸಂತಾಪ ಸೂಚಿಸಿದ್ದಾರೆ.

# ಆ.27, ಸೆಲೆಬ್ರೇಷನ್ ಮೈಸೂರು ಮ್ಯಾರಥಾನ್

ಮೈಸೂರು, ಆ. 21(ಆರ್‌ಕೆ)– ಲೈಫ್ ಈಸ್ ಕಾಲಿಂಗ್, ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಕಂಪನಿಯು ಆಗಸ್ಟ್ 27ರಂದು 13ನೇ ಎಡಿಷನ್ ಮೈಸೂರು ಮ್ಯಾರಥಾನ್ ಕಾರ್ಯಕ್ರಮವನ್ನು ಏರ್ಪಡಿಸಿದೆ.

ಭಾನುವಾರ ಮುಂಜಾನೆ 5.30 ಗಂಟೆಗೆ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ 30 ಕಿ.ಮೀ. ಓಟ, 21 ಕಿ.ಮೀ. ಹಾಫ್ ಮ್ಯಾರಥಾನ್ ಹಾಗೂ 10 ಕಿ.ಮೀ. ಓಟ ಒಳಗೊಂಡ ಮ್ಯಾರಥಾನ್‌ಗೆ ಚಾಲನೆ ನೀಡಲಾಗುವುದು. ಅದೇ ವೇಳೆ ನಡೆಯುವ 30 ಕಿ.ಮೀ, 21 ಕಿ.ಮೀ, ಹಾಫ್ ಮ್ಯಾರಥಾನ್ ಮತ್ತು 10 ಕಿ.ಮೀ. ಓಟದ ಸ್ಪರ್ಧೆಗಳೂ ನಡೆಯಲಿದ್ದು, ದೇಶಾದ್ಯಂತ ಸ್ಪರ್ಧಿಗಳು ಭಾಗವಹಿಸುವರು. ಕರ್ನಾಟಕ ರಾಜ್ಯದಾದ್ಯಂತ ಕ್ರೀಡಾಸಕ್ತರನ್ನು ಪ್ರೋತ್ಸಾಹಿಸಲು ನಾನ್–ಕಾಂಪಿಟೇಟಿವ್ ವರ್ಗದಲ್ಲಿ 5 ಕಿ.ಮೀ. ಸೆಲೆಬ್ರೇಷನ್ ಫನ್ ರನ್/ನಡಿಗೆಯನ್ನೂ ಏರ್ಪಡಿಸಲಾಗಿದೆ.

ಭಾಗವಹಿಸಲಿಚ್ಛಿಸುವವರು www.eventzalley.comಗೆ ಲಾಗ್‌ಆನ್ ಆಗಬಹುದು ಅಥವಾ lifeiscalling-sports.comಗೆ ಇ–ಮೇಲ್ ಮಾಡಬಹುದು. ಮಾಹಿತಿಗೆ ಮೊ. 96066–22006ಗೆ ಕರೆ ಮಾಡುವಂತೆ ಕೋರಲಾಗಿದೆ.

# ಹೋರಾಟಗಾರ ಮಂಟೇಲಿಂಗಯ್ಯ ನಿಧನ

ಮೈಸೂರು,ಆ.21(ಬಿಎಲ್‌ಯು)–ಮೈಸೂರಿನ ಸಾಮಾಜಿಕ ಹೋರಾಟಗಾರ, ವಿಚಾರವಾದಿ ಮಂಟೇಲಿಂಗಯ್ಯ(75) ಅವರು ಇಂದು ನಿಧನರಾದರು.



ಮೈಸೂರಿನ ನಾರ್ತ್ ಈಸ್ಟ್ ಎನ್.ಆರ್.ಮೊಹಲ್ಲಾದ ತಮ್ಮ ನಿವಾಸದಲ್ಲಿ ಇಂದು ಸಂಜೆ 6.30 ಗಂಟೆ ಸಮಯದಲ್ಲಿ ಕುಟುಂಬ ಸದಸ್ಯರ ಜೊತೆ ಮಾತನಾಡುತ್ತಾ ಕುಳಿತಿದ್ದಾಗ ಇದ್ದಕ್ಕಿದ್ದಂತೆ ಅಸ್ವಸ್ಥರಾದ ಮಂಟೇಲಿಂಗಯ್ಯ ಅವರನ್ನು ಕೂಡಲೇ ನಾರಾಯಣ ಹೃದಯಾಲಯಕ್ಕೆ ಕರೆದೊಯ್ಯಲಾಯಿತು. ಆದರೆ ಮಾರ್ಗಮಧ್ಯೆ ಅವರು ನಿಧನ ಹೊಂದಿದ್ದರು. ಲೋ ಬಿಪಿಯಿಂದ ಹೃದಯಾಘಾತವಾಗಿ ನಿಧನ ಹೊಂದಿರಬಹುದು ಎಂದು ವೈದ್ಯರು ತಿಳಿಸಿದ್ದಾರೆಂದು ಮೂಲಗಳು ತಿಳಿಸಿವೆ.

ಅವರ ಮನೆಯಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಹೋರಾಟಗಾರರಾಗಿದ್ದ ಮಂಟೇಲಿಂಗಯ್ಯ ಅವರ ಅಂತಿಮ ದರ್ಶನ ಪಡೆಯಲು ನೂರಾರು ಜನರು ಆಗಮಿಸುತ್ತಿದ್ದಾರೆ. ನಾಳೆ (ಮಂಗಳವಾರ) ಮಧ್ಯಾಹ್ನದ ವೇಳೆಗೆ ಮೈಸೂರಿನಲ್ಲಿ ಅವರ ಅಂತ್ಯ ಸಂಸ್ಕಾರ ನೆರವೇರಲಿದೆ ಎಂದು ಹೇಳಲಾಗಿದೆ.

### ಪಡುವಾರಹಳ್ಳಿ ಈರಣ್ಣ



ಮೈಸೂರಿನ ಪಡುವಾರಹಳ್ಳಿ ನಿವಾಸಿ ಈರಣ್ಣ (65) ಇಂದು ಬೆಳಗ್ಗೆ 8 ಗಂಟೆಗೆ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ ಸುಧಾ, ಪುತ್ರ ವಿಜಯಕುಮಾರ್, ಪುತ್ರಿಯರಾದ ಆಶಾ, ಅಶ್ವಿನಿ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಕಠಿಣ ಕ್ರಮ ಕೈಗೊಂಡು ರೌಡಿಗಳ ಅಟ್ಟಹಾಸ ಮಟ್ಟ ಹಾಕಿ

## ಮೈಸೂರು ನಗರ, ಜಿಲ್ಲಾ ಪೊಲೀಸ್ ಅಧಿಕಾರಿಗಳಿಗೆ ಎಡಿಜಿಪಿ ಆರ್. ಹಿತೇಂದ್ರ ತಾಕೀತು



ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಅಡಿಷನಲ್ ಡಿಜಿಪಿ ಆರ್.ಹಿತೇಂದ್ರ ಅಪರಾಧ ಪ್ರಕರಣಗಳ ಸಂಬಂಧ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ನಗರ ಪೊಲೀಸ್ ಆಯುಕ್ತ ರಮೇಶ್, ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್.ಜಾಹ್ನವಿ, ಮಾರುತಿ ಚಿತ್ರದಲ್ಲಿದ್ದಾರೆ.

ಮೈಸೂರು,ಆ.21(ಆರ್‌ಕೆ)–ರೌಡಿಗಳ ಅಟ್ಟಹಾಸವನ್ನು ಮಟ್ಟ ಹಾಕಲೇಬೇಕು ಎಂದು ಕಾನೂನು ಮತ್ತು ಸುವ್ಯವಸ್ಥೆ ಅಡಿಷನಲ್ ಡಿಜಿಪಿ ಆರ್.ಹಿತೇಂದ್ರ ಪೊಲೀಸ್ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರು ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಅಪರಾಧ ಪ್ರಕರಣಗಳ ಸಂಬಂಧ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಹಳೇ ಪ್ರಕರಣಗಳ ತನಿಖೆ ಪೂರ್ಣಗೊಳಿಸಿ ಇತ್ಯರ್ಥಗೊಳಿಸಬೇಕು. ದೀರ್ಘಾವಧಿವರೆಗೆ ಬಾಕಿ ಉಳಿಸಿಕೊಳ್ಳಬಾರದು ಎಂದರು.

ರೌಡಿಗಳ ಚಟುವಟಿಕೆ ಮೇಲೆ ತೀವ್ರ ನಿಗಾ ವಹಿಸಿ, ಅವರ ಅಟ್ಟಹಾಸವನ್ನು ಮಟ್ಟ ಹಾಕಬೇಕು. ರೌಡಿಗಳ ವಿರುದ್ಧ ದಾಖಲಾಗಿರುವ ಪ್ರಕರಣಗಳಲ್ಲಿ ಸಾಕ್ಷಿದಾರರಿಗೆ ರಕ್ಷಣೆ ನೀಡಿ ಸರಿಯಾಗಿ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಪುನರಾವರ್ತಿತ ಅಪರಾಧಕ್ಕೆ ರೌಡಿಗಳಿಗೆ ಜಾಮೀನು ಸಿಗದಂತೆ ನೋಡಿಕೊಳ್ಳಬೇಕು ಎಂದು ಎಡಿಜಿಪಿ ಸೂಚನೆ ನೀಡಿದರು.

ರಿಯಲ್ ಎಸ್ಟೇಟ್, ಬಡ್ಡಿ ಲೇವಾದೇವಿ ಹಾಗೂ ಇನ್ನಿತರ ಕಾನೂನು ಬಾಹಿರ ವ್ಯವಹಾರಗಳಲ್ಲಿ ಭಯದ ವಾತಾವರಣ ಉಂಟು ಮಾಡುವ, ಬೆದರಿಕೆ ಹಾಕುವ ಪುಡಿರೌಡಿಗಳ ಚಟುವಟಿಕೆಗೆ ಕಡಿವಾಣ ಹಾಕಿ. ಅಂತಹ ಸಮಾಜಘಾತುಕ ಶಕ್ತಿಗಳು ಬೆಳೆಯದಂತೆ ಎಚ್ಚರ ವಹಿಸಿ. ರೌಡಿಗಳಿಂದ ಅಮಾಯಕರ ನೆಮ್ಮದಿ ಹಾಳಾಗಬಾರದು ಎಂದು ಸಲಹೆ ನೀಡಿದರು.

ನೊಂದವರು ಸಮಸ್ಯೆಗೆ ಪರಿಹಾರ ಕೋರಿ ಪೊಲೀಸ್ ಠಾಣೆಗೆ ಬರುವವರ ಸಮಸ್ಯೆಯನ್ನು ಸಾವಧಾನದಿಂದ ಆಲಿಸಿ, ಅರ್ಜಿ ಅಥವಾ ದೂರು ಪಡೆದು ವಿಚಾರಣೆ ನಡೆಸಿ. ತನಿಖೆಯಲ್ಲಿ ಸುಳ್ಳು ಆರೋಪ, ದೂರು ಎಂಬುದು ನಿಮಗೆ ದೃಢಪಟ್ಟರೆ ಮಾತ್ರ ಇತ್ಯರ್ಥಗೊಳಿಸಬೇಕೇ ಹೊರತು, ಯಾವುದೋ ಒತ್ತಡ, ಆಮಿಷಕ್ಕೆ ಬಲಿಯಾಗಿ ನಿಜವಾದ ಅಪರಾಧಿ ಕಾನೂನಿನಿಂದ ನುಣುಚಿಕೊಳ್ಳುವಂತೆ ಮಾಡಬೇಡಿ ಎಂದು ಅವರು ಪೊಲೀಸ್ ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮೂಲಕ ಸಾರ್ವಜನಿಕರಲ್ಲಿ ಪೊಲೀಸರ ಮೇಲಿರುವ ವ್ಯತಿರಿಕ್ತ ಭಾವನೆಯನ್ನು ಹೋಗಲಾಡಿಸಬೇಕು. ಹಾಗೆಂದು ಸಮಾಜಘಾತುಕರು, ಅಪರಾಧವೆಸಗುವವರೊಂದಿಗೆ ಸ್ನೇಹ ಬೆಳೆಸಬೇಕೆಂದಲ್ಲ. ಒಳ್ಳೆಯವರು, ಸಜ್ಜನರ ಮಾನ, ಪ್ರಾಣ, ಆಸ್ತಿ–ಪಾಸ್ತಿ ರಕ್ಷಿಸುವುದು ನಮ್ಮ ಜವಾಬ್ದಾರಿ ಎಂದು ಹಿತೇಂದ್ರ ಪೊಲೀಸ್ ಅಧಿಕಾರಿಗಳಿಗೆ ಇದೇ ವೇಳೆ ನೀತಿಪಾಠ ಹೇಳಿದರು.

ರಾತ್ರಿ–ಹಗಲು ಬೀಟ್ ವ್ಯವಸ್ಥೆಯನ್ನು ಪ್ರಬಲಗೊಳಿಸಿ ನಮ್ಮ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿ, ಮುಂಜಾಗ್ರತಾ ಕ್ರಮ ವಹಿಸುವ ಮೂಲಕ ಸಂಭವಿಸಬಹುದಾದ ಅಪಾಯ, ಅವಘಡವನ್ನು ತಪ್ಪಿಸಿ ಶಾಂತಿ–ಸುವ್ಯವಸ್ಥೆ ಕಾಪಾಡುವ ಮೂಲಕ ನಾಗರಿಕರಿಗೆ ರಕ್ಷಣೆ ನೀಡಬೇಕೆಂದು ಎಡಿಜಿಪಿ ನುಡಿದರು.

ಬೆಳಗ್ಗೆ 11ರಿಂದ ಮಧ್ಯಾಹ್ನ 1 ಗಂಟೆವರೆಗೆ ನಡೆದ ಸಭೆಯಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ, ಮಾರುತಿ, ಎಲ್ಲಾ ಉಪವಿಭಾಗಗಳ ಎಸಿಪಿಗಳು ಹಾಗೂ ಎಲ್ಲಾ ಪೊಲೀಸ್ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಉಪಸ್ಥಿತರಿದ್ದರು. ಮಧ್ಯಾಹ್ನದ ನಂತರ ಎಸ್ಪಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಪೊಲೀಸ್ ಅಧಿಕಾರಿಗಳೊಂದಿಗೆ ಅಪರಾಧ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಹಿತೇಂದ್ರ ಅವರು, ನಂತರ ನಜರ್‌ಬಾದ್‌ನಲ್ಲಿರುವ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮೈಸೂರಿನಲ್ಲೇ ವಾಸ್ತವ್ಯ ಹೂಡಿದ್ದಾರೆ. ನಾಳೆ (ಆ.22) ಹಿತೇಂದ್ರ ಅವರು ಚಾಮರಾಜನಗರ ಜಿಲ್ಲೆಗೆ ಭೇಟಿ ನೀಡುವರೆಂದು ಪೊಲೀಸ್ ಮೂಲಗಳು ತಿಳಿಸಿವೆ.

## ಆಲನಹಳ್ಳಿ ಪೊಲೀಸ್ ಠಾಣೆಗೆ ಎಡಿಜಿಪಿ ಭೇಟಿ, ಪರಿಶೀಲನೆ



ಮೈಸೂರು,ಆ.21(ಆರ್‌ಕೆ)–ಮೈಸೂರಿನ ಆಲನಹಳ್ಳಿ ಪೊಲೀಸ್ ಠಾಣೆಗೆ ಕಾನೂನು–ಸುವ್ಯವಸ್ಥೆ ಎಡಿಜಿಪಿ ಆರ್.ಹಿತೇಂದ್ರ ಸೋಮವಾರ ಸಂಜೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇತ್ತೀಚೆಗೆ ನಿರ್ಮಿಸಿರುವ ಠಾಣಾ ಕಟ್ಟಡದಲ್ಲಿ ಒದಗಿಸಿರುವ ಸೌಲಭ್ಯ, ಅಪರಾಧ ಪ್ರಕರಣಗಳ ತನಿಖೆ ಸ್ಥಿತಿ–ಗತಿಗಳು, ಪೊಲೀಸರ ಕಾರ್ಯವೈಖರಿ ಬಗ್ಗೆ ಪರಿಶೀಲಿಸಿದ ಅವರು, ಇನ್ಸ್‌ಪೆಕ್ಟರ್ ಜಿ.ಎನ್. ಶ್ರೀಕಾಂತರಿಂದ ಮಾಹಿತಿ ಪಡೆದರು.

ಅದೇ ವೇಳೆ ಪೊಲೀಸ್ ಸಿಬ್ಬಂದಿಯ ಕುಂದು–ಕೊರತೆ ಆಲಿಸಿದ ಹಿತೇಂದ್ರ, ಠಾಣಾ ಸರಹದ್ದಿನಲ್ಲಿ ಯಾವುದೇ ಅಹಿತಕರ ಘಟನೆಗಳಾಗದಂತೆ ಎಚ್ಚರ ವಹಿಸಿ ಕಾನೂನು–ಸುವ್ಯವಸ್ಥೆಗೆ ಭಂಗ ಬಾರದಂತೆ ಎಚ್ಚರ ವಹಿಸಬೇಕು, ಸಾರ್ವಜನಿಕರು ಠಾಣೆಗೆ ಬಂದಾಗ ಸೌಜನ್ಯದಿಂದ ಮಾತನಾಡಿ ಸಮಸ್ಯೆ ಆಲಿಸಿ ಕಾನೂನು ವ್ಯಾಪ್ತಿಯೊಳಗೆ ಸಹಾಯ ಮಾಡಿ. ಯಾವುದೇ ಸಂದರ್ಭದಲ್ಲೂ ಅನ್ಯಾಯ, ವಂಚನೆ ಮಾಡುವ, ಸಂಘರ್ಷ ಉಂಟು ಮಾಡುವ ಸಮಾಜಘಾತುಕ ವ್ಯಕ್ತಿಗಳಿಗೆ ಬೆಂಬಲ ನೀಡದೇ ನೊಂದವರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕರ್ತವ್ಯ ನಿರ್ವಹಿಸಿ ಪೊಲೀಸ್ ಇಲಾಖೆಗೆ ಒಳ್ಳೆಯ ಹೆಸರು ತನ್ನಿ ಎಂದು ಸಲಹೆ ನೀಡಿದರು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ, ದೇವರಾಜ ಉಪವಿಭಾಗದ ಎಸಿಪಿ ಶಾಂತಮಲ್ಲಪ್ಪ ಈ ಸಂದರ್ಭ ಹಾಜರಿದ್ದರು.

# ವಿದೇಶಾಂಗ ಸಚಿವ ಜೈಶಂಕರ್ ಸೇರಿದಂತೆ 9 ರಾಜ್ಯಸಭಾ ಸದಸ್ಯರು ಪ್ರಮಾಣ ವಚನ ಸ್ವೀಕಾರ



**ನವದೆಹಲಿ:** ನೂತನ ರಾಜ್ಯಸಭೆಯ ಸದಸ್ಯರಾಗಿ ವಿದೇಶಾಂಗ ಸಚಿವ ಜೈಶಂಕರ್ ಸೇರಿದಂತೆ 9 ಮಂದಿ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು. ಸಂಸತ್ ಭವನದಲ್ಲಿರುವ ರಾಜ್ಯಸಭಾ ಸಭಾಂಗಣದಲ್ಲಿ ಸಭಾಪತಿ ಜಗದೀಪ್ ಧನಕರ್ ಪ್ರಮಾಣ ವಚನ ಬೋಧಿಸಿದರು.

ಜೈಶಂಕರ್ ಇಂಗ್ಲಿಷ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಸಭಾ ಸಂಸದರಾಗಿ ಇದು ಎರಡನೇ ಅವಧಿಯಾಗಿದೆ. ಅವರು 2019ರಲ್ಲಿ ಮೊದಲ ಬಾರಿಗೆ ಮೇಲ್ಮನೆಗೆ ಆಯ್ಕೆಯಾಗಿದ್ದರು. ಜೈಶಂಕರ್ ಅವರಲ್ಲದೆ ಬಿಜೆಪಿಯಿಂದ ಬಾಬುಭಾಯಿ ಜೆಸಂಗ್‌ಭಾಯ್ ದೇಸಾಯಿ (ಗುಜರಾತ್) ಕೇಸ್ರಿದೇವ್‌ಸಿನ್ಹ್ ದಿಗ್ವಿಜಯ್‌ಸಿನ್ಹ್ ಝಾಲಾ (ಗುಜರಾತ್) ಮತ್ತು ನಾಗೇಂದ್ರ ರೇ (ಪಶ್ಚಿಮ ಬಂಗಾಳ) ಅವರು ಪ್ರಮಾಣ ವಚನ ಸ್ವೀಕರಿಸಿದ ಇತರ ಸದಸ್ಯರಾಗಿದ್ದಾರೆ. ಇನ್ನೂ ಟಿಎಂಸಿಯಿಂದ ಡೆರೆಕ್ ಒಬ್ರಿಯನ್, ಡೋಲಾ ಸೇನ್, ಸುಖೇಂದು ಶೇಖರ್ ರೇ, ಪ್ರಕಾಶ್ ಚಿಕ್ ಬರೈಕ್ ಮತ್ತು ಸಮೀರುಲ್ ಇಸ್ಲಾಂ ಕೂಡ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.

# ಯುಎಇಯಲ್ಲಿ ಉದ್ದಿಮೆ ಸ್ಥಾಪನೆ ಸಂಬಂಧ ಮೈಸೂರಲ್ಲಿ ಸಭೆ

ಮೈಸೂರು,ಆ.21(ಆರ್‌ಕೆ)– ಯುಎಇಯಲ್ಲಿ ಉದ್ದಿಮೆ, ಕೈಗಾರಿಕೆ ಹಾಗೂ ವಾಣಿಜ್ಯ ವಹಿವಾಟು ನಡೆಸುವ ಸಂಬಂಧ ಸೈಫ್ ವಲಯ (SAIF ZONE) ಅಧಿಕಾರಿಗಳು ಇಂದು ಮೈಸೂರಲ್ಲಿ ನವ ಉದ್ದಿಮೆದಾರರೊಂದಿಗೆ ಸಭೆ ನಡೆಸಿದರು.

ಫೆಡರೇಷನ್ ಆಫ್ ಇಂಡಿಯನ್ ಎಕ್ಸ್‌ಪೋರ್ಟ್ ಆರ್ಗನೈಜೇಷನ್ (FIEO) ಸಂಸ್ಥೆಯು ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನ ಬೋರ್ಡ್ ರೂಂನಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಭಾಗವಹಿಸಿದ್ದ ಉದ್ಯಮಿ ಆಕಾಂಕ್ಷಿಗಳಿಗೆ ಯುಎಇಯ ಶಾರ್ಜಾದಲ್ಲಿ ಬೆವರೇಜಸ್, ಕೆಮಿಕಲ್ಸ್, ಮೆಟಲ್ ಅಂಡ್ ಸ್ಟೋನ್ಸ್, ಟೆಕ್ಸ್‌ಟೈಲ್ ಅಂಡ್ ಗಾರ್ಮೆಂಟ್ಸ್, ಮೆಷಿನರಿ ಅಂಡ್ ಸ್ಪೇರ್ಸ್, ಪ್ಲಾಸ್ಟಿಕ್, ಫಾರ್ಮಾ, ಆಗ್ರೋ, ಸ್ಪೈಸಸ್‌ಗಳಂತಹ ಉದ್ದಿಮೆ, ಕೈಗಾರಿಕೆ ಸ್ಥಾಪನೆಗೆ ಬೇಕಾದ ಸ್ಥಳಾವಕಾಶ, ಕಟ್ಟಡ, ವಿದ್ಯುತ್, ಪರವಾನಗಿ, ಹಣಕಾಸು ನೆರವು ಒದಗಿಸುವುದಾಗಿ ಶಾರ್ಜಾ ಸರ್ಕಾರದ ಅಧಿಕಾರಿಗಳು ಮಾಹಿತಿ ನೀಡಿದರು. ಕಾರ್ಮಿಕರು, ಮಾರುಕಟ್ಟೆ ವ್ಯವಸ್ಥೆಯನ್ನು ಒದಗಿಸಿ ಕೈಗಾರಿಕೆ ಸ್ಥಾಪಿಸಲು ಅಗತ್ಯವಿರುವ ಸಕಲ ಸೌಲಭ್ಯಗಳನ್ನೂ ಒದಗಿಸಿ ಉದ್ಯಮದ ಬೆಳವಣಿಗೆಗೆ ನೆರವು ನೀಡಲಾಗುವುದು ಎಂದು ಮೈಸೂರಿನ ಕೈಗಾರಿಕೋದ್ಯಮಿಗಳಿಗೆ ತಿಳಿಸಿದರು. ಮೈಸೂರು ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಎಂಸಿಸಿಐ) ಅಧ್ಯಕ್ಷ ಕೆ.ಬಿ.ಲಿಂಗರಾಜು, ಉಪಾಧ್ಯಕ್ಷ ಆರ್.ಆನಂದ್, ಶಾರ್ಜಾನ ಸರ್ಕಾರದ ಸೇಲ್ಸ್ ಡಿಪಾರ್ಟ್‌ಮೆಂಟ್‌ನ ವಿಷ್ಣು ಸುನಿಲ್, ಶೋಯೆಬ್ ಇಬ್ರಾಹಿಂ ಖಾಟಿಬ್, ಎಂಸಿಸಿಐ ಸದಸ್ಯ ಶಾಂಸುಂದರ್ ಹಾಗೂ ಇನ್ನಿತರರು ಸಭೆಯಲ್ಲಿ ಹಾಜರಿದ್ದರು.

# ಕೆಆರ್ ಆಸ್ಪತ್ರೆ ಸ್ಥಾನೀಯ ವೈದ್ಯಾಧಿಕಾರಿಯಾಗಿ ಡಾ.ನಯಾಜ್ ಪಾಷ ಅಧಿಕಾರ ಸ್ವೀಕಾರ



ಕೆಆರ್ ಆಸ್ಪತ್ರೆ ಆರ್‌ಎಂಓ ಆಗಿ ಡಾ.ನಯಾಜ್ ಪಾಷ (ಎಡದಿಂದ 2ನೇಯವರು) ಅಧಿಕಾರ ಸ್ವೀಕರಿಸಿದರು.

ಮೈಸೂರು,ಆ.21(ಪಿಎಂ)– ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಧೀನದ ಕೆಆರ್ ಆಸ್ಪತ್ರೆಯ ಸ್ಥಾನೀಯ ವೈದ್ಯಾಧಿಕಾರಿಯಾಗಿ (ಆರ್‌ಎಂಓ) ಡಾ.ನಯಾಜ್ ಪಾಷ ಅಧಿಕಾರ ವಹಿಸಿಕೊಂಡರು.


ಕೆಆರ್ ಆಸ್ಪತ್ರೆಯ ಸ್ಥಾನೀಯ ವೈದ್ಯಾಧಿಕಾರಿಗಳ ಕೊಠಡಿಯಲ್ಲಿ ಶನಿವಾರ ನಿರ್ಗಮಿತ ಸ್ಥಾನೀಯ ವೈದ್ಯಾಧಿಕಾರಿ ಡಾ. ಎಂ.ಎಸ್.ರಾಜೇಶ್‌ಕುಮಾರ್ ಅವರಿಂದ ಅಧಿಕಾರ ವಹಿಸಿಕೊಂಡರು. ಡಾ.ನಯಾಜ್ ಪಾಷ ಅವರು ತೀವ್ರ ಅನಾರೋಗ್ಯ ಮತ್ತು ನೋವು ನಿವಾರಿಕ ತಜ್ಞವೈದ್ಯರು.

ಇವರು ಕಳೆದ ಮೂರೂವರೆ ವರ್ಷಗಳಿಂದ ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಸ್ಥಾನೀಯ ವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಇದೀಗ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಕೆಆರ್ ಆಸ್ಪತ್ರೆಯ ಆರ್‌ಎಂಓ ಆಗಿ ಅಧಿಕಾರ ವಹಿಸಿಕೊಂಡರು. ವರ್ಗಾವಣೆಗೊಂಡಿರುವ ಡಾ. ರಾಜೇಶ್‌ಕುಮಾರ್ ಅವರು ಮುಂಬಡ್ತಿಯೊಂದಿಗೆ ಮುಂದಿನ ಸ್ಥಳ ನಿಯುಕ್ತಿಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದಾರೆ.

# ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು,ಆ.21– ಮೈಸೂರು ಜಿಲ್ಲೆ ಜವಾಹರ್ ನವೋದಯ ವಿಶ್ವವಿದ್ಯಾಲಕ್ಕೆ 2023–24ನೇ ಸಾಲಿನ 6ನೇ ತರಗತಿ ಆಯ್ಕೆ ಬಯಸುವ ಅಭ್ಯರ್ಥಿಗಳ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ದಿನಾಂಕವನ್ನು ಆ.25ರವರೆಗೆ ವಿಸ್ತರಿಸಿದ್ದು, ಆಸಕ್ತ ಅಭ್ಯರ್ಥಿಗಳು www.navodaya.gov.in ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಜವಾಹರ್ ನವೋದಯ ವಿದ್ಯಾಲಯದ ದೂ.ಸಂ:0821–297004 ಅನ್ನು ಸಂಪರ್ಕಿಸುವಂತೆ ಜವಾಹರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೈಸೂರಲ್ಲಿ ಮೂರು ದಿನಗಳ ಕಾವಾ ಮೇಳಕ್ಕೆ ಚಾಲನೆ









ಮೈಸೂರು,ಆ.21(ಎಂಟಿವೈ)– ಮೈಸೂರಿನ ಪ್ರತಿಷ್ಠಿತ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ (ಕಾವಾ) ಕಾಲೇಜಿನ ವಿದ್ಯಾರ್ಥಿಗಳಿಂದ ಮೂಡಿ ಬಂದಿರುವ ವಿವಿಧ ಕಲಾಕೃತಿಗಳ 3 ದಿನಗಳ ಪ್ರದರ್ಶನ 'ಕಾವಾ ಮೇಳ'ಕ್ಕೆ ಚಾಲನೆ ದೊರೆಯಿತು.

ಮೈಸೂರಿನ ಸಿದ್ಧಾರ್ಥನಗರದ ಹೊಸ ಜಿಲ್ಲಾಧಿಕಾರಿ ಕಚೇರಿ ಹಿಂಭಾಗವಿರುವ ಕಾವಾ ಕಾಲೇಜಿನ ಆವರಣದಲ್ಲಿ ಕುಂಚ ಕಾವ್ಯ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಕಾವಾ ಮೇಳ ಆಯೋಜಿಸಲಾಗಿದ್ದು, ಕಾವಾದ ವಿವಿಧ ವಿಭಾಗಗಳ ಅಂತಿಮ ವರ್ಷದ ವಿದ್ಯಾರ್ಥಿಗಳು ತಯಾರಿಸಿರುವ ಆಕೃತಿ, ರಚಿಸಿರುವ ಚಿತ್ರ, ತೆಗೆದಿರುವ ಛಾಯಾಚಿತ್ರ ಪ್ರದರ್ಶನದೊಂದಿಗೆ ತಮ್ಮಲ್ಲಿನ ವಿವಿಧ ಕಲೆಗಳ ಅನಾವರಣಗೊಳಿಸಿದ್ದಾರೆ. ಪ್ರತಿವರ್ಷವೂ ಕಾವಾ ವಿದ್ಯಾರ್ಥಿಗಳು ಸೇರಿ ಕಾವಾ ಮೇಳ ಆಯೋಜಿಸುತ್ತಾ ಹೊಸತನದೊಂದಿಗೆ ತಮ್ಮಲ್ಲಿರುವ ಕಲಾ ಪ್ರೌಢಿಮೆಯನ್ನು ಪ್ರದರ್ಶಿಸುತ್ತಾ ಬಂದಿದ್ದು, ಇಂದಿನಿಂದ ಮೂರು ದಿನಗಳ ಪ್ರದರ್ಶನ ಮೇಳದಲ್ಲಿ ಕಲಾಕೃತಿಗಳು ಕಣ್ಮನ ಸೆಳೆಯುತ್ತಿವೆ.

ಕಾವಾ ಆವರಣದಲ್ಲಿ ಬೆಳಗ್ಗೆ ನಡೆದ ಕಾರ್ಯಕ್ರಮದಲ್ಲಿ ಕಲಾವಿದ ಸುರೇಶ್ ಜೈರಾಮ್, ಮೇಳಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ದೃಶ್ಯ ಕಲೆಗಳು ಅಳಿವಿನಂಚಿಗೆ ದೂಡಲ್ಪಡುತ್ತಿದ್ದು, ಇವುಗಳ ರಕ್ಷಣೆಗೆ ಸರ್ಕಾರ ಗಮನಹರಿಸಬೇಕು. ಹಲವು ಕುಂದು ಕೊರತೆಗಳಿದ್ದರೂ ಕಾವಾ ತನ್ನ ವಿಶಿಷ್ಟ ಚಟುವಟಿಕೆಗಳ ಮೂಲಕವೇ ಗಮನ ಸೆಳೆಯುತ್ತಿದೆ. ಆದರೂ ಸೌಲಭ್ಯ ಒದಗಿಸಬೇಕು. ವಿದ್ಯಾರ್ಥಿಗಳಿಗೆ ಪೂರಕವಾದ ವಾತಾವರಣ ನಿರ್ಮಿಸಬೇಕು ಎಂದರು.

ದೃಶ್ಯಕಲಾ ವಿಭಾಗಗಳು ಮುಕ್ತವಾಗಿ ತನ್ನ ಕಾರ್ಯನಿರ್ವಹಿಸುವಂತಹ ವಾತಾವರಣ ಇರಬೇಕು. ಇದಕ್ಕಾಗಿ ಪ್ರತ್ಯೇಕ ದೃಶ್ಯ ಕಾವ್ಯ ಮಂಡಳಿ ರಚನೆಯ ಅವಶ್ಯಕ ಇದೆ. ಆಗ ಮಾತ್ರ ವಿಭಾಗ ಎದುರಿಸುತ್ತಿರುವ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲು ಸಾಧ್ಯ. ಕಾವಾ ಕಾಲೇಜಿನಲ್ಲಿ ಅವಶ್ಯಕತೆಗೆ ಅನುಗುಣವಾಗಿ ಪ್ರಾಧ್ಯಾಪಕರಿಲ್ಲ. ಸೌಲಭ್ಯಗಳಿಲ್ಲದ ಕಾರಣ ವಿದ್ಯಾರ್ಥಿಗಳಲ್ಲಿ ಕಲಿಯುವ ಆಸಕ್ತಿ ಕಡಿಮೆಯಾಗುತ್ತದೆ. ನಮ್ಮ ಶಿಕ್ಷಣ ವ್ಯವಸ್ಥೆಯ ನಿಯಮಗಳು ಬದಲಾಗದ ಹೊರತು ಸುಧಾರಣೆ ತರಲು ಸಾಧ್ಯವಿಲ್ಲ. ಕಣರೆಯಾಗುತ್ತಿರುವ ಕಲೆಗಳನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಇದೊಂದು ಸಾಮೂಹಿಕ ಜವಾಬ್ದಾರಿಯಾಗಿದೆ ಆದ್ದರಿಂದ ಎಲ್ಲರೂ ಈ ಬಗ್ಗೆ ಧ್ವನಿ ಎತ್ತಬೇಕಿದೆ ಎಂದು ಸಲಹೆ ನೀಡಿದರು. ಸಮಾರಂಭದಲ್ಲಿ ದೃಶ್ಯಕಲಾ ವಿದೆ ಹಿಂದು ಆಂಟೋನಿ, ಜಯಸಿಂಹ ಸಿ, ಸುರೇಖಾ ಹಾಗೂ ಇತರರು ಇದ್ದರು.

**ಮೇಳದಲ್ಲಿ:** ಕಾವಾ ವಿದ್ಯಾರ್ಥಿಗಳ ಕೈಚಳಕದಿಂದ ಮೂಡಿಬಂದ ಕಲಾಕೃತಿಗಳು ಗ್ರಾಮೀಣ ಬದುಕಿನ ಸ್ಥಿತಿಗಳನ್ನು ಸಾರುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿರುವ ಮನೆಗಳಲ್ಲಿರುವಂಥ ಎಲೆಗಳಿಂದ ಮಾಡಿರುವ ಕಲಾಕೃತಿ ನೋಡುಗರ ಗಮನ ಸೆಳೆಯುತ್ತದೆ. ಮಕ್ಕಳು ಮೊಬೈಲ್ ಬಳಕೆಗೆ ದಾಸರಾಗುತ್ತಿರುವುದರಿಂದ ಹೊರಾಂಗಣ ಕ್ರೀಡೆಗಳಾದ ಕಬಡ್ಡಿ, ಮರಕೋತಿ ಆಟ, ಬಾಸ್ಕೆಟ್‌ಬಾಲ್ ಹಾಗೂ ಇತರೆ ಕ್ರೀಡೆಗಳು ಕಣ್ಮರೆಯಾಗುತ್ತಿವೆ. ಇವುಗಳ ಬಗ್ಗೆ ಜಾಗೃತಿ ಮೂಡಿಸುವ ಕಲಾಕೃತಿಗಳು ಕಣ್ಮನ ಸೆಳೆಯುತ್ತಿವೆ. ಕಾರ್ಯಕ್ರಮದಲ್ಲಿ ಕಲಾವಿದೆ ಇಂದು ಅಂಥೋಣಿ, ಕಾವಾ ಡೀನ್ ಎ.ದೇವರಾಜು ಹಾಗೂ ಕುಂಚಕಾವ್ಯ ಸಾಂಸ್ಕೃತಿಕ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಕಾವಾ ಕಾಲೇಜಿನ ಪ್ರವೇಶಾತಿಗೆ ಅರ್ಜಿ

ಮೈಸೂರು,ಆ.21– ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಂಸ್ಥೆಯಲ್ಲಿ ಬ್ಯಾಚುಲರ್ ಆಫ್ ವಿಜುಯಲ್ ಆರ್ಟ್ಸ್ (ಬಿ.ವಿ.ಎ) [ಎನ್.ಇ.ಪಿ. ಪದ್ಧತಿ] ದೃಶ್ಯಕಲೆಯಲ್ಲಿ 2023–24 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಬಿ.ವಿ.ಎ.ಪದವಿ ಪ್ರವೇಶಾತಿಗಾಗಿ ಬಾಕಿ ಉಳಿದಿರುವ ಸೀಟುಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ಅಧಿಸೂಚನೆಯಂತೆ ದಂಡ ಶುಲ್ಕದೊಂದಿಗೆ ಪ್ರವೇಶಾತಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಸದರಿ ಪದವಿಯಲ್ಲಿ 3 ನೇ ಸೆಮಿಸ್ಟರ್‌ನಿಂದ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ ಕಲೆ (ಅಚ್ಚುಕಲೆ), ಅನ್ವಯಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ, ಛಾಯಾಚಿತ್ರ ಪತ್ರಿಕೋದ್ಯಮ ವಿಭಾಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕ ಪದವಿಯಾಗಿರುತ್ತದೆ. ಅರ್ಜಿ ಸಲ್ಲಿಸಲು ಆ.28 ಕೊನೆಯ ದಿನಾಂಕವಾಗಿದ್ದು, ಆ.29ರಂದು ಬೆಳಗ್ಗೆ 11 ಘಂಟೆಗೆ ಅರ್ಹತಾ ಪರೀಕ್ಷೆ ಹಾಗೂ ಮಧ್ಯಾಹ್ನ 2 ಗಂಟೆಗೆ ವೈಯಕ್ತಿಕ ಸಂದರ್ಶನ ನಡೆಯಲಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ https://uucms.karnataka.gov.in, https://www.cavamysore.karnataka.gov.in. ಅಥವಾ ಕಚೇರಿ ದೂ.ಸಂ 0821–2438931 ಸಂಪರ್ಕಿಸಿ.

## ನಕ್ಕರೆ ಅದೇ ಸ್ವರ್ಗ

ಪತ್ನಿ : ಏನು ಬೇರೆ ಊರಿಗೆ ವರ್ಗ ಮಾಡಿ ಎಂದು ಕೇಳಿದ್ದೀರಾ? ಏಕೆ?

ಪತಿ : ಏನು ಮಾಡಲಿ? ಈಗ ಈ ಊರಲ್ಲಿ ಯಾರೂ ಸಾಲ ಕೊಡುತ್ತಿಲ್ಲ!!


**ಮೈಸೂರು ಮಿತ್ರ**

ಮಂಗಳವಾರ, 22 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*


### ಅಮೃತವಾಹಿನಿ..........

ಸಂಸಾರದಲ್ಲಿದ್ದರೆ ತಪ್ಪಲ್ಲ, ಮನಸ್ಸಿನಲ್ಲಿ ದೇವರಿದ್ದರೆ ಸಾಕು. ನೀರಿನಲ್ಲಿ ದೋಣಿಯಿರಬಹುದು. ಆದರೆ ದೋಣಿಯಲ್ಲಿ ನೀರು ಇರಬಾರದು –ಶ್ರೀ ರಾಮಕೃಷ್ಣ

ವೇದ ಸುಳ್ಳಾದರೂ { ಆಗೋದೆಲ್ಲಾ
ಗಾದೆ ಸುಳ್ಳಾಗದು { ಒಳ್ಳೆಯದಕ್ಕೆ

## ನಿಮ್ಮ ಪತ್ರಗಳು

### ಮೊಬೈಲ್ ಮೋಹ ಸಂಬಂಧಗಳ ನುಂಗಿತೇ?

ಮಾನ್ಯರೆ,

ನಮ್ಮ ನಾಡು ಸಾಂಸ್ಕೃತಿಕ ಕಲೆಗಳ ಬೀಡು ಎಂದು ಹೆಸರುವಾಸಿಯಾಗಿದೆ. ಇಲ್ಲಿ ಮೌಲ್ಯಕ್ಕೆ ಪ್ರಾಧಾನ್ಯತೆ ನೀಡಲಾಗುತ್ತದೆ. ಆಚಾರ–ವಿಚಾರ, ಉಡುಗೆ–ತೊಡುಗೆಗಳು, ಮಾತನಾಡುವ ಭಾಷೆ, ನಾವು ಪಾಲಿಸುವ ಧರ್ಮ ಬೇರೆಯಾಗಿದ್ದರೂ ನಾವು ಪಾಲಿಸುತ್ತಿರುವ ಮಂತ್ರವೊಂದೇ ಅದು ಭಾವೈಕ್ಯ ಮಂತ್ರ.

ಹೀಗಿರುವಾಗ ನಾವೆಲ್ಲರೂ ಒಗ್ಗಟ್ಟಾಗಿದ್ದರೂ ಎಲ್ಲೋ ಒಂದು ಕಡೆ ಚಿಕ್ಕ ರಂಧ್ರವಾಗಿ ಅದೇ ಮುಂದೇ ಅಗಲವಾಗಿ ನಮ್ಮ ಸಂಬಂಧಗಳು ಒಡೆದು ಹೋಗುತ್ತಿವೆ. ಆ ಚಿಕ್ಕ ರಂಧ್ರ ಯಾವುದಾಗಿರಬಹುದು ಎಂದು ಹುಡುಕುತ್ತಾ ಹೋದರೇ ನಮಗೆ ತತ್‌ಕ್ಷಣ ಹೊಳೆಯುವುದೇ ಸಂಬಂಧ. 'ಸಂಬಂಧವೆಂಬ ತೂಗು ಸೇತುವೆಯಲ್ಲಿ ಪ್ರಯಾಣಿಸುತ್ತಿರುವ ಪ್ರಯಾಣಿಕರು ನಾವು'. ಆ ಸೇತುವೆಗೆ ಸ್ವಲ್ಪವು ಹಾನಿಯಾಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಸಂಬಂಧಕ್ಕೆ ಹಲವಾರು ಮಜಲುಗಳಿವೆ. ತಾಯಿ–ಮಕ್ಕಳ ಸಂಬಂಧ, ಸ್ನೇಹಿತರ ನಡುವಿನ ಸಂಬಂಧ, ಗುರುಶಿಷ್ಯರ ಸಂಬಂಧ, ನೆರೆಹೊರೆಯ ಸಂಬಂಧ, ಇತ್ಯಾದಿ... ಸಂಬಂಧವೆಂಬ ತೇರನ್ನು ಎಳೆಯಲು ಎಲ್ಲರೂ ಕ್ಷಮಿಸಬೇಕು. ಈ ತೇರು ಈ "ಮೊಬೈಲ್" ಎಂಬ ಭೂತದಿಂದ ಒಡೆದು ಛಿದ್ರವಾಗುತ್ತಿದೆ. ಇದು ಜನತೆಯಲ್ಲಿನ ಸಂಬಂಧಗಳನ್ನು ಕಸಿದುಕೊಳ್ಳುತ್ತಿದೆ. ಭಾವನೆಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಅಡ್ಡಿಯುಂಟುಮಾಡುತ್ತಿದೆ.

ನಾವೆಲ್ಲರೂ ಮೊಬೈಲ್ ಎಂಬ ರಕ್ಕಸನ ಕಪಿಮುಷ್ಟಿಯಲ್ಲಿ ಬಂಧಿಯಾಗಿ ಬಿಟ್ಟಿದ್ದೇವೆ. ಮೊದಲಿದ್ದ ಭಾವನೆಗಳು ಕಣ್ಮರೆಯಾಗುತ್ತಿವೆ. ಇತ್ತೀಚೆಗೆ ಚಿಕ್ಕಮಕ್ಕಳಿಂದ ವೃದ್ಧರವರೆಗೂ ಮೊಬೈಲ್‌ನ ಸಂಕೋಲೆಯಲ್ಲಿ ಬಂಧಿಯಾಗಿ ಬಿಟ್ಟಿದ್ದಾರೆ. ಪರಸ್ಪರ ಭಾವನೆಗಳನ್ನು ವಿನಿಮಯ ಮಾಡಿಕೊಳ್ಳಲು ಮೊಬೈಲ್ ಅಡ್ಡಿಯುಂಟುಮಾಡುತ್ತಿದೆ. ಪ್ರೀತಿ, ಮಮತೆ, ವಾತ್ಸಲ್ಯ ಮಾಯವಾಗುತ್ತಿವೆ. ಎಲ್ಲವೂ ಮೊಬೈಲ್ ಎಂಬ ಮಧ್ಯವರ್ತಿಯನ್ನು ಮಧ್ಯೆ ಬಳಸುತ್ತಾರೆ. ಮಗು ಪಾಲಕರನ್ನು ಕೇಳಲು ಟೆಕ್ಸ್ಟ್ ಮಾಡುವ ಮಟ್ಟದವರೆಗೂ ತಾಂತ್ರಿಕತೆ ಬೆಳೆದಿದೆ. ಹಾಗೆ ಅದು ವಿನಿಮಯ ಸಂಬಂಧವನ್ನು ಕಸಿದುಕೊಳ್ಳುತ್ತಿದೆ.

ಚಿಕ್ಕಮಕ್ಕಳು ಅಜ್ಜ–ಅಜ್ಜಿಯರಿಂದ ಕಥೆ ಕೇಳುತ್ತಿಲ್ಲ. ಅಜ್ಜ–ಅಜ್ಜಿಯರೂ ಕಥೆ ಹೇಳಲೂ ಸಮಯವಿಲ್ಲದೆ ಸ್ಮಾರ್ಟ್‌ಫೋನ್ ಉಜ್ಜುವುದರಲ್ಲಿ ಸಮಯ ಕಳೆಯುತ್ತಿದ್ದಾರೆ. ಇದರಿಂದ ತಾತ ಮೊಮ್ಮಕ್ಕಳ ಸಂಬಂಧದ ಕೊಂಡಿ ಕಳಚಿಹೋಗುತ್ತಿದೆ. ಎಳೆಯ ಹಸುಗೂಸಿಗೆ ಆಟವಾಡಲೂ ಗಿಲಕಿಯಂತಹ ಆಟದ ವಸ್ತು ಬದಲು ಸ್ಮಾರ್ಟ್‌ಫೋನ್ ಕೊಟ್ಟು ಆಟವಾಡಿಸುವ ಹೀನಾಯ ಸ್ಥಿತಿಗೆ ನಾವು ತಲುಪಿದ್ದೇವೆ. ಇದರಿಂದ ಮಕ್ಕಳಲ್ಲಿನ ಆಟದ ಮನೋಭಾವ ಅದರ ಸ್ವಾದ ಕಳೆದುಕೊಳ್ಳುತ್ತದಲ್ಲವೇ?

ಮನೆಯಲ್ಲಿಯೂ ತಂದೆ–ತಾಯಿ ಮಕ್ಕಳು, ಸಹೋದರ–ಸಹೋದರಿಯರು, ಪತಿ–ಪತ್ನಿಯರು ಒಂದೇ ಮನೆಯಲ್ಲಿದ್ದರೂ ಐದು ಸದಸ್ಯರಿದ್ದರೆ ಅಲ್ಲಿ ಐದು ಸ್ಮಾರ್ಟ್‌ಫೋನ್ ಐದು ಮೊಬೈಲ್ ಚಾರ್ಜರ್ ಐದು ಸ್ವಿಚ್‌ಗೆ ಬಿಗಿದುಕೊಂಡಿರುತ್ತವೆ. ಹೀಗಿರುವಾಗ ನಮ್ಮ ನಡುವಿನ ಸಂಬಂಧ ಹೇಗೆ ಗಟ್ಟಿಗೊಳ್ಳುತ್ತವೆ ಹೇಳಿ? ಹಿಂದೆ ಇದರ ಅಬ್ಬರ ಕಡಿಮೆಯಿತ್ತು. ಅಲ್ಲಿ ಸಂಬಂಧಗಳಿಗೆ ಬೆಲೆಯಿತ್ತು. ಒಂದೇ ಕುಟುಂಬದಲ್ಲಿ ಹತ್ತು ಸದಸ್ಯರಿದ್ದರೂ ಒಟ್ಟಿಗೆ ಕೂತು ತಮ್ಮ ನೋವು–ನಲಿವುಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದರು. ಅಲ್ಲಿ ಸಂಬಂಧಗಳಿಗೆ ಬೆಲೆಯಿತ್ತು. ಆದರೆ ಇತ್ತೀಚೆಗೆ ಇದೆಲ್ಲಾ ಮಾಯವಾಗಿವೆ. ಮೊಬೈಲ್ ಎಂಬ ಮಹಾ ರಾಕ್ಷಸ ಬಂದು ನಮ್ಮೆಲ್ಲರ ಸಂಬಂಧಗಳನ್ನು ಹಾಳುಮಾಡಿಬಿಟ್ಟಂತಿದೆ..!

ಇನ್ನಾದರೂ ನಾವು ಸ್ವಲ್ಪ ಜಾಗರೂಕರಾಗೋಣ. ಸಂಬಂಧಗಳಿಗೆ ಬೆಲೆ ಮತ್ತು ಸಮಯ ಕೊಡೋಣ. ಮಕ್ಕಳನ್ನು ಮೊಬೈಲ್‌ನಿಂದ ದೂರವಿರಿಸಿ ಅವರಲ್ಲಿ ಮೌಲ್ಯಗಳನ್ನು ಬೆಳೆಸೋಣ. ನಮ್ಮ ನಾಡಿನ ಸಂಸ್ಕೃತಿಯನ್ನು ಬೆಳೆಸಲು ಎತ್ತಿ ಹಿಡಿಯೋಣವೇ?

**–ಅನಿಲ್ ರಾಜ, ಸಹ ಶಿಕ್ಷಕ, ಗೀತಾ ಭಾರತಿ ಶಾಲೆ, ಸಿದ್ಧಾರ್ಥನಗರ, ಮೈಸೂರು**

### ರೈತರ ಹಿತಕಾಯುವಂತೆ ಸೋಗು ಹಾಕುವುದನ್ನು ರಾಜಕೀಯ ಪಕ್ಷಗಳು ಬಿಡಲಿ

ಮಾನ್ಯರೆ,

ತಮಿಳುನಾಡಿಗೆ ಅದರ ಪಾಲಿನ ಕಾವೇರಿ ನೀರು ಬಿಡುವಾಗ, ಅಚ್ಚುಕಟ್ಟು ಪ್ರದೇಶದಲ್ಲಿ ಮಳೆ ಕಡಿಮೆಯಾಗಿರುವುದು ಗಮನಿಸಬೇಕಾದ ಅಂಶ. ಅಧಿಕಾರದಲ್ಲಿರುವ ಪಕ್ಷಗಳು ನೀರು ಬಿಟ್ಟಾಗ, ಅಧಿಕಾರದಲ್ಲಿಲ್ಲದ ರಾಜಕೀಯ ಪಕ್ಷಗಳು ಹುಯಿಲೆಬ್ಬಿಸುತ್ತವೆ. ಆದರೆ ಅವೇ ರಾಜಕೀಯ ಪಕ್ಷಗಳು ತಾವು ಅಧಿಕಾರದಲ್ಲಿದ್ದಾಗ ಈ ತಪ್ಪನ್ನೇ ಮಾಡಿರುತ್ತವೆ. ಆದರೆ ರಾಜಕೀಯಕ್ಕಾಗಿ ತಾವೇನೋ ರೈತರ ಹಿತ ಕಾಯುವವರು ಎಂಬ ಮುಖವಾಡ ಹಾಕಿಕೊಂಡು ಹುಯಿಲೆಬ್ಬಿಸುವ ಇಂತಹ ರಾಜಕೀಯ ಗೋಸುಂಬೆಗಳ ಬಣ್ಣ ರೈತರಿಗೆ ತಿಳಿದಿಲ್ಲವೆಂದು ಅಂದುಕೊಂಡಿದ್ದರೆ ಅದು ಅವರ ಮೂರ್ಖತನವಲ್ಲದೆ ಬೇರೇನಿಲ್ಲ. ಈ ಹಿಂದೆ ಹಿರಿಯರೊಬ್ಬರು ಮುಖ್ಯಮಂತ್ರಿಯಾಗಿದ್ದಾಗ ಇದೇ ಸಂದರ್ಭ ಬಂದಾಗ, ರಕ್ತ ಕೊಟ್ಟೇವು, ನೀರು ಕೊಡುವುದಿಲ್ಲ ಎಂದು ಗುಟುರು ಹಾಕಿ ರಾತ್ರೋರಾತ್ರಿ ತಮಿಳುನಾಡಿಗೆ ನೀರು ಹರಿಸಿದ್ದು, ಎಲ್ಲಾ ಮಾಧ್ಯಮಗಳಲ್ಲೂ ಮತ್ತು ಸಾರ್ವಜನಿಕ ವಲಯದಲ್ಲೂ ಪ್ರತಿರೋಧ ವ್ಯಕ್ತವಾಗಿತ್ತು. ಆಗ ಅವರು ಸುಪ್ರೀಂಕೋರ್ಟ್ ಆದೇಶದಂತೆ ನೀರು ಬಿಡದೆ ವಿಧಿಯಿಲ್ಲ ಎಂದು ಸಮಜಾಯಿಷಿ ಕೊಟ್ಟರು. ಇದು ಎಲ್ಲಾ ರಾಜಕೀಯ ಪಕ್ಷಗಳು ಅಧಿಕಾರದಲ್ಲಿದ್ದಾಗ ಮಾಡುವುದೇ ಇದನ್ನೇ. ಆದರೂ ರೈತರ ಹಿತ ಕಾಯುವವರಂತೆ ಸುಮ್ಮನೆ ಸೋಗು ಹಾಕುವುದನ್ನು ರಾಜಕೀಯ ಪಕ್ಷಗಳು ಬಿಡಲಿ.

**–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.**

### ಮೇರುನಟರ ನೆನಪು ಬರಲಿಲ್ಲವೇ?

ಮಾನ್ಯರೆ,

ಚಂದನ ದೂರದರ್ಶನದಲ್ಲಿ ಥಟ್ ಅಂತ ಹೇಳಿ ಕಾರ್ಯಕ್ರಮದಲ್ಲಿ 77ರ ಸ್ವಾತಂತ್ರ್ಯೋತ್ಸವದ ಪ್ರಯುಕ್ತ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಅನೇಕ ಪ್ರಶ್ನೆಗಳನ್ನು ಕೇಳಿದರು. ಅದರಲ್ಲಿ ಸಿನಿಮಾ ನಟರಾದ ಡಾ. ರಾಜಕುಮಾರ್, ಅಮಿತಾಬ್ ಬಚ್ಚನ್ ಹಾಗೂ ಡಾ. ವಿಷ್ಣುವರ್ಧನ್ ಅವರ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದರು. ಚಂದನ ಎಂದರೆ ಹಾಗೂ ಡಾ.ಸೋಮೇಶ್ವರ್ ಎಂದರೆ ಕನ್ನಡಕ್ಕೆ ವಿಶೇಷ ಮಾನ್ಯತೆ ನೀಡಿ ಕನ್ನಡದ ಅಭಿಮಾನವನ್ನು ಹೊಂದಿದವರು ಎಂದರ್ಥ. ಆದರೆ ಥಟ್ ಅಂತ ಹೇಳಿ ಕಾರ್ಯಕ್ರಮದಲ್ಲಿ ಹಿಂದಿ ನಟ ಅಮಿತಾಬ್ ಬಚ್ಚನ್ ಅವರ ಹೆಸರು ಹೇಳಿದ್ದು ಸರಿ ಎನಿಸಲಿಲ್ಲ. ನಮ್ಮ ಕನ್ನಡದ ಮೇರುನಟರಾದ ಕಲ್ಯಾಣ್ ಕುಮಾರ್, ನರಸಿಂಹರಾಜು, ವಜ್ರಮುನಿ, ರಾಜೇಶ್, ಅಂಬರೀಷ್ ಮುಂತಾದವರು ಇವರ ನೆನಪಿಗೆ ಬರಲಿಲ್ಲವೇ. ದೂರದರ್ಶನ ಚಂದನವೆಂದರೆ ಕನ್ನಡಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುವ ಇವರು ಏಕೆ ಹೀಗೆ ಮಾಡಿದರು?

**–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.**





ಗುಬ್ಬಿಗೂಡು ರಮೇಶ್
ಮೊ: 97429–34512


ದೀಪ ಸಾಲು

# ಗೆಳೆತನದ ಪರಿಮಳ





> "ಇತ್ತೀಚೆಗೆ ಸತ್ತವ್ಯಕ್ತಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುವ ಹೊಸ ರೀತಿಯೊಂದು ಶುರುವಾಗಿದೆ. ಅಲ್ಲೂ ಕೂಡ 'ಮತ್ತೆ ಹುಟ್ಟಿ ಬಾ ಗೆಳೆಯ', ಸ್ನೇಹಜೀವಿ X,Y,Z-ಹೀಗೆ ಹತ್ತಾರು ಭಾವ ಪೂರ್ಣ ಶ್ರದ್ಧಾಂಜಲಿ ಅರ್ಪಿಸಿದ ಫೋಟೋಗಳನ್ನು ಫ್ಲೆಕ್ಸ್‌ಗಳಲ್ಲಿ ದಿನನಿತ್ಯ ನಾವು ಕಾಣುತ್ತಲೇ ಇರುತ್ತೇವೆ. ಅಲ್ಲೆಲ್ಲಾ ಅಣ್ಣ-ತಮ್ಮ, ಅಕ್ಕ-ತಂಗಿ, ಎನ್ನುವ ಸಂಬಂಧಕ್ಕಿಂತ ಸ್ನೇಹಜೀವಿ, ಮತ್ತೆ ಹುಟ್ಟಿ ಬಾ ಗೆಳೆಯ ಮುಂತಾದ ಸ್ನೇಹಮಯಿ ಪದಗಳೇ ರಾರಾಜಿಸುತ್ತಿರುತ್ತವೆ. ಈ ಸ್ನೇಹ ಎನ್ನುವಂಥದ್ದು ಅಂಥಾ ಬಾಂಧವ್ಯದ ಬೆಸುಗೆ.

ನಾವು ಮಾಡುವ ಕೆಲಸಗಳು ಒಮ್ಮೊಮ್ಮೆ ಕಾಲಾನುಕಾಲದವರೆಗೂ ಉಳಿದುಬಿಡುತ್ತವೆ. ಕೆಲವು ನಮ್ಮ ಕಣ್ಮುಂದೆಯೇ ಕಣ್ಣುಮುಚ್ಚಿ ಮಕಾಡೆ ಮಲಗುತ್ತವೆ. "ಸ್ವಂತಕ್ಕಾಗಿ ಸ್ವಲ್ಪ ಸಮಾಜಕ್ಕಾಗಿ ಸರ್ವಸ್ವ" ಅಂತ ಪ್ರತಿನಿತ್ಯ ಭಾಷಣ ಕುಟ್ಟುವ ಕೆಲವರು ಸಮಾಜ ಮಾಡಿದ ಲೆಕ್ಕ ಸ್ವಂತಕ್ಕಾಗಿ ದುಡಿದ ಸುಂಕ ಎರಡನ್ನೂ ಕೂಡಿ ಕಳೆದಾಗ ಉಳಿದ ಭಾಗಶೇಷವೆಲ್ಲವೂ ದೀರ್ಘಾಯುವಾಗಿ ಮಕ್ಕಳು ಮೊಮ್ಮಕ್ಕಳ ಪಾಲಾಗಿರುತ್ತದೆ. ಮನುಷ್ಯ ಸಂಘಜೀವಿ ಎಂಬುದು ಎಷ್ಟು ಸತ್ಯವೋ ಮನುಷ್ಯ ಸ್ನೇಹಜೀವಿ ಎಂಬುದೂ ಅಷ್ಟೇ ಸತ್ಯ. ಕೆಲವೊಮ್ಮೆ ಸಂಪತ್ತು ಸಮೃದ್ಧಿಗಳು ನೀಡಲಾಗದ ಸುಖಸಂತೋಷ ದೀರ್ಘಾಯು ಉಪಶಮನವನ್ನೂ ಸ್ನೇಹ ಎಂಬ ಎರಡಕ್ಷರದ ಜೀವಯಾನ ನೀಡಿ ಹೋಗಿರುತ್ತದೆ. ನಮ್ಮ ನಮ್ಮ ಬದುಕುಗಳು ಸ್ನೇಹ ಮತ್ತು ಸ್ನೇಹವಲಯವನ್ನು ಬಿಟ್ಟು ಜೀವನವನ್ನು ರೂಪಿಸಿಕೊಂಡಿದ್ದಲ್ಲ. ಹಾಗಾಗಿ ಸ್ನೇಹ ಮತ್ತು ಗೆಳೆತನಕ್ಕೆ ನಮ್ಮ ಭಾವಯಾನದಲ್ಲಿ ಅತಿ ಗೌರವ ಸ್ಥಾನವಿದೆ.

ವೀಕೆಂಡ್ ವಿತ್ ರಮೇಶ್ ಎನ್ನುವ ಟಿ.ವಿ. ಕಾರ್ಯಕ್ರಮದಲ್ಲಿ ಸಾಧನೆ ಮಾಡಿದ ಅನೇಕರನ್ನು ಕರೆದು ಮಾತಾಡಿಸುವ ದೃಶ್ಯಾವಳಿಗಳನ್ನು ನೋಡುವಾಗ ಆ ಸಾಧಕರ ಬಯೋಗ್ರಫಿಯಲ್ಲಿ ಸಂಬಂಧಿಕರಿಗಿಂತ ಸ್ನೇಹಿತರ ಸಂಖ್ಯೆಯೇ ಜಾಸ್ತಿ ಇರುತ್ತದೆ. ಇತ್ತೀಚೆಗೆ ಸತ್ತವ್ಯಕ್ತಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುವ ಹೊಸ ರೀತಿಯೊಂದು ಶುರುವಾಗಿದೆ. ಅಲ್ಲೂ ಕೂಡ 'ಮತ್ತೆ ಹುಟ್ಟಿ ಬಾ ಗೆಳೆಯ', ಸ್ನೇಹಜೀವಿ X, Y, Z–ಹೀಗೆ ಹತ್ತಾರು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದ ಫೋಟೋಗಳನ್ನು ಫ್ಲೆಕ್ಸ್‌ಗಳಲ್ಲಿ ದಿನನಿತ್ಯ ನಾವು ಕಾಣುತ್ತಲೇ ಇರುತ್ತೇವೆ. ಅಲ್ಲೆಲ್ಲಾ ಅಣ್ಣ–ತಮ್ಮ, ಅಕ್ಕ–ತಂಗಿ, ಎನ್ನುವ ಸಂಬಂಧಕ್ಕಿಂತ ಸ್ನೇಹಜೀವಿ, ಮತ್ತೆ ಹುಟ್ಟಿ ಬಾ ಗೆಳೆಯ ಮುಂತಾದ ಸ್ನೇಹಮಯಿ ಪದಗಳೇ ರಾರಾಜಿಸುತ್ತಿರುತ್ತವೆ. ಈ ಸ್ನೇಹ ಎನ್ನುವಂಥದ್ದು ಅಂಥಾ ಬಾಂಧವ್ಯದ ಬೆಸುಗೆ.

ಕೆಲವೊಮ್ಮೆ ವೈಯಕ್ತಿಕವಾಗಿ ಯಾವುದೋ ಕಾರಣಕ್ಕೆ ಹುಟ್ಟಿಕೊಂಡ ಸ್ನೇಹ ದೀರ್ಘಾಯುವಾದ ಲೋಕಕಲ್ಯಾಣದ ಕೆಲಸವನ್ನು ಮಾಡಿಸಿಬಿಡುತ್ತದೆ. ಕಾಲಾನುಕಾಲಕ್ಕೂ ಅದು ಉಳಿದೇಬಿಡುತ್ತದೆ. ಅಂಥದೊಂದು ಗೆಳೆಯರಿಬ್ಬರ ಕತೆಯನ್ನು ನೀವು ಕೇಳಲೇಬೇಕು.

ಸ್ನೇಹಸಂಚಯನವೊಂದು ಸಮುದಾಯದ ಅಭಿವೃದ್ಧಿಗೆ ಶಂಕುಸ್ಥಾಪನೆ ಮಾಡಿದ ಸುದಿನ ಸ್ನೇಹಮಯಿ ವ್ಯಕ್ತಿತ್ವಗಳ ದೀರ್ಘಕಾಲದ ಕೊಡುಗೆಯಾಗಿ ಉಳಿದ ಪ್ರಸಂಗಕ್ಕೆ ಕರ್ನಾಟಕದ ಅಂದಿನ ಮುಖ್ಯಮಂತ್ರಿಗಳಾದ ಸಾಕ್ಷಾತ್ ಕೆಂಗಲ್ ಹನುಮಂತಯ್ಯನವರೇ ಸಾಕ್ಷಿಯಾದ ಘಟನೆ ನಿಜಕ್ಕೂ ಅವಿಸ್ಮರಣೀಯ. ಬೆಂಗಳೂರಿನ ಸಮೀಪ ತ್ಯಾಮಗೊಂಡ್ಲು ಎನ್ನುವ ಊರಿದೆ. ಊರಿಗೆ ನಾಗರಿಕತೆಯ ಸ್ಪರ್ಷವಾಗಿ ಅದೂ ಕೂಡ ಬೆಂಗಳೂರಿನ ಒಂದು ಭಾಗವೇ ಆಗಿದೆಯೇನೋ ಎನ್ನುವಷ್ಟು ಬದಲಾಗಿದೆ. ಆದರೆ ಕೆಂಗಲ್ಲರ ಕಾಲದಲ್ಲಿ ಅದೊಂದು ಸಣ್ಣಹಳ್ಳಿ. ಇಲ್ಲಿ ಆ ಊರಿನ ಹೆಸರನ್ನು ಪ್ರಸ್ತಾಪಿಸಲಿಕ್ಕೆ ಕಾರಣವಿದೆ. ಕರ್ನಾಟಕದ ಶಕ್ತಿಕೇಂದ್ರ ವಿಧಾನಸೌಧವನ್ನು ಕಟ್ಟಿದ ನಮ್ಮ ಕೆಂಗಲ್ ಹನುಮಂತಯ್ಯನವರು ಮತ್ತು ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯನವರ ನಡುವೆಯೂ ಹೀಗೆಯೇ ಒಂದು ಸುಂದರ ಗೆಳೆತನವಿತ್ತು ಎನ್ನುವುದಕ್ಕೆ ಈ ಹಳ್ಳಿಯ ಹೆಸರನ್ನು ಪ್ರಸ್ತಾಪಿಸಬೇಕಾಯಿತು. ಒಮ್ಮೆ ಸರ್ ಎಂ. ವಿಶ್ವೇಶ್ವರಯ್ಯನವರು ಹೀಗೆ ಮಾತಾಡುತ್ತ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಕೆಂಗಲ್ ಹನುಮಂತಯ್ಯನವರ ಬಳಿ ಒಂದು ಆಸೆ ವ್ಯಕ್ತಪಡಿಸಿದರಂತೆ, ನಾನು ಇಲ್ಲೇ ನೆಲಮಂಗಲದ ಬಳಿಯಿರುವ ತ್ಯಾಮಗೊಂಡ್ಲು ಎನ್ನುವ ಹಳ್ಳಿಗೆ ಹೋಗಬೇಕಾಗಿದೆ ಎಂದರಂತೆ. ಕಾರಣ ಕೇಳಬಹುದೇ ಎಂದರಂತೆ ಕೆಂಗಲ್ಲರು. ನನ್ನ ಬಾಲ್ಯದ ಗೆಳೆಯನೊಬ್ಬನ ಊರು ಅದು. ಓದುವ ದಿನಗಳಲ್ಲಿ ಆತ ನನ್ನ ಸಹಪಾಠಿ, ಒಟ್ಟಿಗೆ ಓದಿದವರು ನಾವು. ಅಪರೂಪಕ್ಕೆ ಆತನನ್ನು ನೋಡಬೇಕು ಎನ್ನಿಸಿದೆ ಎಂದರಂತೆ ಸರ್ ಎಂ.ವಿ. ಅದಕ್ಕೇನಂತೆ ವ್ಯವಸ್ಥೆ ಮಾಡುತ್ತೇನೆ ಹೋಗಿ ಬನ್ನಿ ಎಂದರಂತೆ ಕೆಂಗಲ್ಲರು. ಬೇಡ ಬೇಡ ವ್ಯವಸ್ಥೆಯೆಲ್ಲಾ ಬೇಡ ಹಾಗೆಯೇ ಲೋಕಾಭಿರಾಮವಾಗಿ ಮಾತಾಡುತ್ತಾ ನಾವಿಬ್ಬರೇ ಹೋಗಿಬರೋಣವೇ ತಮ್ಮ ಅಭ್ಯಂತರವಿಲ್ಲ ಎಂದರೆ... ಎಂದರಂತೆ ಸರ್ ಎಂ.ವಿ. ಅದಕ್ಕೇನಂತೆ ಹೋಗಿಬರೋಣ ಡ್ರೈವರ್ ಕೂಡ ಬೇಡ ನಾನೇ ಡ್ರೈವ್ ಮಾಡುತ್ತೇನೆಂದು ಏಕಾಏಕಿ ಹೊರಟೇಬಿಡುತ್ತಾರೆ ಕೆಂಗಲ್ಲರು. ಬೆಂಗಳೂರಿನಿಂದ ತ್ಯಾಮಗೊಂಡ್ಲು ತಲುಪಿದ ಸರ್ ಎಂ.ವಿ. ಮತ್ತು ಕೆಂಗಲ್ ಹನುಮಂತಯ್ಯನವರು ಅಲ್ಲಿ ಸರ್ ಎಂ.ವಿ.ಯವರ ಗೆಳೆಯನ ಮನೆ ಹುಡುಕಿದರು. ಅದು ಅವರಿಗೆ ಕಷ್ಟವೇನೂ ಆಗಲಿಲ್ಲ. ಸರ್ ಎಂ.ವಿಯವರ ಗೆಳೆಯನ ಹೆಸರು ತ್ಯಾಮಗೊಂಡ್ಲು ತಿಮ್ಮೇಗೌಡ ಅಂತ. ರೈತ ಕುಟುಂಬದ ಹಿನ್ನೆಲೆಯಿಂದ ಬಂದ ತಿಮ್ಮೇಗೌಡರಿಗೂ ಆ ವೇಳೆಗಾಗಲೇ ವಯಸ್ಸಾಗಿತ್ತು. ಹಳ್ಳಿಯ ಮುಗ್ಧ, ಒಕ್ಕಲು ಮನೆತನದ ಪ್ರತಿನಿಧಿಯಂತಿದ್ದ ತಿಮ್ಮೇಗೌಡರು ತಮ್ಮ ಮನೆಯ ಜಗುಲಿಯ ಮೇಲೆ ಕಂಬಳಿ ಹಾಸಿಕೊಂಡು ಗೋಡೆಗೆ ಒರಗಿಕೊಂಡು ಕೂತಿದ್ದರಂತೆ. ಊರಿನ ಹುಡುಗನೊಬ್ಬ ಕೈಸನ್ನೆಯಲ್ಲಿ ತೋರಿದ ಮನೆಯ ಮುಂದೆ ಕೆಂಗಲ್ಲರು ಕಾರು ನಿಲ್ಲಿಸಿದರಂತೆ. ಹಜಾರದಲ್ಲಿ ಕುಳಿತ ಬಾಲ್ಯದ ಗೆಳೆಯ ತಿಮ್ಮೇಗೌಡರನ್ನು ನೋಡುತ್ತಿದ್ದಂತೆ ಸರ್ ಎಂ.ವಿ.ಯವರಿಗೆ ಎಲ್ಲಿಲ್ಲದ ಸಂತೋಷ. ಕಾರಿನ ಬಾಗಿಲು ತೆರೆದವರೇ ತಿಮ್ಮೇಗೌಡರ ಬಳಿ ಧಾವಿಸುವ ಸರ್ ಎಂ.ವಿ.ಯವರ ಉತ್ಸಾಹ ನೋಡಿದ ಕೆಂಗಲ್ಲರು ತಾವು ಕಾರಿನಲ್ಲೇ ಕುಳಿತು ನೀವು ಹೋಗಿ ಬನ್ನಿ ಪರವಾಗಿಲ್ಲ; ನಿಮ್ಮಿಬ್ಬರ ಮಾತಿನ ನಡುವೆ ನನ್ನದೇನಿದೆ ಅಲ್ಲಿ ಎಂದುಬಿಟ್ಟರಂತೆ. ಸರಿ ಕೆಂಗಲ್ಲರ ಅಭಿಪ್ರಾಯಕ್ಕೆ ಮರುಮಾತನಾಡದೆ, ತಿಮ್ಮೇಗೌಡರನ್ನು ಭೇಟಿಯಾದ ಸರ್ ಎಂ.ವಿ., ತಿಮ್ಮೇಗೌಡರ ಮುಂದೆ ನಿಂತು ಹೇಗಿದ್ದೀಯಾ ತಿಮ್ಮೇಗೌಡ ಎಂದರಂತೆ! ಆ ವೇಳೆಗಾಗಲೇ ಕಣ್ಣು ಸ್ವಲ್ಪ ಮಂಜಾಗಿದ್ದರಿಂದ ಎದುರಿಗಿದ್ದವರು ಯಾರು ಎಂಬುದು ಕೂಡಲೇ ಗೊತ್ತಾಗದ ತಿಮ್ಮೇಗೌಡರು ಕಣ್ಣಿನ ಮುಂದೆ ಕೈಯ್ಯಿರಿಸಿ ಎದುರಿಗಿದ್ದ ವ್ಯಕ್ತಿಯನ್ನು ದಿಟ್ಟಿಸಿ ನೋಡಿ ಯಾರು? ಯಾವೂರವ್ರು? ಎಂದರಂತೆ. ನಾನಪ್ಪ ವಿಶ್ವೇಶ್ವರಯ್ಯ, ಅಂತ ಹೇಳಿದರು ಗೊತ್ತಾಗದ ತಿಮ್ಮೇಗೌಡರಿಗೆ ಸರ್ ಎಂ.ವಿ. ವಿಶ್ವ ಕಣೋ ತಿಮ್ಮೇಗೌಡ, ನಿನ್ನ ಬಾಲ್ಯದ ಗೆಳೆಯ ಎಂದು ಕೂಗಿ ಹೇಳಿದರಂತೆ. ಕೂಡಲೇ ತಬ್ಬಿಬ್ಬಾಗಿ ಹೋದ ತಿಮ್ಮೇಗೌಡ ಗಾಬರಿಯಾಗಿ ಹೋದರಂತೆ. ಅಯ್ಯೋ ವಿಶ್ವೇಶ್ವರಯ್ಯನವರು ಏನ್ ಸ್ವಾಮಿ ಹಿಂಗೇ ದಿಢೀರ್ ಅಂತ ಈ ಸಾಮಾನ್ಯನ ಮನೆವರೆಗೂ, ಹೇಳಿ ಕಳಿಸಿದ್ರೆ ನಾನೇ ಬರ್ತಿದ್ನಲ್ಲ ಎಂದರಂತೆ. ತಾನೂ ಅಲ್ಲೇ ಹಜಾರದಲ್ಲೇ ಕುಳಿತುಕೊಂಡ ಸರ್ ಎಂ.ವಿ.ಯವರು ಹಾಗೆಲ್ಲಾ ಮರ್ಯಾದೆಯೆಲ್ಲ ಏನೂ ಬೇಡ. ಚಿಕ್ಕಂದಿನಲ್ಲಿ ಕರೆಯುತ್ತಿದ್ದ ಹಾಗೆ 'ವಿಶ್ವ' ಅಂತ ಕರಿ ಸಾಕು ಎನ್ನುತ್ತಾ ತಿಮ್ಮೇಗೌಡರ ಜೊತೆ ಆತ್ಮೀಯತೆಯಿಂದ ಮಾತಾಡುತ್ತಾ ಕುಳಿತರಂತೆ ಸರ್ ಎಂ.ವಿ.ಯವರು. ಅಷ್ಟರಲ್ಲಿ ಕಾರಿನಲ್ಲಿ ಸ್ಟಿಯರಿಂಗ್ ಸೀಟ್‌ನಲ್ಲಿ ಇನ್ನು ಕುಳಿತಿದ್ದ ವ್ಯಕ್ತಿಯೊಬ್ಬರನ್ನು ಕಂಡ ತಿಮ್ಮೇಗೌಡರು ಅರೆ ಡ್ರೈವರ್ ಒಬ್ಬರನ್ನೇ ಯಾಕೆ ಕಾರಿನಲ್ಲಿ ಕೂರಿಸಿದ್ದೀರಿ ಅವರನ್ನೂ ಇಲ್ಲೇ ಕರೆಯಿರಿ ಎನ್ನುತ್ತಾರೆ ಗೌಡರು. ಆಗ ವಿಶ್ವೇಶ್ವರಯ್ಯನವರು ತಿಮ್ಮೇಗೌಡ ಅವರು ಡ್ರೈವರ್ ಅಲ್ಲ, ಕರ್ನಾಟಕದ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಎಂದರಂತೆ. ವಿಷಯ ತಿಳಿದು ಹೌಹಾರಿದ ತಿಮ್ಮೇಗೌಡರು ಮೂರ್ಛೆ ಹೋಗುವುದೊಂದೇ ಬಾಕಿ! ಒಂದು ಕಡೆ ಕರ್ನಾಟಕದ ಮುಖ್ಯಮಂತ್ರಿ ಮನೆಯ ಮುಂದೆ! ಮತ್ತೊಂದು ಕಡೆ ಕನ್ನಂಬಾಡಿ ಕಟ್ಟಿದ ಸರ್ ಎಂ.ವಿಶ್ವೇಶ್ವಯ್ಯನವರು ಜಗುಲಿಯ ಮೇಲೆ! ಬಾಲ್ಯದ ಗೆಳೆತನ ತಂದುಕೊಟ್ಟ ಅಪರೂಪದ ಆಸ್ವಾದನೆ. ಆದರೂ ಪಟ್ಟುಬಿಡದ ತಿಮ್ಮೇಗೌಡರು, ಕೆಂಗಲ್ಲರನ್ನು ಕರೆತಂದು ಇಬ್ಬರು ಮಹನೀಯರನ್ನೂ ಸತ್ಕರಿಸಿ ಬಾಲ್ಯದ ಗೆಳೆತನಕ್ಕೊಂದು ಸಲಾಮು ಹೊಡೆದು, ಆ ಇಳೀವಯಸ್ಸಿನಲ್ಲೂ ಬಿಳೀ ಮೀಸೆಯಲ್ಲೇ ನಗುತ್ತಿದ್ದರು ತ್ಯಾಮಗೊಂಡ್ಲು ತಿಮ್ಮೇಗೌಡ. ಇವರಿಬ್ಬರ ಗೆಳೆತನಕ್ಕೆ ಮಾರು ಹೋದ ಕೆಂಗಲ್ಲರು ಎಲ್ಲಿಯ ಸರ್ ಎಂ.ವಿ., ಎಲ್ಲಿಯ ತಿಮ್ಮೇಗೌಡ, ಎಲ್ಲಿಯ ತ್ಯಾಮಗೊಂಡ್ಲು, ಎಲ್ಲಿಯ ಹನುಮಂತಯ್ಯ– ಹೀಗೆ ಯೋಚಿಸುತ್ತಾ ಅವರಿಬ್ಬರ ಮಾತುಕತೆಯನ್ನೇ ದಿಟ್ಟಿಸಿ ನೋಡುತ್ತಿದ್ದರು. ಮಾತಿನ ಮಧ್ಯೆ ಆರ್ಥಿಕವಾಗಿ ಈಗ ಹೇಗಿದ್ದೀಯಾ ತಿಮ್ಮೇಗೌಡ ಎಂದರಂತೆ ಸರ್ ಎಂ.ವಿ. ಓಹೋ! ನನಗೇನಾಗಿದೆ ವಿಶ್ವೇಶ್ವರಯ್ಯನವರೇ, ಹತ್ತು ಜನಕ್ಕೆ ಕೈಬಿಚ್ಚಿ ದಾನ ಮಾಡೋವಷ್ಟು ಜಮೀನು, ದವಸಧಾನ್ಯ ತುಂಬಿದೆ. ನಾನು ಚೆನ್ನಾಗಿದ್ದೀನಿ. ಯಾರ ಬಳಿಯೂ ಕೈಚಾಚುವ ಸ್ಥಿತಿಯಿಲ್ಲ. ಕೈಬಿಚ್ಚಿ ಕೊಡುವ ಸ್ಥಿತಿಯಲ್ಲಿದ್ದೀನಿ ಎಂದರಂತೆ ಗೌಡರು. ಗೌಡರಿಗೆ ಮರುಮಾತಾಡಲು ಅವಕಾಶಕೊಡದೆ ನಿಮ್ಮೂರಲ್ಲಿ ಹೈಸ್ಕೂಲು ಇದೆಯಾ ಎಂದು ಕೇಳಿದರಂತೆ. 'ಇಲ್ಲ ಸ್ವಾಮಿ' ಎಂದರಂತೆ ಗೌಡರು. ಹಾಗಾದರೆ ನಿನ್ನ ಖರ್ಚಿನಲ್ಲಿ ತ್ಯಾಮಗೊಂಡ್ಲುವಿನಲ್ಲಿ ಒಂದು 'ಹೈಸ್ಕೂಲು' ಕಟ್ಟಿಸು ಎಂದರಂತೆ. ಅದಕ್ಕೆ ಒಪ್ಪಿದ ಗೌಡರು ನಾನು ಕಟ್ಟಿಸುತ್ತೇನೆ. ಆದರೆ ಉದ್ಘಾಟನೆಗೆ ನೀವೇ ಬಂದು ನೆರವೇರಿಸಿಕೊಡಬೇಕು ಎಂದರಂತೆ. ಗೆಳೆಯನ ಮಾತಿಗೆ ಒಪ್ಪಿದ ಸರ್ ಎಂ.ವಿ. ಮಾತು ಮುಗಿಸಿ ಆತ್ಮೀಯವಾಗಿ ಬೀಳ್ಕೊಂಡು ತ್ಯಾಮಗೊಂಡ್ಲುವಿನ ಬಹುದಿನಗಳ ಬಯಕೆ ತೀರಿಸಿಕೊಂಡು ಕೆಂಗಲ್ಲರ ಜೊತೆ ಬೆಂಗಳೂರಿನ ಕಡೆಗೆ ಹೊರಟರಂತೆ. ಇತ್ತ ಹಠಕ್ಕೆ ಬಿದ್ದ ತಿಮ್ಮೇಗೌಡರು ತ್ಯಾಮಗೊಂಡ್ಲುವಿನಲ್ಲಿ ಹೈಸ್ಕೂಲು ಕಟ್ಟಿಸಿಯೇ ಬಿಟ್ಟರು. ಉದ್ಘಾಟನೆಗೆ ದಿನಾಂಕ ನಿಗದಿ ಮಾಡಿ ಸರ್ ಎಂ.ವಿಶ್ವೇಶ್ವಯ್ಯನವರನ್ನು ಕರೆದೇಬಿಟ್ಟರು. ಬಾಲ್ಯದ ಗೆಳೆಯನ ಉತ್ಸಾಹ ಕಂಡು ಉದ್ಘಾಟನೆಗೆ ಬಂದ ಸರ್ ಎಂ.ವಿ. ಅವರಿಗೆ ಆಶ್ಚರ್ಯ ಕಾದಿತ್ತು. ತಿಮ್ಮೇಗೌಡರು ತಾವು ಕಟ್ಟಿದ ಪ್ರೌಢಶಾಲೆಗೆ 'ಸರ್ ಎಂ.ವಿಶ್ವೇಶ್ವರಯ್ಯ ಪ್ರೌಢಶಾಲೆ' ಅಂತ ಹೆಸರಿಟ್ಟು ಬೋರ್ಡು ಬರೆಸಿದ್ದರಂತೆ. ಬೋರ್ಡು ಬದಲಾಯಿಸುವುದಿದ್ದರೆ ಮಾತ್ರ ನಾನು ಉದ್ಘಾಟನೆ ಮಾಡುವುದಾಗಿ ಇಲ್ಲದಿದ್ದರೆ ವಾಪಸ್ಸು ಹೊರಡುವುದಾಗಿ ಹೇಳಿದರಂತೆ ಸರ್ ಎಂ.ವಿ. ಅವರ ಮಾತಿಗೆ ಪ್ರೀತಿಯಿಂದ ಒಪ್ಪಿದ ಗೌಡರು ಸರ್ ಎಂ.ವಿ.ಯವರ ಮಾತಿನಂತೆ 'ಸಾರ್ವಜನಿಕ ಪ್ರೌಢ ಶಾಲೆ' ಎಂದು ಬರೆಸಿದರಂತೆ. ಹೀಗೆ ತ್ಯಾಮಗೊಂಡ್ಲು ತಿಮ್ಮೇಗೌಡರು ಪ್ರೌಢಶಾಲೆ ಕಟ್ಟಲು ಬಾಲ್ಯದ ಗೆಳೆತನದ ಅಪರೂಪದ ಭೇಟಿ ಕಾರಣವಾಯಿತು. ಊರಿಗೆ ಉಪಕಾರಿಯಾಯಿತು. ಇಂದಿಗೂ ಆ ಪ್ರೌಢಶಾಲೆಯು ಸರ್ಕಾರಿ ದಾಖಲೆಯಲ್ಲಿ ಮಾಕನಕುಪ್ಪೆ ತಿಮ್ಮೇಗೌಡರಿಂದ ದಾನವಾಗಿ ಬಂದ ಜಾಗ ಎಂದೇ ದಾಖಲಾತಿ ಇದೆ. ಇದನ್ನು ಕಂಡ ಮತ್ತೊಬ್ಬ ದಾನಿ ನರಸಮ್ಮ ತಿಮ್ಮರಾಯಪ್ಪ ಆ ಊರಿನ ಪದವಿಪೂರ್ವ ಕಾಲೇಜಿಗೆ ದಾನರೂಪದಲ್ಲಿ ಜಾಗ ಕೊಡುತ್ತಾರೆ. ಹೀಗೆ ದಾನಪರಂಪರೆಯೊಂದು ಸಾರ್ವಜನಿಕ ಹಿತಾಸಕ್ತಿಯಾಗಿ ಹಳ್ಳಿಗಳಲ್ಲಿ ಹುಟ್ಟಿಕೊಂಡ ನೂರಾರು ಕತೆಗಳಿವೆ. ಆದರೆ ಇದರ ಮುಂದುವರಿದ ಭಾಗ ಹೇಗಿದೆ ಗೊತ್ತೆ? ಸ್ವತಃ ತಿಮ್ಮೇಗೌಡರು ಬದುಕಿದ್ದಾಗಲೇ ಅವರ ಹೆಸರನ್ನು ಅವರು ಎಲ್ಲೂ ಹಾಕಿಕೊಂಡಿರಲಿಲ್ಲ. ತಿಮ್ಮೇಗೌಡರು ಕಾಲವಾದ ಮೇಲೆ ಬೆಳಗೆರೆ ಕೃಷ್ಣಶಾಸ್ತ್ರಿಗಳು ಮತ್ತವರ ಗೆಳೆಯರು ಈ ಕತೆ ಕೇಳಿ ತ್ಯಾಮಗೊಂಡ್ಲುವಿನಲ್ಲಿ ತಿಮ್ಮೇಗೌಡರು ಕಟ್ಟಿಸಿದ ಪ್ರೌಢಶಾಲೆಯನ್ನು ನೋಡಲು ಹೋಗಿದ್ದಾರೆ. ಬೋರ್ಡಿನಲ್ಲಿ ಆ ಪ್ರೌಢಶಾಲೆಯ ಹೆಸರು 'ತಿಮ್ಮೇಗೌಡ ಪ್ರೌಢಶಾಲೆ' ಅಂತ ಇತ್ತು. ತಿಮ್ಮೇಗೌಡರ ಮಕ್ಕಳು ಸ್ಥಳೀಯ ರಾಜಕಾರಣದಲ್ಲಿ ಸಕ್ರಿಯವಾಗಿದ್ದರು. ಬೆಳಗೆರೆ ಕೃಷ್ಣಶಾಸ್ತ್ರಿಗಳು ಮತ್ತವರ ಸಂಗಡಿಗರು ತಿಮ್ಮೇಗೌಡರ ಮಕ್ಕಳಿಗೆ ಈ ಮೊದಲು ಶಾಲೆಯ ಹೆಸರು 'ಸಾರ್ವಜನಿಕ ಪ್ರೌಢಶಾಲೆ' ಅಂತ ಇದ್ದಿರಬೇಕಲ್ಲ ಎಂದರಂತೆ. ಹೌದು ಸ್ವಾಮಿ ನಮ್ಮಪ್ಪ ಕಟ್ಟಿಸಿದ ಶಾಲೆ. ಶಾಲೆಗೆ ನಮ್ಮಪ್ಪನ ಹೆಸರೇ ಇಲ್ಲ ಅಂದರೇ ಊರಲ್ಲಿ ನಮ್ಮನ್ಯಾರು ಗುರುತು ಹಿಡಿತಾರೆ. ನಮ್ಮನ್ನು ಗುರುತು ಹಿಡೀಬೇಕು ಅಂದ್ರೆ ನಮ್ಮಪ್ಪನ ಹೆಸರು ಶಾಲೆಗೆ ಇರಬೇಕು ಅಂತ ಬದಲಾಯಿಸಿದ್ವಿ ಅಂತ ತಿಮ್ಮೇಗೌಡರ ಮಗನ ಮಾತು. ಆದರೆ ಈಗ ಅದು 'ಕರ್ನಾಟಕ ಪಬ್ಲಿಕ್ ಸ್ಕೂಲ್' ಆಗಿ ಮಾರ್ಪಾಟಾಗಿದೆ. ಅದೇನೇ ಇರಲಿ ಗೆಳೆಯರಿಬ್ಬರ ಆತ್ಮೀಯತೆ, ವಿಶ್ವೇಶ್ವರಯ್ಯನವರು ಸಹಪಾಠಿಯೊಬ್ಬನನ್ನು ಹುಡುಕಿಕೊಂಡು ಹೋದ ಪ್ರಸಂಗ. ಆ ಪ್ರಸಂಗದಿಂದ ಹುಟ್ಟಿದ ಹೈಸ್ಕೂಲು ಮುಖ್ಯಮಂತ್ರಿಯಂಥ ಹುದ್ದೆಯಲ್ಲಿದ್ದರೂ ಘನತೆಯಿಂದ ಸರಳ–ಸಜ್ಜನಿಕೆಗೆ ಸಾಕ್ಷಿಯಾದ ಕೆಂಗಲ್ ಹನುಮಂತಯ್ಯನವರು ಇದು ನಮ್ಮ ಹಿರಿಯ ತಲೆಮಾರು. ನಮ್ಮನ್ನು ಸಮಜಾಯಿಸಿದ ಸಮಾಜಕರ್ತರು. ಐಡೆಂಟಿಟಿಯಾಗಿ ಅಪ್ಪನ ಹೆಸರನ್ನು ಹುಡುಕಿದ ಮಕ್ಕಳು ನಮ್ಮ ತಲೆಮಾರು. ಅದೇನೇ ಇರಲಿ ತ್ಯಾಮಗೊಂಡ್ಲು ತಿಮ್ಮೇಗೌಡ ಅಜರಾಮರ. ಸರ್ ಎಂ.ವಿ., ಕೆಂಗಲ್ಲರು, ಈ ನಾಡಿಗೇ ವರ. ಈ ಪ್ರಸಂಗವನ್ನು ಹುಡುಕಿ ಹೊರಟವರು ಬೆಳಗೆರೆ ಕೃಷ್ಣಶಾಸ್ತ್ರಿಗಳು. ಚಿತ್ರದುರ್ಗದ ಖ್ಯಾತ ಲೇಖಕ ಬಿ.ಎಲ್. ವೇಣು ಅವರಿಗೆ ಬೆಳಗೆರೆ ಕೃಷ್ಣಶಾಸ್ತ್ರಿಗಳು ಕತೆ ಹೇಳಿದರೆ, ನಂಜನಗೂಡಿನ ಜೆ.ಪಿ. ನನಗೆ ಹೇಳಿದರು. ನಾನು ನಿಮಗೆ ಹೇಳಿದ್ದೇನೆ. ನೀವು ನಿಮ್ಮ ಮಕ್ಕಳಿಗೆ ಹೇಳಿ! ಇದು ತಲೆಮಾರಿನ ತಳಮಳ, ಗೆಳೆತನದ ಪರಿಮಳ. ಏನಂತೀರಿ?

## ರಾಜ್ಯದಲ್ಲಿ ಫ್ಯಾಕ್ಟ್ ಚೆಕ್ ಘಟಕ ರಚನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಮೋದನೆ

### ಸುಳ್ಳು ಸುದ್ದಿ ಪತ್ತೆ-ನಿಯಂತ್ರಣ-ಕಠಿಣ ಶಿಕ್ಷೆಗೆ ತುರ್ತು ಕ್ರಮ

ಬೆಂಗಳೂರು, ಆ.21– ಪ್ರಜಾಪ್ರಭುತ್ವಕ್ಕೆ ಬೆದರಿಕೆ ಹಾಗೂ ಸಮಾಜದ ಧ್ರುವೀಕರಣಕ್ಕೆ ಸುಳ್ಳು ಸುದ್ದಿಗಳು ಕಾರಣವಾಗಿದ್ದು, ಇದರ ನಿಯಂತ್ರಣ ಅತ್ಯಗತ್ಯ ಎಂದು ಅಭಿಪ್ರಾಯಪಟ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ಫ್ಯಾಕ್ಟ್ ಚೆಕ್ ಘಟಕ ಸ್ಥಾಪನೆ ಸೇರಿದಂತೆ ಅಗತ್ಯ ಇರುವ ಎಲ್ಲಾ ನಿಯಮ ಮತ್ತು ಕಾನೂನು ರೂಪಿಸುವ ಪ್ರಯತ್ನಕ್ಕೆ ಗ್ರೀನ್ ಸಿಗ್ನಲ್ ನೀಡಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸೈಬರ್ ಸುರಕ್ಷತೆಗೆ ಸಂಬಂಧಿಸಿದಂತೆ ಸಭೆಯಲ್ಲಿ ಅವರು ಈ ತೀರ್ಮಾನ ಮಾಡಿದರು.

ಸುಳ್ಳು ಸುದ್ದಿಗಳ ಮತ್ತು ಸುಳ್ಳು ಸುದ್ದಿ ಸೃಷ್ಟಿಸುವ ಸಿಂಡಿಕೇಟ್‌ಗಳ ಪತ್ತೆ, ಸುಳ್ಳು ಸುದ್ದಿ ಪ್ರಸಾರಕ್ಕೆ ತಡೆ, ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡುವ ಮೂರು ಹಂತಗಳ ಕ್ರಮಕ್ಕೆ ಅನುಮೋದನೆ ನೀಡಿದರು.

**ರಾಜ್ಯದಲ್ಲಿ ಫ್ಯಾಕ್ಟ್ ಚೆಕ್ ಘಟಕ ರಚನೆ**: ಫ್ಯಾಕ್ಟ್ ಚೆಕ್ ಘಟಕವು ಮೇಲುಸ್ತುವಾರಿ ಸಮಿತಿ, SOPC ಪರಿಶೀಲನೆ, ನೋಡಲ್ ಅಧಿಕಾರಿಗಳ ನೇಮಕ ಸೇರಿದಂತೆ ಸತ್ಯ ತಪಾಸಣೆ ತಂಡ ವಿಶ್ಲೇಷಣಾ ತಂಡವನ್ನು ಒಳಗೊಳ್ಳಲಿದೆ. ಹಾಗೂ ಸಾಮರ್ಥ್ಯ ವರ್ಧನೆ ತಂಡ ರಚನೆ ಮಾಡಿ ವ್ಯವಸ್ಥಿತವಾಗಿ ತಂತ್ರಜ್ಞಾನ ಬಳಕೆ ಮಾಡಬಹುದು ಎಂದು ಸಭೆಯಲ್ಲಿ ವಿವರಿಸಲಾಯಿತು.



ಬೆಂಗಳೂರು ಪೊಲೀಸ್ ಕೂಡ ಸಾಮಾಜಿಕ ಮಾಧ್ಯಮಗಳಲ್ಲಿ ಕ್ರಿಯಾಶೀಲವಾಗಿದ್ದರೂ, ರಾಜ್ಯದಲ್ಲಿ ಫ್ಯಾಕ್ಟ್ ಚೆಕ್ ಘಟಕ ಅಗತ್ಯವಿದೆ. ಎಐ ಬಳಕೆ ಮಾಡಿ ಡೀಪ್ ಫೇಕ್ ಕೂಡ ಉಪಯೋಗ ಮಾಡಲಾಗುತ್ತಿದೆ. ಇದು ಸುಳ್ಳು ಸುದ್ದಿ ಹರಡುವವರಿಗೆ ಅನುಕೂಲವಾಗುತ್ತದೆ ಎಂದು ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದರು.

ಫೇಕ್ ಸುದ್ದಿ ಜಾಲ ಜಾಗತಿಕವಾಗಿ ಬಾಲ್ಯಾವಸ್ಥೆಯಲ್ಲಿದ್ದರೂ ಕಾಲಾಂತರದಲ್ಲಿ ವ್ಯಾಪಕವಾಗಿ ಬಳಕೆಯಾಗುವ ಸಾಧ್ಯತೆಯೂ ಇದೆ. ಸುಳ್ಳು ಸುದ್ದಿ ಬಳಕೆ ಮಾಡುವವರಿಗೆ ಶಿಕ್ಷೆ ಕೂಡ ಆಗಬೇಕು. ಈ ಸಮಿತಿ ಕೂಡಲೇ ರಚಿಸಿ ಸಾಮರ್ಥ್ಯ ಹೆಚ್ಚಿಸುವ ಕೆಲಸ ಆಗಬೇಕು ಎಂದು ಗೃಹ ಸಚಿವ ಜಿ.ಪರಮೇಶ್ವರ್ ಅಭಿಪ್ರಾಯಪಟ್ಟರು.

ಸುಳ್ಳು ಸುದ್ದಿ ಗುರುತಿಸುವುದು, ಕಾನೂನು ಸುವ್ಯವಸ್ಥೆ ಕಾಪಾಡಲು ಇದು ಅತ್ಯಗತ್ಯ. ಆರಂಭಿಕ ಹಂತದಲ್ಲಿ ಐ.ಟಿ ಬಿಟಿ ಇಲಾಖೆ ಸಹಕರಿಸುತ್ತದೆ. ಕಾನೂನಿನ ವ್ಯಾಪ್ತಿಯಲ್ಲಿ ತರಲು ಕ್ರಮ ವಹಿಸಬೇಕು ನಂತರ ಘಟಕವು ಗೃಹ ಇಲಾಖೆಯ ವ್ಯಾಪ್ತಿಯಲ್ಲಿಯೇ ಇರುವುದು ಸೂಕ್ತ ಎಂದು ಸಚಿವ ಪ್ರಿಯಾಂಕ ಖರ್ಗೆ ಅಭಿಪ್ರಾಯಪಟ್ಟರು.

ಸಚಿವ ಕೃಷ್ಣಭೈರೇಗೌಡ ಮಾತನಾಡಿ, ಫ್ಯಾಕ್ಟ್ ಚೆಕ್ ಘಟಕ ಸ್ಥಾಪನೆಯಿಂದ ಸುಳ್ಳುಸುದ್ದಿ ಹರಡುವುದನ್ನು ನಿಯಂತ್ರಿಸಿ ಇದು ಶಿಕ್ಷಾರ್ಹ ಅಪರಾಧ ಎಂದು ಜನರಿಗೆ ಮನವರಿಕೆಯಾಗಬೇಕು ಎಂದರು.

ಸಭೆಯಲ್ಲಿ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ಡಾ.ರಜನೀಶ್ ಗೋಯಲ್, ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಹೇಮಂತ್ ನಿಂಬಾಳ್ಕರ್ ಉಪಸ್ಥಿತರಿದ್ದರು.

## ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಶಾಶ್ವತ ಕಟ್ಟಡಕ್ಕೆ ಅನುಮತಿ ಇಲ್ಲ

### ಹೈಕೋರ್ಟ್‌ನಲ್ಲಿ ನಟ ಗಣೇಶ್‌ಗೆ ಹಿನ್ನಡೆ

**ಬೆಂಗಳೂರು:** ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಶಾಶ್ವತ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡಲಾಗದು ಎಂದು ಹೈಕೋರ್ಟ್ ಇಂದು ತಿಳಿಸಿದೆ. ಇದರಿಂದ ಬಂಡೀಪುರದ ಬಳಿಯ ಹಂಗಳ ಹೋಬಳಿಯ ಜಕ್ಕಳ್ಳಿಯಲ್ಲಿ ಬೃಹತ್ ಮನೆ ನಿರ್ಮಾಣಕ್ಕೆ ಮುಂದಾಗಿದ್ದ ಚಿತ್ರನಟ ಗಣೇಶ್ ಅಲಿಯಾಸ್ ಗೋಲ್ಡನ್ ಸ್ಟಾರ್ ಗಣೇಶ್‌ಗೆ ಹಿನ್ನಡೆಯಾಗಿದೆ.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಹಂಗಳ ಹೋಬಳಿಯ ಜಕ್ಕಳ್ಳಿಯಲ್ಲಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿ ಅರಣ್ಯ ಇಲಾಖೆ ನೀಡಿದ್ದ ನೊಟೀಸ್ ಪ್ರಶ್ನಿಸಿ ಗಣೇಶ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರಿದ್ದ ನ್ಯಾಯಪೀಠ, ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ತಾತ್ಕಾಲಿಕ ವಾಸದ ಮನೆ ನಿರ್ಮಾಣಕ್ಕೆ ಮಾತ್ರ ಅವಕಾಶವಿದೆ. ಇದರ ಜೊತೆಗೆ, ಯಾವುದೇ ಬೃಹತ್ ಮತ್ತು ಶಾಶ್ವತ ಕಟ್ಟಡ ನಿರ್ಮಾಣಕ್ಕೆ ಅವಕಾಶವಿಲ್ಲ. ಈ ನಿಟ್ಟಿನಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಲಾಗದು ಎಂದು ತಿಳಿಸಿತು.

ಅಲ್ಲದೇ, ಬೃಹತ್ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದ ಕ್ರಮವನ್ನು ಪ್ರಶ್ನಿಸಿ ಅರಣ್ಯ ಇಲಾಖೆ ನೀಡಿರುವ ನೊಟೀಸ್‌ಗೆ ಅರ್ಜಿದಾರ ಗಣೇಶ್ ಮುಂದಿನ ವಾರದಲ್ಲಿ ಉತ್ತರ ನೀಡಬೇಕು. ಈ ಉತ್ತರಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯ ಅಧಿಕಾರಿಗಳು ಮುಂದಿನ ನಾಲ್ಕು ವಾರಗಳಲ್ಲಿ ಪರಿಶೀಲನೆ ನಡೆಸಿ ವಿಚಾರಣೆ ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದೆ. ಆದರೆ, ಈ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಯಾವುದೇ ರೀತಿಯಲ್ಲಿಯೂ ಕಟ್ಟಡ ನಿರ್ಮಾಣ ಕಾಮಗಾರಿ ಪುನರಾರಂಭಿಸಬಾರದು ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

**ಪ್ರಕರಣದ ಹಿನ್ನೆಲೆ:** ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಚಿತ್ರನಟ ಗಣೇಶ್ ಜಮೀನು ಖರೀದಿಸಿದ್ದರು. ಈ ಜಮೀನಿನಲ್ಲಿ ತೋಟದ ಮನೆ ಕಟ್ಟುವುದಕ್ಕೆ ಅನುಮತಿ ನೀಡುವಂತೆ ಅರಣ್ಯ ಇಲಾಖೆಗೆ ಮನವಿ ಮಾಡಿದ್ದರು. ಮನವಿ ಕುರಿತು ಪರಿಶೀಲನೆ ನಡೆಸಿದ್ದ ಅರಣ್ಯ ಇಲಾಖೆ ಮತ್ತು ಪ್ರಾದೇಶಿಕ ಆಯುಕ್ತರು ತಾತ್ಕಾಲಿಕ ವಾಸದ ಮನೆ ನಿರ್ಮಾಣಕ್ಕೆ ಅನುಮತಿಸಿದ್ದರು.

ಇದಕ್ಕೆ ಗಣೇಶ್ ಅವರು, ತಾತ್ಕಾಲಿಕ ವಾಸದ ಮನೆ ನಿರ್ಮಾಣ ಮಾಡಲಾಗುವುದು. ವನ್ಯಜೀವಿಗಳಿಗೆ ಯಾವುದೇ ರೀತಿಯಲ್ಲಿಯೂ ತೊಂದರೆಯಾಗುವಂತಹ ಕ್ರಮಗಳನ್ನು ಕೈಗೊಳ್ಳಲಾಗುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟಿದ್ದರು.


*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

ಮೈಸೂರು ಮಿತ್ರ





ಭಾನುವಾರ ಮೈಸೂರಿಗೆ ಭೇಟಿ ನೀಡಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶ್ರೀಗಳಿಂದ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಶಾಸಕ ಜಿ.ಟಿ. ದೇವೇಗೌಡ, ಮಾಜಿ ಸಚಿವ ಸಾ.ರಾ. ಮಹೇಶ್, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮತ್ತಿತರರಿದ್ದರು.



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರಿಂದ ಆಶೀರ್ವಾದ ಪಡೆದರು.

## ಆರೋಗ್ಯ ಸಚಿವ ದಿನೇಶ್ ಗುಂಡೂರಾವ್‌ರಿಂದ ಜೀವಧಾರ ರಕ್ತ ನಿಧಿ ಕೇಂದ್ರಕ್ಕೆ ಪ್ರಶಂಸಾ ಫಲಕ



ಮೈಸೂರು, ಆ. 21– ಇತ್ತೀಚೆಗೆ ಬೆಂಗಳೂರಿನ ಯಶವಂತಪುರದ ಸ್ಪರ್ಶ ಆಸ್ಪತ್ರೆಯ ಸಭಾಂಗಣದಲ್ಲಿ ಆಯೋಜಿಸಿದ ಬ್ಲಡ್ ಬ್ಯಾಂಕ್‌ನ ಬ್ಲಡ್ ಟ್ರಾನ್ಸ್ ಫ್ಯೂಷನ್ ಮೆಡಿಸಿನ್ ವಿಷಯ ಕುರಿತ ನಿರಂತರ ವೈದ್ಯಕೀಯ ಶಿಕ್ಷಣ ಸಮ್ಮೇಳನದಲ್ಲಿ ಮೈಸೂರು ನಗರದ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ವೈದ್ಯಕೀಯ ಸಚಿವ ದಿನೇಶ್ ಗುಂಡೂರಾವ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಅವರಿಗೆ ಪ್ರಶಂಸೆ ಫಲಕ ಹಾಗೂ ಪತ್ರ ನೀಡಿ ಅಭಿನಂದಿಸಲಾಯಿತು. ಕರ್ನಾಟಕ ರಾಜ್ಯ ರಕ್ತ ಸಂಚಲನ ಪರಿಷತ್ ಇಲಾಖೆಯ ಯೋಜನಾ ನಿರ್ದೇಶಕ ನಾಗರಾಜ್, ಇಂಡಿಯನ್ ಅಸೋಸಿಯೇಷನ್ ಆಫ್ ಬ್ಲಡ್ ಬ್ಯಾಂಕ್ ಅಧ್ಯಕ್ಷ ಲಯನ್ ಎಸ್.ಮನೋಜ್ ಕುಮಾರ್, ಕರ್ನಾಟಕ ರಾಜ್ಯ ಔಷಧಿ ನಿಯಂತ್ರಕ ಬಾಗೂಜಿ ಟಿ.ಖಾನಾಪೂರೆ, ಡಾ. ಜೈರಾಜ್, ಗಿರೀಶ್ ಬುಡರಕಟ್ಟಿ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ನ್ಯೂರೋಜೋನ್ ವತಿಯಿಂದ ಶಕ್ತಿನಗರದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮಹಿಳಾ ವಿದ್ಯಾರ್ಥಿ ನಿಲಯದಲ್ಲಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಶುಶ್ರುತ ಹೆಚ್.ವಿ.ಗೌಡ ನೇತೃತ್ವದಲ್ಲಿ ವಿದ್ಯಾರ್ಥಿನಿಯರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಚಿತ್ರದಲ್ಲಿ ನಿಲಯಪಾಲಕರಾದ ಹೇಮಲತಾ ಮತ್ತಿತರರನ್ನು ಕಾಣಬಹುದು.

## ದಸರಾ ವಸ್ತುಪ್ರದರ್ಶನದ ವೀರಾಂಜನೇಯನಿಗೆ ಕೇಸರಿ ಚಂದ್ರಾಲಂಕಾರ; ಭಕ್ತರಿಗೆ ಅನ್ನ ಸಂತರ್ಪಣೆ



ಮೈಸೂರು, ಆ.21–ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿನ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವೀರಾಂಜನೇಯ ಸ್ವಾಮಿ ದೇವಸ್ಥಾನ ಭಕ್ತಸೇವಾ ಮಂಡಳಿ ವತಿಯಿಂದ ಮೊದಲ ಶ್ರಾವಣ ಶನಿವಾರದಂದು ಕೇಸರಿ ಚಂದ್ರಾಲಂಕಾರ, ಪುರುಷಸೂಕ್ತ ಪಂಚಾಮೃತ ಅಭಿಷೇಕ, ಹನುಮಾನ್ ಚಾಲೀಸ ಪಠಣ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಇನ್ನಿತರೆ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ ಮಾತನಾಡಿ, ವೀರಾಂಜನೇಯ ಸ್ವಾಮಿ ದೇವಸ್ಥಾನವನ್ನು 1840ರಲ್ಲಿ ಅರಮನೆಯ ಮುಂಭಾಗ ದೊಡ್ಡಕೆರೆ ದಡದಲ್ಲಿ ಮೈಸೂರು ಸಂಸ್ಥಾನದ ಸಂಗೀತ ಗುರುಗಳಾಗಿದ್ದ ವೀಣೆ ವೆಂಕಟ ಕೃಷ್ಣಸುಬ್ಬಯ್ಯ ಅವರ ನೆನಪಿಗಾಗಿ ಅವರ ಧರ್ಮಪತ್ನಿ ವೆಂಕಮ್ಮ ಅವರು ಜನಸಾಮಾನ್ಯರು ಮದುವೆ, ಧಾರ್ಮಿಕ ಕಾರ್ಯಗಳಿಗೆ ಸಹಾಯವಾಗಲೆಂದು ನಿರ್ಮಿಸಿದ್ದರು. ನಂತರದ ದಿನದಲ್ಲಿ ಸಾಹುಕಾರ್ ಚೆನ್ನಯ್ಯ ಕುಸ್ತಿ ಅಖಾಡದಲ್ಲಿ ತಾಲೀಮು ಮಾಡುವ ಕುಸ್ತಿಪಟುಗಳು ಪ್ರತಿನಿತ್ಯ ಪೂಜಾ ಕಾರ್ಯ, ಸಾಮೂಹಿಕ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಮುಂದಿನ ದಿನಗಳಲ್ಲಿ ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಹಮ್ಮಿಕೊಳ್ಳಲು ಮೈಸೂರು ದಸರಾ ವಸ್ತುಪ್ರದರ್ಶನ ಸಂದರ್ಭದಲ್ಲಿ ಇಲ್ಲಿ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಆಯೋಜಿಸುವಂತೆ ಮನವಿ ಮಾಡಿದರು.

ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್‌ಗೌಡ, ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಿದ ನಂತರ ಮಾತನಾಡಿ, ಮೈಸೂರು ಅರಮನೆ ಮುಂಭಾಗವಿರುವ ದಸರಾ ವಸ್ತುಪ್ರದರ್ಶನ ವಿಶ್ವವಿಖ್ಯಾತವಾಗಿದೆ. ಇಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು ಸಾವಿರಾರು ಕಲಾವಿದರಿಗೆ ವೇದಿಕೆ ಒದಗಿಸುತ್ತಿದೆ. 183 ವರ್ಷಗಳ ಹಿಂದೆಯೇ ಸ್ಥಾಪಿತವಾದ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಪೂಜಾ ಕಾರ್ಯಕ್ರಮ, ಅನ್ನದಾನ ನಡೆಯುತ್ತಿದೆ ಎಂದರು.

ದಸರಾ ವಸ್ತು ಪ್ರದರ್ಶನದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ರಾಜೇಶ್ ಜಿ ಗೌಡ, ಕಾಂಗ್ರೆಸ್ ನಗರಾಧ್ಯಕ್ಷ ಆರ್. ಮೂರ್ತಿ, ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ನಗರಪಾಲಿಕೆ ಮಾಜಿ ಸದಸ್ಯ ಗುಡ್ಡಪ್ಪ ಶಿವಣ್ಣ, ಕೆಪಿಸಿಸಿ ಸದಸ್ಯ ನಜರಬಾದ್ ನಟರಾಜ್, ಕಾಂಗ್ರೆಸ್ ಮುಖಂಡರಾದ ದಿನೇಶ್, ಎಂಕೆ ಅಶೋಕ, ರಘು ಸಿಎಸ್, ಪಳನಿ ರಾಜೇಶ್, ಎಡ್ವಿನ್, ವಿನಯ್ ಕಣಗಾಲ್, ಮಂಜುಗೌಡ, ಒಂಟಿಕೊಪ್ಪಲು ಗುರು, ರಂಗಸ್ವಾಮಿ ಪಾಪು, ಅರ್ಚಕ ಪಣೀಶ್, ಅಂಬಾರಿ ಪುರೋಹಿತ ಪ್ರಹಲ್ಲಾದ್, ರವಿ, ಎಸ್.ಎನ್. ರಾಜೇಶ್ ಇನ್ನಿತರರು ಉಪಸ್ಥಿತರಿದ್ದರು.

# ಕೇವಲ ಮೌಢ್ಯ ತುಂಬುವಂತಹ ಶಿಕ್ಷಣ ವ್ಯವಸ್ಥೆ ಬೇಡ ಎಂಬ ಕಾರಣಕ್ಕೆ ರಾಷ್ಟ್ರೀಯ ಶಿಕ್ಷಣ ನೀತಿ ಪುನರ್ ವಿಮರ್ಶೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ವಿವರಣೆ ● ಎನ್‌ಇಪಿ ಪುನರ್ ವಿಮರ್ಶೆ ಸಂಬಂಧ ಕರೆದಿದ್ದ ತಜ್ಞರ ಸಭೆಯಲ್ಲಿ ವಿಚಾರ ವಿಮರ್ಶೆ ● ಪದವೀಧರರಲ್ಲಿ ಜಾತಿ, ಧರ್ಮ, ಭಾಷೆ, ಮೌಢ್ಯತೆ ತೊರೆಯುವ ಅನಿವಾರ್ಯತೆ ಬಗ್ಗೆ ಮನವರಿಕೆ

ಬೆಂಗಳೂರು, ಆ.21(ಕೆಎಂಶಿ)– ಪದವೀಧರ ಯುವಕ–ಯುವತಿಯರು ಯಾವುದೇ ಜಾತಿ, ಧರ್ಮ, ಭಾಷೆಗಳಿಂದ ಪ್ರಭಾವಿತರಾಗಬಾರದು. ಅದಕ್ಕೆ ನಾವು ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಯನ್ನು ಪುನರ್ ವಿಮರ್ಶೆ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸರ್ಕಾರದ ವ್ಯಾಪ್ತಿಯ ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಹಾಗೂ ಉನ್ನತ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಬೇರೆ ಬೇರೆ ಭಾಷೆ, ಸಂಸ್ಕೃತಿ ಮತ್ತಿತರ ಅಂಶಗಳ ಕಾರಣದಿಂದ ನಮ್ಮ ದೇಶದಲ್ಲಿ ಏಕ ಶಿಕ್ಷಣ ಪದ್ಧತಿ ಸಾಧ್ಯವಿಲ್ಲ.

ರಾಜಕೀಯ ಪ್ರಜಾಪ್ರಭುತ್ವ, ಸಾಮಾಜಿಕ ಪ್ರಜಾಪ್ರಭುತ್ವದ ತಳಹದಿಯ ಮೇಲಿದ್ದಾಗ ಮಾತ್ರ ದೇಶದಲ್ಲಿ ಸಮಾನತೆ ಸಾಧ್ಯ ಎಂದು ಅಂಬೇಡ್ಕರ್ ಅವರು ಹೇಳಿದ್ದಾರೆ. ಈ ಸಮ ಸಮಾಜ ನಿರ್ಮಾಣ ಮಾಡುವ ಸಾಮರ್ಥ್ಯವನ್ನು ನಾವು ವಿವಿಗಳ ಮೂಲಕ ಕೊಡಬೇಕು ಎಂದರು.

ವೈಜ್ಞಾನಿಕತೆ ಮತ್ತು ವೈಚಾರಿಕತೆ ಇಲ್ಲದೆ ತಲೆ ತುಂಬಾ ಕೇವಲ ಮೌಢ್ಯವನ್ನೇ ತುಂಬಿಕೊಂಡ ಪದವೀಧರರು ವಿಶ್ವ ವಿದ್ಯಾಲಯಗಳಿಂದ ಹೊರಗೆ ಬಂದರೆ ದೇಶಕ್ಕೆ, ನಾಡಿಗೆ ಮತ್ತು ಈ ಸಮಾಜಕ್ಕೆ ಏನು ಪ್ರಯೋಜನ? ವೈಜ್ಞಾನಿಕ ಮನೋಭಾವದ ಪದವೀಧರರನ್ನು ಸಜ್ಜುಗೊಳಿಸಿ ಕುಲಪತಿಗಳಿಗೆ ಸೂಚನೆ ನೀಡಿದರು. ಕೇವಲ ಮೌಢ್ಯಗಳನ್ನು ತುಂಬಿಕೊಂಡು ಹೊರಗೆ ಬಂದರೆ ಅದರಿಂದ ದೇಶಕ್ಕೂ ಉಪಯೋಗವಿಲ್ಲ.



ನಾಡಿಗೂ ಪ್ರಯೋಜನವಿಲ್ಲ. ಪದವೀಧರರ ಭವಿಷ್ಯಕ್ಕೂ ಉಪಯೋಗವಿಲ್ಲ. ಕರ್ನಾಟಕ ರಾಜ್ಯದ ನಿವ್ವಳ ನೋಂದಣಿ ಅನುಪಾತ (ಜಿಇಆರ್) ಶೇ.36 ರಷ್ಟಿದ್ದು, ರಾಷ್ಟ್ರೀಯ ಜಿಇಆರ್ ಶೇ.27.4 ರಷ್ಟಿದೆ 2030ರ ವೇಳೆಗೆ ಜಿಇಆರ್ ಶೇ.50ಕ್ಕೆ ಹೆಚ್ಚಿಸುವ ಗುರಿ ಇದೆ.

ಜಿಇಆರ್ ಪ್ರಮಾಣ ಕಡಿಮೆ ಇರುವ ಜಿಲ್ಲೆಗಳಾದ ಚಾಮರಾಜನಗರ, ಯಾದಗಿರಿ, ಹಾಸನ, ಕೊಪ್ಪಳ, ಕೊಡಗು ಮೊದಲಾದ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಹೆಚ್ಚಿಸಲು ಮತ್ತು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಅಗತ್ಯ ಕ್ರಮಗಳನ್ನು ಮತ್ತು ಸಂಶೋಧನೆಗಳನ್ನು ಹೆಚ್ಚಿಸುವಂತೆ ಮುಖ್ಯಮಂತ್ರಿಗಳು ಸೂಚಿಸಿದರು.

## ಮೈಸೂರು ವಿವಿ ಶಿಕ್ಷಣದ ಗುಣಮಟ್ಟದ ಸುಧಾರಣೆಗೆ ಸಲಹೆ

ರಾಜ್ಯದ ಅತ್ಯಂತ ಹಳೆಯ ಮತ್ತು ಮೊದಲ ವಿವಿ ಆಗಿರುವ ಮೈಸೂರು ವಿವಿಯ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ವಿಶ್ವವಿದ್ಯಾಲಯಗಳ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ಅನ್ನು ಎಸ್.ಪಿ.ಎಸ್.ಪಿ., ಟಿ.ಎಸ್.ಪಿ. ಅಡಿ ವಿತರಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿವಿಗಳಲ್ಲಿರುವ ಎಲ್ಲಾ ಸಮುದಾಯಗಳ ಪ್ರತಿ ವಿದ್ಯಾರ್ಥಿಗಳಿಗೂ ಲ್ಯಾಪ್ ಟಾಪ್ ವಿತರಿಸಬೇಕಿದೆ. ಮುಂದಿನ ದಿನಗಳಲ್ಲಿ ಇದಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು. ರಾಜ್ಯದ ವಿವಿಗಳಲ್ಲಿ ಮಂಜೂರಾದ ಹುದ್ದೆಗಳಲ್ಲಿ ಶೇ. 50 ಕ್ಕೂ ಹೆಚ್ಚು ಖಾಲಿ ಇದ್ದು, 1882 ಹುದ್ದೆಗಳಷ್ಟೇ ಭರ್ತಿಯಾಗಿವೆ. ವಿಶ್ವವಿದ್ಯಾಲಯಗಳ ಸಂಪನ್ಮೂಲದಿಂದಲೇ 2865 ಅತಿಥಿ ಉಪನ್ಯಾಸಕರಿಗೆ ವೇತನ ಭರಿಸುವ ಕಾರಣ, ಅವರಿಗೆ ಆರ್ಥಿಕ ಹೊರೆಯಾಗಿದೆ ಎಂಬುದನ್ನು ಕುಲಪತಿಗಳು ಮತ್ತು ಅಧಿಕಾರಿಗಳು ಮುಖ್ಯಮಂತ್ರಿಯವರ ಗಮನಕ್ಕೆ ತಂದರು. ನಿವೃತ್ತಿ ವೇತನ ವಿತರಣೆಯಲ್ಲಿ ಹಳೆಯ ವಿವಿಗಳು ವಿಭಜನೆಯಾದರೂ ಹಳೆಯ ವಿವಿಗಳು ಮಾತ್ರ ನಿವೃತ್ತಿ ವೇತನ ಪಾವತಿಸುತ್ತಿದ್ದಾರೆ. ಇದರಿಂದ ಹಳೆಯ ವಿವಿಗಳ ಆರ್ಥಿಕ ಹೊರೆ ಹೆಚ್ಚಾಗಿದೆ. ಪ್ರಸಕ್ತ ಆಯವ್ಯಯದಲ್ಲಿ ಉನ್ನತ ಶಿಕ್ಷಣ ಕ್ಷೇತ್ರಕ್ಕೆ 5470 ಕೋಟಿ ರೂ. ಹಂಚಿಕೆ ಮಾಡಲಾಗಿದ್ದು, 2474 ಕೋಟಿ ರೂ. ಹೆಚ್ಚುವರಿ ಅನುದಾನದ ಅಗತ್ಯವಿದೆ ಎಂದು ಕುಲಪತಿಗಳು ಮುಖ್ಯಮಂತ್ರಿಗಳಿಗೆ ಸಮಸ್ಯೆ ಹೇಳಿಕೊಂಡರು.

# ಕೈಗಾರಿಕೋದ್ಯಮಗಳ ಬೇಡಿಕೆಗೆ ಅನುಗುಣವಾದ ಪಠ್ಯ ರೂಪಿಸಿ

**ಬೆಂಗಳೂರು:** ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯು ಕೈಗಾರಿಕೋದ್ಯಮಗಳ ಬೇಡಿಕೆಗೆ ಅನುಗುಣವಾದ ಪಠ್ಯಕ್ರಮ ರೂಪಿಸಿ, ಎಂಜಿನಿಯರಿಂಗ್ ಪದವೀಧರರಿಗೆ ಹೆಚ್ಚಿನ ಉದ್ಯೋಗಾವಕಾಶ ಒದಗಿಸಲು ಅನುವಾಗುವಂತಹ ಶಿಕ್ಷಣಕ್ಕೆ ಒತ್ತು ನೀಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಶಿಕ್ಷಣ ತಜ್ಞರ ಸಭೆಯಲ್ಲಿ ಮಾತನಾಡಿದ ಅವರು, ಒಬ್ಬ ವ್ಯಕ್ತಿ ವಿವಿಯಿಂದ ಹೊರಗೆ ಬಂದ ಮೇಲೆ ಸಮಾಜದ ಜವಾಬ್ದಾರಿ ಹೊರುವ ಶಕ್ತಿ ಇರಬೇಕು. ಅಂತಹ ಜ್ಞಾನ ಬರಬೇಕು. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯ ಜೊತೆ ರಾಜೀ ಮಾಡಿಕೊಂಡು ಹೋಗುವುದಾದರೆ

### ಜಿಲ್ಲೆಗೊಂದು ವಿವಿ ನಿರ್ಧಾರ ಸರಿಯಲ್ಲ

ಅದು ಶಿಕ್ಷಣವೇ ಅಲ್ಲ. ಸಂವಿಧಾನಕ್ಕೆ ವಿರುದ್ಧವಾದ ಚಟುವಟಿಕೆ ಮತ್ತು ಕ್ರಮಗಳು ವಿವಿಗಳಲ್ಲಿ ನಡೆಯಬಾರದು. ವಿವಿಗಳಲ್ಲಿ ಧರ್ಮ ನಿರಪೇಕ್ಷತೆ, ಮೌಢ್ಯ ರಹಿತ, ಕಂದಾಚಾರ ರಹಿತ ಹಾಗೂ ವೈಜ್ಞಾನಿಕತೆ ಮತ್ತು ವೈಚಾರಿಕತೆ ಬೆಳೆಸುವ ಶಿಕ್ಷಣ ನೀಡಬೇಕು.

ಕೆಲವೊಮ್ಮೆ ಸ್ವಾತಂತ್ರ್ಯ ಹೋರಾಟಗಾರರು, ಸಂವಿಧಾನ ಕರ್ತೃಗಳು, ಸಾಮಾಜಿಕ ಚಿಂತಕರ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಸಭೆ, ಸಮಾರಂಭಗಳನ್ನು ನಡೆಸಿರುವುದನ್ನು ಕೆಲವು ವಿವಿಗಳಲ್ಲಿ ನೋಡಿದ್ದೇನೆ. ಜಾತ್ಯತೀತ ವಿರೋಧಿ ಮನೋಭಾವವನ್ನು ಪುರಸ್ಕರಿಸಬಾರದು. ಅತಿಥಿ ಉಪನ್ಯಾಸಕರ ನೇಮಕದ ಸಂದರ್ಭದಲ್ಲಿ ಇಂತಹ ವ್ಯಕ್ತಿಗಳನ್ನು ನೇಮಕ ಮಾಡಕೂಡದು. ಹುಟ್ಟುವಾಗ ಎಲ್ಲರೂ ವಿಶ್ವಮಾನವರು, ಬೆಳೆಯುತ್ತಾ ಬೆಳೆಯುತ್ತಾ ಅಲ್ಪಮಾನವರಾಗುತ್ತಾರೆ ಎಂದು ಕುವೆಂಪು ಅವರು ಹೇಳಿದಂತೆ ಆಗಬಾರದು ಎಂದರು. ಸಾಕಷ್ಟು ಕೊರತೆಗಳನ್ನು ಇಟ್ಟುಕೊಂಡು ಜಿಲ್ಲೆಗೊಂದು ವಿವಿ ಮಾಡುವ ತೀರ್ಮಾನ ಸರಿಯಲ್ಲ. ಮೂಲಸೌಲಭ್ಯ ಒದಗಿಸಲಾಗದಿದ್ದರೆ ಪ್ರಯೋಜನವಿಲ್ಲ. ನಾನು ಮುಖ್ಯಮಂತ್ರಿಯಾಗಿದ್ದಾಗ ಶೇ. 3 ಕ್ಕಿಂತ ಹೆಚ್ಚು ಅನುದಾನ ಒದಗಿಸಲಾಗಿತ್ತು. ಮುಂದಿನ ವರ್ಷದಿಂದ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಒದಗಿಸುವ ಪ್ರಯತ್ನ ಮಾಡಲಾಗುವುದು. ಗುಣಮಟ್ಟದ ಶಿಕ್ಷಣ ಕೊಡುವುದರಲ್ಲಿ ಯಾವುದೇ ಲೋಪವಾಗಬಾರದು. ಒಂದೇ ಬಾರಿ ಎಲ್ಲ ಪರಿಹಾರ ಒದಗಿಸಲಾಗದು. ಆದರೆ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು.

ಸಂಶೋಧನೆಯ ಫಲ ಗ್ರಂಥಾಲಯಗಳಲ್ಲಿ ಉಳಿಯಬಾರದು. ಸಮಾಜವನ್ನು ತಲುಪಬೇಕು. ಆಗ ಮಾತ್ರ ಸಂಶೋಧನೆ ಫಲಪ್ರದವಾಗುವುದು ಎಂದರು.

# ಕಾವೇರಿ ನ್ಯಾಯಾಧೀಕರಣದ ಸಂಕಷ್ಟ ಸೂತ್ರದಂತೆ ತಮಿಳುನಾಡಿಗೆ ನೀರು ಬಿಡಲಾಗಿದೆ

## ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಸಮರ್ಥನೆ

ಮೈಸೂರು, ಆ.21(ಬಿಎಲ್‌ಯು)– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡುವ ವಿಚಾರವಾಗಿ ಕಾವೇರಿ ನ್ಯಾಯಾಧೀಕರಣದ ಸಂಕಷ್ಟ ಸೂತ್ರದಂತೆ ತಮಿಳುನಾಡಿಗೆ ನೀರು ಹರಿಸಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಕಾವೇರಿ ನ್ಯಾಯಾಧೀಕರಣ ಹಾಗೂ ಕಾವೇರಿ ನೀರು ನಿರ್ವಹಣಾ ಮಂಡಳಿ ನಿರ್ದೇಶನದಂತೆ ರಾಜ್ಯ ಸರ್ಕಾರ ನಡೆದುಕೊಳ್ಳುತ್ತಿದೆ ಎಂದು ತಿಳಿಸಿದರು.

ಮದ್ರಾಸ್ ಪ್ರಾಂತ್ಯ ಅಸ್ತಿತ್ವದಲ್ಲಿ ಇದ್ದ ಸಮಯದಿಂದಲೂ ನೂರಾರು ವರ್ಷದಿಂದ ಕಾವೇರಿ ನೀರು ವಿವಾದ ಜೀವಂತವಾಗಿದೆ. ಈ ವಿಚಾರವಾಗಿ ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ವ್ಯಾಜ್ಯ ನಡೆಯುತ್ತಲೆ ಇದೆ. ಈ ಹಿನ್ನೆಲೆಯಲ್ಲಿ ಕಾವೇರಿ ನದಿ ವಿವಾದ ಬಗೆಹರಿಸಲು ಕಾವೇರಿ ನ್ಯಾಯಾಧೀಕರಣ ಐತೀರ್ಪು ನೀಡಿದೆ. ಜೊತೆಗೆ ನೀರು ಹಂಚಿಕೆ ಸಂಬಂಧ ಕಾವೇರಿ ನದಿ ನೀರು ನಿರ್ವಹಣಾ ಮಂಡಳಿ ಕೂಡ ರಚನೆ ಮಾಡಿದೆ. ಯಾರಿಗೆ ಎಷ್ಟು ನೀರು ಹಂಚಿಕೆ ಮಾಡಬೇಕೆಂದು ಈಗಾಗಲೇ ತೀರ್ಮಾನವಾಗಿದೆ. ಈ ಕಾರಣ ನ್ಯಾಯಾಲಯದ ತೀರ್ಪಿಗೆ ಎಲ್ಲರೂ ಬದ್ಧರಾಗಿರಬೇಕು. ಅದರಂತೆ ರಾಜ್ಯ ಸರ್ಕಾರ ಕೂಡ ಬದ್ಧವಾಗಿದೆ ಎಂದು ಡಾ.ಮಹದೇವಪ್ಪ ತಿಳಿಸಿದರು.




ಈ ಬಾರಿ ಮಳೆಯ ಪ್ರಮಾಣ ಕಡಿಮೆ ಇದೆ. ಜಲಾಶಯಗಳಲ್ಲಿ ನೀರಿನ ಶೇಖರಣೆ ಕುಸಿದಿದೆ. ಇಂತಹ ಸಮಯದಲ್ಲಿ ಎರಡು ರಾಜ್ಯಗಳು ಸಂಕಷ್ಟ ಸೂತ್ರ ಪಾಲಿಸಬೇಕಿದೆ. ಕಟ್ಟು ಮಾದರಿಯಲ್ಲಿ ನೀರು ಬಿಡಬೇಕೆಂದು ನೀರಾವರಿ ಸಲಹಾ ಸಮಿತಿ ತೀರ್ಮಾನಿಸಿದೆ. ಅದರಂತೆ ರಾಜ್ಯ ಸರ್ಕಾರ ನೀರು ಬಿಟ್ಟಿದೆ. ಆಗಸ್ಟ್ 23 ರಂದು ನಡೆಯುವ ಸರ್ವಪಕ್ಷಗಳ ಸಭೆಯಲ್ಲಿ ಹಲವು ವಿಚಾರಗಳನ್ನು ಚರ್ಚಿಸಿ ಒಮ್ಮತದ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

ವೈಯಕ್ತಿಕ ಹಿತಾಸಕ್ತಿ ಬಿಟ್ಟು ರಾಜ್ಯದ ರೈತರ ಹಿತದೃಷ್ಟಿಯಿಂದ ಸರ್ಕಾರ ಜವಾಬ್ದಾರಿ ನಿರ್ವಹಿಸಬೇಕು. ಇದರಲ್ಲಿ ರಾಜಕೀಯ ಬೆರೆಸುವ ಅಗತ್ಯವಿಲ್ಲ. ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಕೂಡ ತಮಿಳುನಾಡಿಗೆ ನೀರು ಬಿಡಲಾಗಿತ್ತು. ಆದರೆ ಅದನ್ನು ಮರೆತು ಕಾವೇರಿ ನದಿ ನೀರಿನ ವಿಚಾರದಲ್ಲಿ ಬಿಜೆಪಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮುಂದಾಗಿದೆ ಎಂದು ಡಾ.ಮಹದೇವಪ್ಪ ಆಕ್ರೋಶ ವ್ಯಕ್ತಪಡಿಸಿದರು.

## ಇಂದು ಗುಂಡೂರಾವ್ ಸ್ಮರಣೆ ಅಂಗವಾಗಿ ಗುಂಡೂರಾವ್ ಒಂದು ನೆನಪು

ಮೈಸೂರು, ಆ. 21– ಗುಂಡೂರಾವ್ ಅಭಿಮಾನಿ ಬಳಗದ ವತಿಯಿಂದ ಮಾಜಿ ಮುಖ್ಯಮಂತ್ರಿ ಗುಂಡೂರಾವ್ ಅವರ ಸ್ಮರಣೆ ಅಂಗವಾಗಿ 'ಗುಂಡೂರಾವ್–ಒಂದು ನೆನಪು ಕಾರ್ಯಕ್ರಮ'ವನ್ನು ಹುಣಸೂರು ರಸ್ತೆಯಲ್ಲಿರುವ ಕಲಾಮಂದಿರ ಮುಂಭಾಗ ನಾಳೆ (ಆ.22) ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಎಂದು ಗುಂಡೂರಾವ್ ಅಭಿಮಾನಿ ಬಳಗದ ಅಧ್ಯಕ್ಷ ವಿನಯ್ ಕಣಗಾಲ್ ತಿಳಿಸಿದರು.



ಮುಖ್ಯ ಅತಿಥಿಗಳಾಗಿ ಶಾಸಕರಾದ ತನ್ವೀರ್ ಸೇಠ್, ಹರೀಶ್‌ಗೌಡ, ಕಾಂಗ್ರೆಸ್ ನಗರಾಧ್ಯಕ್ಷ ಆರ್ ಮೂರ್ತಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್, ನಗರಪಾಲಿಕೆ ಸದಸ್ಯರು ಹಾಗೂ ಮುಖಂಡರು ಆಗಮಿಸಲಿದ್ದಾರೆ.

# ಕಾಂಗ್ರೆಸ್‌ಗೆ ಆಪರೇಷನ್ ಹಸ್ತದ ಅವಶ್ಯಕತೆ ಇಲ್ಲ

## ಬಿಜೆಪಿ ಶಾಸಕರು ಕಾಂಗ್ರೆಸ್ ಸೇರುವುದಕ್ಕೆ ಶಾಸಕ ತನ್ವೀರ್ ಸೇಠ್ ಪರೋಕ್ಷ ವಿರೋಧ

ಮೈಸೂರು, ಆ.21(ಬಿಎಲ್‌ಯು)– ಕಾಂಗ್ರೆಸ್‌ಗೆ ಆಪರೇಷನ್ ಹಸ್ತದ ಅವಶ್ಯಕತೆ ಇಲ್ಲ ಎಂದು ಸ್ಪಷ್ಟಪಡಿಸಿರುವ ಪಕ್ಷದ ಹಿರಿಯ ಶಾಸಕ ತನ್ವೀರ್ ಸೇಠ್, ಬಿಜೆಪಿಯ ಕೆಲವು ಶಾಸಕರು ಕಾಂಗ್ರೆಸ್ ಸೇರುವುದಕ್ಕೆ ಪರೋಕ್ಷ ವಿರೋಧ ವ್ಯಕ್ತಪಡಿಸಿದ್ದಾರೆ.

ಮೈಸೂರಿನಲ್ಲಿ ಇಂದು ಮಾತನಾಡಿದ ಅವರು, ಪಕ್ಷಾಂತರ ನಿಷೇಧ ಕಾಯ್ದೆ ಪರಿಣಾಮಕಾರಿಯಾಗಿದೆ. ಹೀಗಿರುವಾಗ ಶಾಸಕರು ರಾಜೀನಾಮೆ ನೀಡಿ ಮತ್ತೆ ಜನರ ಬಳಿಗೆ ಹೋಗುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ಕರ್ನಾಟಕದ ಜನತೆ ಕಾಂಗ್ರೆಸ್ ಪಕ್ಷಕ್ಕೆ 135 ಸ್ಥಾನ ನೀಡಿದ್ದಾರೆ. ಈ ಸಂದರ್ಭದಲ್ಲಿ ನಮಗೆ ಆಪರೇಷನ್ ಹಸ್ತದ ಅವಶ್ಯಕತೆ ಇಲ್ಲ. ಆಪರೇಷನ್ ಕಮಲ ಪರಿಚಯ ಮಾಡಿದ್ದ ಬಿಜೆಪಿಯವರು, ಈ ಕಾರಣದಿಂದ ಆಪರೇಷನ್ ಮಾಡುವ ವಿಚಾರಕ್ಕೆ ಹೆಚ್ಚಿನ ಮನ್ನಣೆ ನೀಡುವುದಿಲ್ಲ ಎಂದು ತನ್ವೀರ್ ಸೇಠ್ ಹೇಳಿದರು.



ತಮಿಳುನಾಡಿಗೆ ಕಾಂಗ್ರೆಸ್ ಸರ್ಕಾರ ಮಾತ್ರ ನೀರು ಬಿಟ್ಟಿಲ್ಲ. ಬಿಜೆಪಿ ಸೇರಿದಂತೆ ಎಲ್ಲಾ ಪಕ್ಷಗಳ ಸರ್ಕಾರ ಇದ್ದಾಗಲೂ ನೀರು ಬಿಡಲಾಗಿದೆ. ಈಗ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ನಿರ್ದೇಶನದಂತೆ ರಾಜ್ಯ ಸರ್ಕಾರ ನೀರು ಬಿಟ್ಟಿದೆ. ಈ ವಿಚಾರ ತಿಳಿದರೂ ಬಿಜೆಪಿ ಕಾವೇರಿ ವಿಚಾರವಾಗಿ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿದೆ ಎಂದು ಕಿಡಿಕಾರಿದರು.

ಆಗಸ್ಟ್ 23 ರಂದು ಕಾವೇರಿ ನದಿ ನೀರು ಹಂಚಿಕೆ ವಿಚಾರವಾಗಿ ಸರ್ವಪಕ್ಷಗಳ ಸಭೆ ನಡೆಯಲಿದೆ. ಅಲ್ಲಿ ಮುಂದೇನು ಮಾಡಬೇಕೆಂದು ತೀರ್ಮಾನ ಮಾಡಲಾಗುವುದು ಎಂದು ತನ್ವೀರ್ ಸೇಠ್ ತಿಳಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಹೆಸರಿನಲ್ಲಿ ಶಿಕ್ಷಣವನ್ನು ಕೇಸರೀಕರಣ ಮಾಡುವ ವ್ಯವಸ್ಥಿತ ಷಡ್ಯಂತ್ರ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿ ಕೈಬಿಡುವ ಒಳ್ಳೆಯ ತೀರ್ಮಾನ ಮಾಡಿದೆ. ಈಗ ರಾಜ್ಯಕ್ಕೆ ಪೂರಕವಾದ ಶಿಕ್ಷಣ ನೀತಿ ಅಳವಡಿಸಿಕೊಳ್ಳಬೇಕು ಎಂದು ತನ್ವೀರ್ ಸೇಠ್ ಸಲಹೆ ನೀಡಿದರು.



ಮೈಸೂರಿನ ಲಕ್ಷ್ಮಿಪುರಂ ಪದವಿ ಪೂರ್ವ ಕಾಲೇಜಿನ ನೂತನ ಪ್ರಾಂಶುಪಾಲರಾಗಿ ಟಿ.ಸಿ.ಸುದೀಪ್ ಅವರು ಪ್ರಭಾರ ಪ್ರಾಂಶುಪಾಲರಾಗಿದ್ದ ಎನ್.ಎಸ್.ಪಶುಪತಿ ಅವರಿಂದ ಅಧಿಕಾರ ಸ್ವೀಕರಿಸಿದರು. ಈ ವೇಳೆ ಉಪನ್ಯಾಸಕರಾದ ಮಹದೇವನಾಯ್ಕ, ಬೇಬಿ ಎಂ.ಕೆ, ಪುಷ್ಪ ಎಸ್.ನಾಗರತ್ನ ಹೆಚ್.ಕೆ, ಜಯನಂದಪ್ರಸಾದ್ ಕೆ.ಎ, ಡಾ||ಹೆಚ್.ಸಿ.ಕಾಳಿಪ್ರಸಾದ್, ರಾಘವೇಂದ್ರ ಜಿ, ನಂದೀಶ್ ಕುಮಾರ್, ನಿವೃತ್ತ ಉಪನ್ಯಾಸಕ ಶಿವಪ್ಪ, ಮತ್ತಿತರರಿದ್ದರು.

## ಜೂಲ್ಕರ್ ನೈನ್ ನೇಮಕ



ಮೈಸೂರು, ಆ.21– ಕೆಪಿಸಿಸಿ ಮಾನವ ಹಕ್ಕುಗಳ ವಿಭಾಗದ ಜಂಟಿ ಕಾರ್ಯದರ್ಶಿ ಹುದ್ದೆಗೆ ಜೂಲ್ಕರ್ ನೈನ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ ಎಂದು ಕೆಪಿಸಿಸಿ ಮಾನವ ಹಕ್ಕುಗಳ ವಿಭಾಗ ಮತ್ತು ಆರ್‌ಟಿಐ ವಿಭಾಗದ ಅಧ್ಯಕ್ಷ ಎ.ಎಸ್.ಪೊನ್ನಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮದರ್‌ಹುಡ್ ಆಸ್ಪತ್ರೆಯಿಂದ ಸ್ತನ್ಯಪಾನ ಮಹತ್ವ ಸಾರುವ ವಾಕಥಾನ್

ಮೈಸೂರು, ಆ. 21– ಮೈಸೂರಿನ ಮದರ್‌ಹುಡ್ ಆಸ್ಪತ್ರೆಯಿಂದ ವಿಶ್ವ ಸ್ತನ್ಯಪಾನ ಮಾಸದ ಅಂಗವಾಗಿ ಆಯೋಜಿಸಿದ್ದ ಬ್ರೆಸ್ಟ್ ಫೀಡಿಂಗ್ ವಾಕಥಾನ್‌ಗೆ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ರಾಜವಂಶಸ್ಥರಾದ ತ್ರಿಷಿಕಾ ಕುಮಾರಿ ಒಡೆಯರ್ ಅವರು ಚಾಲನೆ ನೀಡಿದರು.

ಈ ವೇಳೆ ಎಂಎಚ್‌ಎಎನ್ (ಮಹಾನ್) ಅಧ್ಯಕ್ಷ ಡಾ.ಜಾವೀದ್ ನಯೀಮ್, ಡಾ. ಲಲಿತಾ, ಡಾ.ಎ.ಸೋನಿಯಾ ಮಂದಪ್ಪ, ಡಾ ಮಧುರಾ ಪಾಠಕ್, ಡಾ.ಬಿ.ಚೇತನ್, ಎಚ್.ಆರ್. ಕೇಶವ್, ರೊಟೇರಿಯನ್ ಜಿ.ಕೆ.ಸುಧೀಂದ್ರ, ಆಶಿಕಾ ಕುಶಾಲಪ್ಪ, ಮದರ್‌ಹುಡ್ ಆಸ್ಪತ್ರೆಯ ಸೌಲಭ್ಯ ನಿರ್ದೇಶಕ ಬಿ.ಜೆ. ಸಂದೀಪ್ ಪಟೇಲ್ ಮತ್ತಿತರರು ಹಾಜರಿದ್ದರು.

ಬಳಿಕ ತ್ರಿಷಿಕಾ ಕುಮಾರಿ ಒಡೆಯರ್ ಮಾತನಾಡಿ, ತಮ್ಮ ಮಗುವಿನ ಬೆಳವಣಿಗೆ, ಪೋಷಣೆಯಲ್ಲಿ ಪಾಲಕರ ಪಾತ್ರ ಅಪಾರ





ವಾದದ್ದು. ಅಲ್ಲದೇ ಸ್ತನ್ಯಪಾನವು ತಾಯಿ ಮತ್ತು ಮಗುವಿನ ನಡುವೆ ಅನನ್ಯ ಮತ್ತು ನೈಸರ್ಗಿಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ. ಸ್ತನ್ಯಪಾನದ ಕ್ರಿಯೆ ಒಂದು ಆತ್ಮೀಯ ವಿನಿಮಯವಾಗಿದೆ ಇಲ್ಲಿ ತಾಯಿಯ ಪೋಷಣೆ ಪ್ರೀತಿಯಾಗಿ ಹರಿಯುತ್ತದಲ್ಲದೇ ಮಗುವಿನ ದೈಹಿಕ ಮತ್ತು ಭಾವನಾತ್ಮಕ ಬೆಳವಣಿಗೆಯನ್ನು ಪ್ರೋತ್ಸಾಹಿಸುತ್ತದೆ ಎಂದರು. ಹೆರಿಗೆ ನಂತರದ ತಾಯಂದಿರ ಜೀವನದಲ್ಲಿ ಸ್ತನ್ಯ ಪಾನ ಒಂದು ನೈಸರ್ಗಿಕ ಮತ್ತು ಸಮಗ್ರ ಭಾಗವಾಗಿರುತ್ತದೆ. ಶಿಶುವಿಗೆ ಸೂಕ್ತ ಮತ್ತು ಪ್ರಮುಖ ಪೋಷಣೆ ನೀಡುವುದರೊಂದಿಗೆ ತಾಯಿ ಮತ್ತು ಮಗುವಿನ ನಡುವೆ ದೃಢವಾದ ಬಾಂಧವ್ಯವನ್ನು ಇದು ಏರ್ಪಡಿಸುತ್ತದೆ. ಶಿಶುವಿಗೆ ಸ್ತನ್ಯಪಾನ ಮಾಡಿಸುವುದರ ಪ್ರಾಮುಖ್ಯತೆ ಮತ್ತು ಅದರಿಂದ ಆಗುವ ಲಾಭಗಳ ಬಗ್ಗೆ ವರ್ಲ್ಡ್ ಬ್ರೆಸ್ಟ್ ಫೀಡಿಂಗ್ ವಾಕಥಾನ್ ಎತ್ತಿ ತೋರುವುದಲ್ಲದೆ, ಎದೆ ಹಾಲುಣಿಸುವುದರ ಮಹತ್ವದ ಬಗ್ಗೆ ಜಾಗೃತಿ ಮೂಡಿಸುತ್ತದೆ. ಜೊತೆಗೆ ಶಿಶುವಿಗೆ ಎದೆ ಹಾಲುಣಿಸಲು ಸೂಕ್ತವಾದ ಪರಿಸರವನ್ನು ಸೃಷ್ಟಿಸಲು ನೆರವಾಗುತ್ತದೆ. ಅಲ್ಲದೆ, ದಂಪತಿಗಳು ಪರಸ್ಪರ ಸಹಾಯವಾಗುವುದರಲ್ಲಿ ಯಾವ ರೀತಿಯ ಪಾತ್ರ ವಹಿಸಬೇಕು ಎಂಬುದನ್ನು ಇದು ತಿಳಿಸುತ್ತದೆ ಎಂದರು.

ಮೈಸೂರಿನ ಮದರ್‌ಹುಡ್ ಆಸ್ಪತ್ರೆಯ ನಿರ್ದೇಶಕ ಬಿ.ಜೆ.ಸಂದೀಪ್ ಪಟೇಲ್ ಮಾತನಾಡಿ, ನಮ್ಮ ವಾಕಥಾನ್‌ಗೆ ಉತ್ತಮ ಪ್ರತಿಕ್ರಿಯೆ ಲಭಿಸಿರುವುದಕ್ಕೆ ಸಂತೋಷವಾಗಿದೆ. ಸ್ತನ್ಯಪಾನ ಮಾಡಿಸುವ ತಾಯಂದಿರಿಗೆ ಬೆಂಬಲ ಲಭಿಸುವ ವಾತಾವರಣವನ್ನು ಸೃಷ್ಟಿಸುವಲ್ಲಿ ಬದ್ಧತೆಯನ್ನು ಈ ಕಾರ್ಯಕ್ರಮ ಪ್ರದರ್ಶಿಸಿದೆ ಎಂದರು.

ಮೈಸೂರು ಮಿತ್ರ ಮಂಗಳವಾರ 22 ಆಗಸ್ಟ್ 2023

# ಗ್ರಾಪಂ ಸದಸ್ಯನಿಂದ ವಂಚನೆ ಆರೋಪ: ಪ್ರತಿಭಟನೆ



ಶ್ರೀರಂಗಪಟ್ಟಣ, ಆ.21– ವಸತಿ ಯೋಜನೆಯಡಿ ಮನೆ ಕಟ್ಟಲು ಸರ್ಕಾರದಿಂದ ಅನುದಾನ ಕೊಡಿಸುತ್ತೇನೆಂದು ಹೇಳಿ ತಾಲೂಕಿನ ಹುಲಿಕೆರೆ ಗ್ರಾಪಂ ಸದಸ್ಯ ರಾಮು ಹಣ ಪಡೆದು ವಂಚಿಸಿದ್ದಾರೆ ಎಂದು ಆರೋಪಿಸಿ ಇಲ್ಲಿಗೆ ಸಮೀಪದ ಎಂಎನ್‌ಪಿಎಂ ಕಾಲೋನಿ ನಿವಾಸಿ ಎಂ.ಮರಿಯತಂಗಮ್ಮ ಮತ್ತು ಇತರರು ಸೋಮವಾರ ಪ್ರತಿಭಟನೆ ನಡೆಸಿದರು.

ಹುಲಿಕೆರೆ ಗ್ರಾಪಂ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಗ್ರಾಪಂ ಸದಸ್ಯ ರಾಮು ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಂತ್ರಸ್ತೆ ಎಂ.ಮರಿಯತಂಗಮ್ಮ ಮಾತನಾಡಿ, ರಾಮು ಅವರು ವಸತಿ ಯೋಜನೆಯಡಿ ಮನೆ ಕಟ್ಟಿಕೊಳ್ಳಲು ಅನುದಾನ ಕೊಡಿಸುತ್ತೇನೆ ಎಂದು ನಂಬಿಸಿ ನನ್ನಿಂದ ಒಂದು ವರ್ಷದ ಹಿಂದೆ 1.75 ಲಕ್ಷ ಹಣ ಪಡೆದಿದ್ದಾರೆ. ನಾನೇ ಮನೆ ನಿರ್ಮಿಸಿ ಕೊಡುತ್ತೇನೆ ಎಂದು ಹೇಳಿದ್ದ ಅವರು ಈಗ ಸಂಪರ್ಕಕ್ಕೆ ಸಿಗುತ್ತಿಲ್ಲ. ನನಗೆ ಹಣ ವಾಪಸ್ ಕೊಡಿಸಿಕೊಡಿ ಎಂದು ಮನವಿ ಮಾಡಿದರು.

ಪ್ರಾರಂಭಿಕವಾಗಿ ಮನೆ ಗೋಡೆ ನಿರ್ಮಿಸಿದ್ದು, ಅದಕ್ಕೆ ಸರ್ಕಾರದಿಂದ 30 ಸಾವಿರ ಬಿಡುಗಡೆಯಾಗಿದೆ. ಹಣ ನೀಡಿ ಒಂದು ವರ್ಷ ಕಳೆದರೂ ಮನೆ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ನಾನು ನೀಡಿದ ಹಣ ಕೇಳಿದರೂ ವಾಪಸ್ ನೀಡುತ್ತಿಲ್ಲ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಗ್ರಾಪಂ ಸದಸ್ಯ ರಾಮು ಮೇಲೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೇ ಮಂಡ್ಯ ಜಿಲ್ಲಾಧಿಕಾರಿ ಕಚೇರಿ ಎದುರು ನ್ಯಾಯ ಸಿಗುವವರೆಗೆ ಹೋರಾಟ ಕೈಗೊಳ್ಳುತ್ತೇನೆ ಎಂದರು.

ಮರಿಯತಂಗಮ್ಮ ಅವರಿಂದ ಮನವಿ ಸ್ವೀಕರಿಸಿದ ಪಿಡಿಓ ನಟೇಶ್, ಈ ಬಗ್ಗೆ ನಮ್ಮ ಮೇಲಾಧಿಕಾರಿ ಗಳ ಗಮನಕ್ಕೆ ತಂದು ಮುಂದಿನ ಕ್ರಮ ಕೈಗೊಳ್ಳಲಾಗುವುದು. ನಮ್ಮ ಗ್ರಾಪಂನಿಂದ ಬಸವ ವಸತಿ ಯೋಜನೆಯಡಿ ಮೊದಲ ಕಂತಿನ ಹಣ ಬಿಡುಗಡೆಯಾಗಿದೆ ಎಂದರು. ಕಾಂಗ್ರೆಸ್ ಮುಖಂಡ ಚೆಲುವರಾಜು ಮಾತನಾಡಿದರು.

ಪ್ರತಿಭಟನೆಯಲ್ಲಿ ತಾಪಂ ಮಾಜಿ ಉಪಾಧ್ಯಕ್ಷ ವೈರಮುಡಿ, ಗ್ರಾಪಂ ಮಾಜಿ ಅಧ್ಯಕ್ಷ ಸಿದ್ದರಾಜು, ಮಾಜಿ ಉಪಾಧ್ಯಕ್ಷ ಚೆಲುವರಾಜು, ರವಿ, ಮುಖಂಡರಾದ ಭರತ್, ಧ್ರುವಕುಮಾರ್, ಗೀತಾ, ಮೀನಾಕ್ಷಿ ಗೌಡ, ಪೂರ್ಣಿಮಾ, ಜಯಮ್ಮ ಇತರರಿದ್ದರು.

## ತಮಿಳುನಾಡಿಗೆ ನೀರು ಬಿಡುಗಡೆ ಖಂಡಿಸಿ

# ನಾಳೆ ಮಂಡ್ಯದಲ್ಲಿ ಉಪವಾಸ ಸತ್ಯಾಗ್ರಹ



ಮಂಡ್ಯ, ಆ.21– ರೈತರ ಹಿತ ಕಡೆಗಣಿಸಿ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಆ.23ರಂದು ನಗರದ ವಿಶ್ವೇಶ್ವರಯ್ಯ ಪ್ರತಿಮೆ ಎದುರು ನೂರಾರು ರೈತರೊಂದಿಗೆ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದು ಭಾರತೀಯ ಕಿಸಾನ್ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಪ್ರಧಾನ ಕಾರ್ಯದರ್ಶಿ ಹಾಡ್ಯ ರಮೇಶ್ ರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಮುಂಗಾರು ಮಳೆ ಕೊರತೆಯಿಂದಾಗಿ ಕೆಆರ್‌ಎಸ್ ಭರ್ತಿಯಾಗದೇ ಕೇವಲ 113 ಅಡಿಗೆ ಬರುವಷ್ಟರಲ್ಲಿ ಮಳೆ ನಿಂತು ಹೋಯಿತು. ಆದರೂ ಒಂದು ಅವಧಿಯ ಭತ್ತದ ಬೆಳೆಗೆ ತೊಂದರೆ ಆಗುವುದಿಲ್ಲ ಎಂಬ ಆಶಾಭಾವನೆಯಿಂದ ರೈತರು ಭತ್ತದ ಬಿತ್ತನೆಯಲ್ಲಿ ತೊಡಗಿದ್ದರು. ಆದರೆ ಈಗ ತಮಿಳುನಾಡಿಗೆ ನೀರು ಬಿಡುತ್ತಿರುವುದರಿಂದ ರೈತರು ತೀವ್ರ ರೀತಿ ತೊಂದರೆ ಎದುರಿಸುವಂತಾಗಿದೆ ಎಂದರು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷ ಎಸ್.ಮಸೂದ್ ಹುಸೇನ್ ಅವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ತಮಿಳುನಾಡಿಗೆ ತಕ್ಷಣ ನೀರು ಹರಿಸಲೇಬೇಕು ಎನ್ನುವ ಒತ್ತಡ ಹಾಕಲಿಲ್ಲ. ಕುಡಿಯುವ ನೀರಿನ ಆದ್ಯತೆ ನೋಡಿಕೊಂಡು ಹಾಗೂ ಒಳ ಹರಿವಿನ ಪ್ರಮಾಣ ಗಮನಿಸಿ ಕೆಳ ಭಾಗದ ರಾಜ್ಯಕ್ಕೆ ನೀರು ಹರಿಸುವ ಬಗ್ಗೆ ಕರ್ನಾಟಕವೇ ನಿರ್ಧರಿಸಲಿ ಎಂದು ತಿಳಿಸಲಾಗಿದೆ. ಆದರೂ ತಮಿಳುನಾಡಿಗೆ ನೀರು ಹರಿಸುತ್ತಿರುವ ಕ್ರಮ ಸರಿಯಲ್ಲ ಎಂದರು. ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಾಗುತ್ತಿಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆ ಮಾಡದೇ, ಪ್ರಾಧಿಕಾರದ ಆದೇಶವಿಲ್ಲದಿದ್ದರೂ ಜಲಾಶಯದಿಂದ ನೀರು ಬಿಡುವುದಕ್ಕೆ ಪ್ರಾರಂಭಿಸಿ ರುವುದರಿಂದ ಮುಂದೆ ಜನ ಜಾನುವಾರುಗಳಿಗೆ ಕುಡಿಯುವ ನೀರಿಗೂ ಕಷ್ಟವಾಗುತ್ತದೆ. ಈಗಾಗಲೇ ಬೆಳೆದ ಬೆಳೆಗಳು ಹಾಳಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಸರ್ಕಾರ ಈ ಕ್ರಮಗಳನ್ನು ಖಂಡಿಸಿ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದರು.

ಗೋಷ್ಠಿಯಲ್ಲಿ ಸಂಘದ ಮುಖಂಡರಾದ ಪಣಕನಹಳ್ಳಿ ವೆಂಕಟೇಶ್, ಬಿ.ಪಿ.ಅಪ್ಪಾಜಿ, ದಿವ್ಯ, ಪುಟ್ಟಮ್ಮ ಹಾಗೂ ಜಯರಾಂ ಉಪಸ್ಥಿತರಿದ್ದರು.

## ಲಂಚ ಸ್ವೀಕರಿಸಿದ ಆಡಳಿತಾಧಿಕಾರಿ ಅಮಾನತು

ಮಂಡ್ಯ, ಆ.21– ಭ್ರಷ್ಟಾಚಾರ ಹಾಗೂ ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ನಾಗಮಂಗಲ ತಾಲೂಕಿನ ಬಿದರಕೆರೆ ವೃತ್ತದ ಆಡಳಿತಾಧಿಕಾರಿ ನಿಂಗಪ್ಪ ಹ.ಸುರಪೂರ್ ಅವರನ್ನು ಅಮಾನತುಗೊಳಿಸಿ ಜಿಲ್ಲಾಧಿಕಾರಿ ಡಾ.ಕುಮಾರ್ ಆದೇಶಿಸಿದ್ದಾರೆ.

ನಾಗಮಂಗಲ ತಾಲೂಕಿನ ಲಾಳನಕೆರೆ ಗ್ರಾಮದ ಲಿಂಗಪ್ಪ ಎಂಬುವವರು ತಮ್ಮ ಬಾಬ್ತು ಲಾಳನಕೆರೆ ಗ್ರಾಮದ ಸರ್ವೆ ನಂ.30/1,29/6,29/19 ಮತ್ತು 29/13ರ ಜಮೀನನ್ನು ಖಾತೆ ಮಾಡಿಕೊಡಲು ತಮ್ಮಿಂದ ಲಂಚ ಪಡೆದು ಖಾತೆ ಮಾಡಿಕೊಟ್ಟಿಲ್ಲ ಎಂದು ದೂರಿದ್ದರು. ಡಿಸಿ ದೂರಿನ ಹಿನ್ನೆಲೆಯಲ್ಲಿ ಜೂ.27ರಂದು ಕಚೇರಿ ಸಿಬ್ಬಂದಿಗಳನ್ನು ಒಳಗೊಂಡ ಸಮಿತಿ ರಚಿಸಿ, ಆದೇಶಿಸಿದ್ದರು. ಸಮಿತಿಯು ಲಂಚ ಸ್ವೀಕರಿಸಿರುವುದು ದೃಢ ಎಂದು ವರದಿಯಲ್ಲಿ ತಿಳಿಸಿತ್ತು. ಈ ಹಿನ್ನಲೆಯಲ್ಲಿ ಡಿಸಿ ಕುಮಾರ್ ಭ್ರಷ್ಟಾಚಾರ ಹಾಗೂ ಕರ್ತವ್ಯ ಲೋಪದ ಆರೋಪದ ಮೇರೆಗೆ ನಿಂಗಪ್ಪ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

## ಅಕ್ರಮ ಪಡಿತರ ಸಾಗಣೆ: ನೂರಾರು ಚೀಲ ಅಕ್ಕಿ ವಶ




ಕೆಆರ್‌ಎಸ್, ಆ.21– ಅಕ್ರಮವಾಗಿ ಟಾಟಾ ಐಚರ್ ಮತ್ತು ಟಾಟಾ ಪಿಕಪ್ ವಾಹನದಲ್ಲಿ ಪಡಿತರ ಅಕ್ಕಿ ಸಾಗಿಸುತ್ತಿದ್ದ ವೇಳೆ ಕೆಆರ್‌ಎಸ್ ಪೊಲೀಸರು ದಾಳಿ ನಡೆಸಿ ವಾಹನ ಸಮೇತ ನೂರಾರು ಚೀಲ ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಶನಿವಾರ ರಾತ್ರಿ ಆಹಾರ ನೀರಿಕ್ಷಕ ಬಸವರಾಜು, ಕೆ.ಆರ್.ಸಾಗರ ಠಾಣೆ ಎಸ್‌ಐ ಬಸವರಾಜು ಮತ್ತು ಸಿಬ್ಬಂದಿ ದಾಳಿ ನಡೆಸಿ ಮೊಗರಹಳ್ಳಿ ಗ್ರಾಮದ ಮುಖ್ಯರಸ್ತೆ ಬಳಿ ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ಬರುತ್ತಿದ್ದ ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ.

ಈ ವೇಳೆ ಚಾಲಕ ಮೈಸೂರಿನ ಕೆಸರೆ ನಿವಾಸಿ ಮಹಮದ್ ಶಫೀರ್ ಅಲಿಯಾಸ್ ಕಲೀಲ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಮತ್ತೊಂದು ವಾಹನದ ಚಾಲಕ ಪರಾರಿ ಯಾಗಿದ್ದಾನೆ. ಅಕ್ಕಿಯನ್ನು ಮೈಸೂರಿನ ಬಡಾವಣೆಯೊಂದರಿಂದ ಶ್ರೀರಂಗಪಟ್ಟಣಕ್ಕೆ ತರಲಾಗುತ್ತಿತ್ತು ಎನ್ನಲಾಗಿದೆ. ವಾಹನಗಳ ಮುಂದೆ ಹೋಗುತ್ತಿದ್ದ ಅಕ್ಕಿ ಇಳಿಸುವ ವ್ಯಕ್ತಿ ಪೊಲೀಸರನ್ನು ಕಂಡೊಡನೆ ಪರಾರಿಯಾಗಿದ್ದಾನೆ. ಈ ಸಂಬಂಧ ಕೆ.ಆರ್.ಸಾಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹಳೇಬೀಡು ಪಿಎಸಿಎಸ್‌ನಲ್ಲಿ ಜೆಡಿಎಸ್ ಮೇಲುಗೈ

### ನೂತನ ನಿರ್ದೇಶಕರನ್ನು ಅಭಿನಂದಿಸಿದ ಮಾಜಿ ಸಚಿವ ಸಿಎಸ್‌ಪಿ



ಪಾಂಡವಪುರ, ಆ.21– ತಾಲೂಕಿನ ಹಳೇಬೀಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಸದಸ್ಯರು ಮೇಲುಗೈ ಸಾಧಿಸಿದ್ದಾರೆ.

ಒಟ್ಟು 11 ಸದಸ್ಯ ಬಲದ ಕೃಷಿ ಪತ್ತಿನ ಸಹಕಾರ ಸಂಘದ ಈ ಹಿಂದಿನ ಆಡಳಿತ ಮಂಡಳಿ ಅಧಿಕಾರಾವಧಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ನಡೆದ ಚುನಾವಣೆಯಲ್ಲಿ 9 ಮಂದಿ ಜೆಡಿಎಸ್, ಕಾಂಗ್ರೆಸ್–ರೈತ ಸಂಘದ ಇಬ್ಬರು ನಿರ್ದೇಶಕರು ಆಯ್ಕೆಯಾಗಿದ್ದಾರೆ. ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಸದಸ್ಯರಾದ ಹೊಸಕೋಟೆ ಪುಟ್ಟಣ್ಣ, ಹಳೇಬೀಡು ಕುಳ್ಳೇಗೌಡ, ಅರವಿಂದ ಲಿಂಗರಾಜು, ರಮೇಶ್, ನಾಗಮ್ಮ, ಪುಟ್ಟಲಕ್ಷ್ಮಮ್ಮ, ಪುಟ್ಟ ರಾಮಯ್ಯ, ಗುರುಮೂರ್ತಿ, ರೈತಸಂಘ–ಕಾಂಗ್ರೆಸ್ ಬೆಂಬಲಿತ ಸದಸ್ಯರಾದ ರಾಮೇಗೌಡ, ರಮೇಶ್ ಆಯ್ಕೆಯಾದರು.

ಇದೇ ವೇಳೆ ಪಿಎಸಿಎಸ್ ಜೆಡಿಎಸ್ ಬೆಂಬಲಿತ ನಿರ್ದೇಶಕರನ್ನು ಹಾಗೂ ಹಳೇಬೀಡು ಗ್ರಾಪಂ ನೂತನ ಅಧ್ಯಕ್ಷ ಹೆಚ್.ಸಿ. ಧನಂಜಯ, ಉಪಾಧ್ಯಕ್ಷೆ ಶೋಭಾ ಶ್ರೀನಿವಾಸ್ ಅವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ಈ ಸಂದರ್ಭ ಗ್ರಾಪಂ ಸದಸ್ಯರಾದ ಪುಟ್ಟೇಗೌಡ, ಪದ್ಮರಾಜು, ಮಂಜುಳ, ಸೌಭಾಗ್ಯಮ್ಮ, ಮಂಗಳಮ್ಮ, ಚಿಕ್ಕತಾಯಮ್ಮ, ಜಯಲಕ್ಷ್ಮಮ್ಮ, ರಾಧಮ್ಮ, ಮುಖಂಡರಾದ ಮುನ್‌ಮುಲ್ ಮಾಜಿ ನಿರ್ದೇಶಕ ಜಿ.ಇ.ರವಿಕುಮಾರ್, ಚನ್ನೇಗೌಡ, ಚಂದ್ರಶೇಖರ್, ಧನಂಜಯ ಸೇರಿದಂತೆ ಹಲವರಿದ್ದರು.

## ಬಾಲ ಪುರಸ್ಕಾರ ಅರ್ಜಿ ಆಹ್ವಾನ

ಮಂಡ್ಯ, ಆ.21– ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ 2023ನೇ ಸಾಲಿನ ರಾಷ್ಟ್ರೀಯ ಪ್ರಧಾನಮಂತ್ರಿ ಬಾಲಪುರಸ್ಕಾರ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯಲ್ಲಿ ಧೈರ್ಯ ಮತ್ತು ಸಾಹಸದಿಂದ ಇತರರನ್ನು ರಕ್ಷಿಸಿದ ಹಾಗೂ ಕ್ರೀಡೆ, ಸಮಾಜ ಸೇವೆ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಸಂರಕ್ಷಣೆ, ಕಲೆ ಮತ್ತು ಸಂಸ್ಕೃತಿ ಮತ್ತು ನೂತನ ಆವಿಷ್ಕಾರಗಳನ್ನು ಮಾಡಿ ಉತ್ತಮ ಸಾಧನೆ ಮಾಡಿದ ಮಕ್ಕಳನ್ನು ಗುರುತಿಸಿ ಗೌರವಿಸಲಾಗುವುದು ಆಸಕ್ತರು ಆ.31 ರೊಳಗೆ ಅರ್ಜಿಯನ್ನು ಆನ್‌ಲೈನ್ ಮೂಲಕ National Awards Portal on https://awards.gov.in ನಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, #1895, ಯೋಗನರಸಿಂಹ ಕಾಂಪ್ಲೆಕ್ಸ್, 6ನೇ ಕ್ರಾಸ್, ಸುಭಾಷ್‌ನಗರ ಮಂಡ್ಯ ರವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಂಡ್ಯ, ಆ.21– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2023–24ನೇ ಸಾಲಿನ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಯೋಜನೆಯಡಿ ಅಸಾಧಾರಣ ಸಾಧನೆ ಮಾಡಿದ ಜಿಲ್ಲಾ ಮಟ್ಟದ ಮಕ್ಕಳಿಗೆ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಿದೆ. ಈ ಯೋಜನೆಯಡಿ ನಾವಿನ್ಯತೆ, ತಾರ್ಕಿಕ ಸಾಧನೆಗಳು, ಕ್ರೀಡೆ, ಕಲೆ, ಸಾಂಸ್ಕೃತಿಕ ಮತ್ತು ಸಂಗೀತ ಕ್ಷೇತ್ರದಲ್ಲಿ ಅಸಾಧಾರಣಾ ಸಾಧನೆ ಮಾಡಿದ 5 ವರ್ಷ ಮೇಲ್ಪಟ್ಟ ಹಾಗೂ 18 ವರ್ಷದೊಳಗಿನ ಮಕ್ಕಳು ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರಿಂದ ಅರ್ಜಿ ನಮೂನೆಗಳನ್ನು ಪಡೆದು ಸೆ.10 ರೊಳಗೆ ಕಚೇರಿಗೆ ಸಲ್ಲಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಣಿಗೆರೆ ಡೇರಿಗೆ ಕೆಂಪರಾಜು ಅಧ್ಯಕ್ಷ, ವೆಂಕಟೇಶ್ ಉಪಾಧ್ಯಕ್ಷ



ಭಾರತೀನಗರ, ಆ.21– ಇಲ್ಲಿಗೆ ಸಮೀಪದ ಮಣಿಗೆರೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಕೆಂಪರಾಜು, ಉಪಾಧ್ಯಕ್ಷರಾಗಿ ವೆಂಕಟೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಕೆಂಪರಾಜು ಮಾತನಾಡಿ, ರೈತರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಆರ್ಥಿಕ ಅಭಿವೃದ್ಧಿ ಹೊಂದಬೇಕು. ಅಲ್ಲದೇ ಡೈರಿಗೆ ಗುಣಮಟ್ಟದ ಹಾಲು ಸರಬರಾಜು ಮಾಡುವಂತೆ ಮನವಿ ಮಾಡಿದ ಅವರು, ಸಂಘದಿಂದ ಸಿಗುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಸಹಕಾರ ಸಂಘದ ನಿರೀಕ್ಷಕ ವೆಂಕಟೇಶ್ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಈ ವೇಳೆ ಸಂಘದ ಕಾರ್ಯದರ್ಶಿ ಕೆ.ಪುಟ್ಟಲಿಂಗಯ್ಯ, ನಿರ್ದೇಶಕರಾದ ವೆಂಕಟೇಶ್, ರಮೇಶ, ಕೆ.ಎಂ.ಸಿದ್ದೇಗೌಡ, ಸ್ವಾಮಿ, ಬಸವೇಗೌಡ, ಕೆಂಪಮ್ಮ, ಬಿಳಿಯಯ್ಯ, ಮುಖಂಡರಾದ ದಂಡಿಲಿಂಗಯ್ಯ, ಬೋರೇಗೌಡ, ಪುಟ್ಟ, ಸೀನ, ಸಿದ್ದ, ರಾಮಲಿಂಗೇಗೌಡ ಸೇರಿದಂತೆ ಹಲವರಿದ್ದರು.

ಒಂದನೇ ಪುಟದಿಂದ

# ಜನರಲ್ ಕೆ.ಎಸ್.ತಿಮ್ಮಯ್ಯನವರ ಪ್ರತಿಮೆ






"ವೀರ ಸೇನಾನಿ, ದೇಶ ಕಂಡ ಅಪ್ರತಿಮ ಯೋಧ ಭಾರತದ ಶೌರ್ಯದ ಸಂಕೇತವಾಗಿರುವ ಜನರಲ್ ತಿಮ್ಮಯ್ಯ ಅವರ ಪ್ರತಿಮೆಗೆ ಹಾನಿಯಾಗಿರುವುದು ವಿಷಾದನೀಯ ಸಂಗತಿ. ಮೇಲ್ನೋಟಕ್ಕೆ ಇದು ಅಜಾಗರೂಕತೆಯ ಚಾಲನೆಯಿಂದ ಸಂಭವಿಸಿದ ಘಟನೆ ಎಂದು ಕಂಡು ಬರುತ್ತಿದೆ. ಈ ಕುರಿತು ನೈಜ ವರದಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಜಿಲ್ಲೆಯ ಜನತೆಯಲ್ಲಿ ಭಾವನಾತ್ಮಕ ಸಂಬಂಧ ಹೊಂದಿರುವ ಜನರಲ್ ತಿಮ್ಮಯ್ಯ ಅವರ ಪ್ರತಿಮೆಯನ್ನು ಅದೇ ಸ್ಥಳದಲ್ಲಿ ಗೌರವಪೂರ್ವಕವಾಗಿ ಮರುಸ್ಥಾಪಿಸಲಾಗುತ್ತದೆ. ಜನರು ಆತಂಕಕ್ಕೆ ಒಳಗಾಗಬಾರದು.

–ಎ.ಎಸ್.ಪೊನ್ನಣ್ಣ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಮತ್ತು ಶಾಸಕರು, ವಿರಾಜಪೇಟೆ ಕ್ಷೇತ್ರ



"ಜನರಲ್ ತಿಮ್ಮಯ್ಯ ಅವರ ಪ್ರತಿಮೆಯನ್ನು ಅದೇ ಸ್ಥಳದಲ್ಲಿ ಮರುಸ್ಥಾಪನೆ ಮಾಡಲಾಗುತ್ತದೆ. ಈ ಕುರಿತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಲೋಕೋಪಯೋಗಿ ಇಲಾಖೆ, ಜಿಲ್ಲಾಡಳಿತ, ನಗರಸಭೆ ಮಾತ್ರವಲ್ಲದೇ ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಸಭೆ ಕರೆದು ಚರ್ಚಿಸಲಾಗುತ್ತದೆ. ಅತೀ ಶೀಘ್ರದಲ್ಲೇ ಪ್ರತಿಮೆ ಮರುಸ್ಥಾಪನೆ ಮಾಡಲಾಗುತ್ತದೆ.

–ಡಾ.ಮಂಥರ್ ಗೌಡ, ಶಾಸಕರು ಮಡಿಕೇರಿ ಕ್ಷೇತ್ರ



"ಜನರಲ್ ತಿಮ್ಮಯ್ಯ ವೃತ್ತಕ್ಕಾದ ಹಾನಿಯ ಕುರಿತು ನಗರಸಭೆ ಅಧಿಕಾರಿಗಳು ಹಾನಿಯ ಅಂದಾಜು ಪಟ್ಟಿ ತಯಾರಿಸುತ್ತಿದ್ದಾರೆ. ಈ ವರದಿಯನ್ನು ಕೆಎಸ್‌ಆರ್‌ಟಿಸಿ ವಿಭಾಗಕ್ಕೆ ನೀಡಲಾಗುತ್ತದೆ. ಆ ಮೂಲಕ ವೃತ್ತ ಮತ್ತು ಜನರಲ್ ತಿಮ್ಮಯ್ಯ ಪ್ರತಿಮೆಗೆ ಆಗಿರುವ ಹಾನಿಯನ್ನು ನಿಗಮವೇ ಭರಿಸಲು ಕ್ರಮ ಕೈಗೊಳ್ಳಲಾಗಿದೆ.

–ಅನಿತಾ ಪೂವಯ್ಯ, ನಗರ ಸಭೆ ಅಧ್ಯಕ್ಷೆ.

ಮಡಿಕೇರಿ ಡಿಪೋದಿಂದ ಮಂಗಳೂರು ಕಡೆಗೆ ಹೊರಟ ಮೊದಲ ಬಸ್ ಜನರಲ್ ತಿಮ್ಮಯ್ಯ ವೃತ್ತದ ಬಳಿ ಅಪಘಾತಕ್ಕೀಡಾಗಿದ್ದು, ವೃತ್ತಕ್ಕೆ ಹಾನಿಯಾಗಿದೆ. ಬೇರೊಂದು ವಾಹನಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಈ ದುರ್ಘಟನೆ ಸಂಭವಿಸಿದೆ ಎಂದು ಮಾಹಿತಿ ಇದೆ. ಬಸ್‌ನ ನಿರ್ವಾಹಕರಿಗೆ ಗಂಭೀರ ಗಾಯವಾಗಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ. ಬಸ್ ಚಲಾಯಿಸುತ್ತಿದ್ದವರು ನುರಿತ ಚಾಲಕರಾಗಿದ್ದಾರೆ. ಈ ಕುರಿತು ತನಿಖೆ ನಡೆಸಲಾಗುತ್ತದೆ.

–ಗೀತಾ, ಮಡಿಕೇರಿ ಡಿಪೋ ವ್ಯವಸ್ಥಾಪಕರು

ಪುರಸ್ಕೃತ ಜನರಲ್ ಕೊಡಂದೇರ ಎಸ್. ತಿಮ್ಮಯ್ಯ ಅವರ ಕಂಚಿನ ಪ್ರತಿಮೆಯನ್ನು ನಗರದ ಹೃದಯ ಭಾಗದಲ್ಲಿ 1973ರಲ್ಲಿ ಅಂದಿನ 'ಪುರಸಭೆ' ಸ್ಥಾಪನೆ ಮಾಡಿತ್ತು. ಅಂದಿನ ಪುರಸಭೆ ಅಧ್ಯಕ್ಷರಾಗಿದ್ದ ಎಂ.ಸಿ. ನಾಣಯ್ಯ ಅವರು ಜನರಲ್ ಕೊಡಂದೇರ ಎಸ್. ತಿಮ್ಮಯ್ಯ ಅವರ ಪ್ರತಿಮೆ ಸ್ಥಾಪನೆಗೆ ಕಾರಣರಾಗಿದ್ದರು. 1972ರಲ್ಲಿ ಜನರಲ್ ತಿಮ್ಮಯ್ಯ ಅವರ ಪ್ರತಿಮೆಯನ್ನು ರಾಂಚಿಯಲ್ಲಿ ತಯಾರಿಸಲಾಗಿದ್ದು, ಆ ಕಾಲಘಟ್ಟದಲ್ಲಿ ಪುರಸಭೆ ಅನುದಾನ, ಸಾರ್ವಜನಿಕರು ಮತ್ತು ವಿವಿಧ ಸಂಘ–ಸಂಸ್ಥೆಗಳ ಮೂಲಕ ದೇಣಿಗೆ ಸಂಗ್ರಹಿಸಿ ಪ್ರತಿಮೆಯನ್ನು ನಿರ್ಮಾಣ ಮಾಡಲಾಗಿತ್ತು. ಈ ಪ್ರತಿಮೆಯನ್ನು ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಅವರು 1973ರ ಮಾರ್ಚ್ 20 ರಂದು ಉದ್ಘಾಟಿಸಿದ್ದರು.

**ಗಣ್ಯರ ಭೇಟಿ–ಪರಿಶೀಲನೆ:** ಘಟನಾ ಸ್ಥಳಕ್ಕೆ ಮಾಜಿ ಸಚಿವ ಎಂ.ಸಿ.ನಾಣಯ್ಯ, ಮಡಿಕೇರಿ ಕ್ಷೇತ್ರ ಶಾಸಕ ಮಂಥರ್‌ಗೌಡ, ಜಿಲ್ಲಾಧಿಕಾರಿ ವೆಂಕಟರಾಜಾ, ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್‌ರಾಜ್, ಮಡಿಕೇರಿ ಕೆಎಸ್‌ಆರ್‌ಟಿಸಿ ಡಿಪೋದ ವ್ಯವಸ್ಥಾಪಕಿ ಗೀತಾ, ನಗರಸಭೆ ಪೌರಾಯುಕ್ತ ವಿಜಯ್, ನಗರಸಭಾಧ್ಯಕ್ಷೆ ಅನಿತಾ ಪೂವಯ್ಯ, ಕೊಡವ ಸಮಾಜದ ಪ್ರಮುಖರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆ ಕುರಿತು ಸಾರ್ವಜನಿಕರು ಮತ್ತು ಸಂಚಾರಿ ಪೊಲೀಸರಿಂದ ಪ್ರಮುಖರು ಮಾಹಿತಿ ಪಡೆದರು. ಇದೇ ಸ್ಥಳದಲ್ಲಿ ಪ್ರತಿಮೆಯನ್ನು ಮರು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಶಾಸಕ ಡಾ.ಮಂಥರ್ ಗೌಡ ಸಹಿತ ಪ್ರಮುಖರು ತಿಳಿಸಿದರು.

**ಮ್ಯೂಸಿಯಂಗೆ ಸ್ಥಳಾಂತರ:** ಘಟನೆ ಬಳಿಕ ಜನರಲ್ ತಿಮ್ಮಯ್ಯ ಅವರ ಪ್ರತಿಮೆಯನ್ನು ಅವರ ಹುಟ್ಟಿದ ಮನೆ ಸನ್ನಿಸೈಡ್‌ಗೆ ಸ್ಥಳಾಂತರ ಮಾಡಲಾಯಿತು. ಕ್ರೇನ್ ಮೂಲಕ ಪ್ರತಿಮೆಯನ್ನು ಸ್ಥಳಾಂತರಿಸಿ ಮ್ಯೂಸಿಯಂ ಹೊರ ಆವರಣದಲ್ಲಿ ಸಂರಕ್ಷಿಸಲಾಗಿದೆ. ವಿಷಯ ತಿಳಿದು ಮ್ಯೂಸಿಯಂಗೆ ಆಗಮಿಸುತ್ತಿರುವ ಸಾರ್ವಜನಿಕರು ಯಾವುದೇ ಹಾನಿಯಾಗದೇ ಇರುವುದಕ್ಕೆ ನಿಟ್ಟುಸಿರು ಬಿಟ್ಟು, ಜನರಲ್ ತಿಮ್ಮಯ್ಯ ಅವರ ಪ್ರತಿಮೆಯೊಂದಿಗೆ ಫೋಟೋ ತೆಗೆದುಕೊಳ್ಳುತ್ತಿರುವುದು ಕಂಡು ಬಂತು. ಜನರಲ್ ತಿಮ್ಮಯ್ಯ ವೃತ್ತ ಮತ್ತು ಅವರ ಪ್ರತಿಮೆಯೊಂದಿಗೆ ಜಿಲ್ಲೆಯ ಜನರು ಭಾವನಾತ್ಮಕ ಸಂಬಂಧವೂ ಇದ್ದು, ಅಪಘಾತದ ಬಗ್ಗೆ ಸಾರ್ವಜನಿಕರಲ್ಲಿ ಬೇಸರವೂ ಉಂಟಾಗಿದೆ.

**ಕಂಚಿನ ಪ್ರತಿಮೆಗೆ ಅಲ್ಪ ಹಾನಿ:** ಅಪಘಾತದಿಂದ ಕೆಳಗೆ ಬಿದ್ದ ಜನರಲ್ ತಿಮ್ಮಯ್ಯ ಅವರ ಕಂಚಿನ ಪ್ರತಿಮೆಯ ಹಿಂಭಾಗಕ್ಕೆ ಸ್ವಲ್ಪ ಹಾನಿಯಾಗಿದೆ. ಪ್ರತಿಮೆ ಬೀಳುವ ಸಂದರ್ಭ ಕೆಳಭಾಗದಲ್ಲಿದ್ದ ಕಬ್ಬಿಣದ ರೇಲಿಂಗ್ಸ್ ಬಡಿದ ಪರಿಣಾಮ ಪ್ರತಿಮೆಯ ಹಿಂಭಾಗದಲ್ಲಿ ಐದು ತೂತುಗಳಾಗಿವೆ. ಕಾಲಿನ ಭಾಗಕ್ಕೂ ಅಲ್ಪ ಪ್ರಮಾಣದ ಹಾನಿಯಾಗಿದ್ದು, ದುರಸ್ಥಿ ಕಾರ್ಯ ನಡೆಸಿದ ಬಳಿಕ ಮತ್ತೆ ಅದೇ ಸ್ಥಳದಲ್ಲಿ ಪ್ರತಿಷ್ಠಾಪನೆ ಮಾಡಲಾಗುತ್ತಿದೆ. ಅಪಘಾತದ ವಿಡಿಯೋ ಇದೀಗ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ವ್ಯಾಪಕ ಚರ್ಚೆಗೆ ಕಾರಣವಾಗಿದೆ.

**ಹೊರ ಎಸೆಯಲ್ಪಟ್ಟ ನಿರ್ವಾಹಕ:** ಕೆಎಸ್‌ಆರ್‌ಟಿಸಿ ಬಸ್ ಜನರಲ್ ತಿಮ್ಮಯ್ಯ ವೃತ್ತಕ್ಕೆ ಅಪ್ಪಳಿಸಿದ ಸಂದರ್ಭ ಮುಂಭಾಗದ ಸೀಟಿನಲ್ಲಿ ಕುಳಿತಿದ್ದ ಬಸ್‌ನ ನಿರ್ವಾಹಕ ಅರಸೀಕೆರೆಯ ಪುಟ್ಟಸ್ವಾಮಿ(39), ಬಸ್‌ನ ಮುಂಭಾಗದಿಂದ ಹೊರಗೆ ಎಸೆಯಲ್ಪಟ್ಟಿದ್ದಾರೆ. ಪರಿಣಾಮ ಅವರ ತಲೆ ಮತ್ತು ಸೊಂಟದ ಭಾಗಕ್ಕೆ ಗಂಭೀರ ಗಾಯಗಳಾಗಿದ್ದು, ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಬಸ್ ಆಗಷ್ಟೇ ಡಿಪೋದಿಂದ ನಿಲ್ದಾಣಕ್ಕೆ ತೆರಳುತ್ತಿದ್ದ ಹಿನ್ನೆಲೆಯಲ್ಲಿ ಬಸ್‌ನಲ್ಲಿ ಪ್ರಯಾಣಿಕರಿರಲಿಲ್ಲ. ಹೀಗಾಗಿ ಜೀವಹಾನಿ ತಪ್ಪಿದಂತಾಗಿದೆ. ಬಸ್‌ನ ಮುಂಭಾಗ ಸಂಪೂರ್ಣ ಜಖಂಗೊಂಡಿದ್ದು, ಈ ಕುರಿತು ಇಲಾಖಾ ತನಿಖೆ ನಡೆಯುತ್ತಿದೆ.

# ಮಂಡ್ಯದಲ್ಲಿ ಬಿಜೆಪಿ ಭಾರೀ ಪ್ರತಿಭಟನೆ

ಜೊತೆ ತಳ್ಳಾಟ ನಡೆಸಿದರು. ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಕಾರರು ಕಾವೇರಿ ಕೊಳ್ಳದ ರೈತರಿಗೆ ನೀರು ಕೊಡದೆ ಉರುಳಿ ಬೆಳೆಯುವ ಸ್ಥಿತಿ ತಂದಿತ್ತಿದೆ ಎಂದು ಕಿಡಿಕಾರಿದರು.

ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ ತಕ್ಷಣ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅಣತಿಯಂತೆ ಕಾವೇರಿ ಕೊಳ್ಳದ ಜಲಾಶಯಗಳಿಂದ ನೀರು ಬಿಡುಗಡೆ ಮಾಡಿ ರಾಜ್ಯದ ರೈತರಿಗೆ ಅನ್ಯಾಯ ಮಾಡಿದೆ ಎಂದು ದೂರಿದರು. ಕೆಆರ್‌ಎಸ್‌ನಲ್ಲಿ 113 ಅಡಿ ಇದ್ದ ನೀರು ಇದೀಗ 105 ಅಡಿಗೆ ಕುಸಿದಿದ್ದು, ಒಂದು ವಾರದಲ್ಲಿ 10 ಟಿಎಂಸಿ ನೀರು ತಮಿಳುನಾಡಿಗೆ ಹರಿದು ಹೋಗಿದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಅಭಾವ ಎದುರಾಗಲಿದೆ ಎಂದರು. ನೀರನ್ನು ಬಿಟ್ಟು ಇದೀಗ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಬುಧವಾರ ಸರ್ವ ಪಕ್ಷಗಳ ಸಭೆ ಕರೆದಿರುವುದು ಕಾಂಗ್ರೆಸ್ ಸರ್ಕಾರದ ಹುನ್ನಾರವಾಗಿದೆ. ಜಿಲ್ಲೆಯ ಶಾಸಕರು ಡಬ್ಬಲ್ ಆಕ್ಟಿಂಗ್ ಬಿಡಬೇಕು. ರೈತರ ಎದುರು ನೀರು ಬಿಡಬೇಡಿ ಎಂದು ನಾಟಕವಾಡಿ ಅಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಎದುರು ತಲೆಕೆರೆದು ನಿಂತುಕೊಳ್ಳುತ್ತಾರೆ. ಏಕೆ ನೀರು ಬಿಟ್ಟಿದ್ದೀರಿ, ನಿಲ್ಲಿಸಿ ಎಂದು ಹೇಳುವ ತಾಕತ್ತು ಇವರಿಗಿಲ್ಲ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರದ್ದು ದುರಂಹಕಾರದ ಪರಮಾವಧಿ. ರೈತರೇ ಸುಪ್ರೀಂಕೋರ್ಟ್‌ಗೆ ಹೋಗುವುದಾದರೆ ನೀವು ಏಕೆ ಇದ್ದೀರಿ, ಕಾವೇರಿ ಕಣಿವೆ ರೈತರಿಗೆ ದ್ರೋಹ ಮಾಡಿರುವ ನಿಮಗೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಸಂಸದರಾದ ಸುಮಲತಾ, ಪಿ.ಸಿ.ಮೋಹನ್, ಶಾಸಕ ಶ್ರೀವತ್ಸ, ಮಾಜಿ ಶಾಸಕರಾದ ಅಶ್ವತ್ಥ್ ನಾರಾಯಣ, ನಾಗೇಂದ್ರ, ನಿರಂಜನ್ ಕುಮಾರ್, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ. ಉಮೇಶ್ ಮುಖಂಡರಾದ ಕೆ.ಸಿ. ನಂಜುಂಡೇಗೌಡ, ಇಂಡುವಾಳು ಸಚ್ಚಿದಾನಂದ, ಅಶೋಕ್ ಜಯರಾಂ, ಎಸ್.ಪಿ.ಸ್ವಾಮಿ, ಡಾ.ಸಿದ್ದರಾಮಯ್ಯ, ಡಾ.ಇಂದ್ರೇಶ್, ನಾಗಾನಂದ್, ಸಿ.ಟಿ. ಮಂಜುನಾಥ್, ಬಿ.ಸಿ.ಸಂತೋಷ್ ಕುಮಾರ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

## ಮನೆ ಮಕ್ಕಳಿಗೆ ಊಟಕೊಡಲ್ಲ: ಸಂಸದೆ ಸುಮಲತಾ

ಕಾವೇರಿ ಪ್ರಾಧಿಕಾರದಲ್ಲಿ ತಮಿಳುನಾಡಿನ ಧ್ವನಿ ಹೆಚ್ಚಾಗಿದೆ. ಡ್ಯಾಂನಿಂದ ಹೂಳು ಎತ್ತುವುದಕ್ಕೂ ತಮಿಳುನಾಡಿನವರು ತಡೆಯುತ್ತಾರೆ. ನಾವು ಸುಮ್ಮನಿರಬೇಕಾಗುತ್ತೆ. ಕೆಆರ್‌ಎಸ್‌ನಲ್ಲಿ ಹೂಳು ಎತ್ತಿದರೆ ಹೆಚ್ಚು ನೀರು ಸಂಗ್ರಹ ಮಾಡಬಹುದು. ಅದಕ್ಕೂ ತಮಿಳುನಾಡು ಒಪ್ಪಲ್ಲ. ನಾವು ಹೂಳು ಎತ್ತಿದರೆ ಕರ್ನಾಟಕಕ್ಕೆ ಹೆಚ್ಚು ನೀರು ಸಿಗುತ್ತದೆ ಎಂದು ತಮಿಳುನಾಡು ಕ್ಯಾತೆ ತೆಗೆಯುತ್ತದೆ. ಪ್ರತಿ ಬಾರಿ ನಮ್ಮ ರೈತರಿಗೆ ಅನ್ಯಾಯ ಆಗುತ್ತಿದೆ. ಇದನ್ನು ತಡೆಯಬೇಕು ಎಂದು ಆಗ್ರಹಿಸಿದರು.

ಕುಡಿಯುವ ನೀರಿನ ಸಮಸ್ಯೆ ನಮ್ಮಲ್ಲಿದೆ. ಇದನ್ನು ಗಮನದಲ್ಲಿಟ್ಟುಕೊಳ್ಳದೆ ಸರ್ಕಾರ ಹೇಗೆ ನೀರು ಬಿಡುಗಡೆ ಮಾಡುತ್ತಿದೆ ಇದಕ್ಕೆ ಒಂದು ಕ್ಲಾರಿಟಿ ಇಲ್ಲ. ನಾವು ಎಲ್ಲಾ ಕಡೆ ಕಾವೇರಿ ನೀರಿನ ಸಮಸ್ಯೆ ಬಂದಾಗ ಮಾತನಾಡಿದ್ದೇವೆ. ತಮಿಳುನಾಡಿನ ವಿರುದ್ಧ ಮಾತನಾಡಿದ್ದೆ ಮೊದಲು ನಾನು. ಪ್ರತಿ ಬಾರಿ ನೀರಿನ ವಿಚಾರದಲ್ಲಿ ಕರ್ನಾಟಕಕ್ಕೆ ಅನ್ಯಾಯ ಆಗುತ್ತಿದೆ. ನಮ್ಮ ಕಡೆಯಿಂದ ಸರಿಯಾಗಿ ಪ್ರಾಧಿಕಾರ ಹಾಗೂ ನ್ಯಾಯಾಲಯದಲ್ಲಿ ವಾದ ಮಾಡುವುದರಲ್ಲಿ ಹಿನ್ನಡೆಯಾಗಿದೆ. ಯಾವ ಪ್ರಯತ್ನ ಮಾಡದೆ ತಮಿಳುನಾಡಿನವರು ಅರ್ಜಿ ಹಾಕಿದ ತಕ್ಷಣವೇ ನೀರು ಬಿಟ್ಟರೆ ರೈತರ ಗತಿ ಏನು ಎಂದು ಪ್ರಶ್ನಿಸಿದರು.

## ನೀರಿನ ಪ್ರಮಾಣ ಕಡಿತ: ಶಾಸಕ ರಮೇಶ್‌ಬಾಬು

ಪರಿಸ್ಥಿತಿಯಲ್ಲಿದ್ದೇವೆ. ನೀರು ಕೊಡುವ ಬಗ್ಗೆ ಹಿಂದಿನಿಂದಲೂ ತೀರ್ಮಾನವಾಗಿದೆ. ಹೆಚ್.ಡಿ.ದೇವೇಗೌಡ,

ಬಿ.ಎಸ್.ಯಡಿಯೂರಪ್ಪ, ಹೆಚ್.ಡಿ. ಕುಮಾರಸ್ವಾಮಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗಲೂ ನೀರು ಬಿಡಲಾಗಿದೆ. ವಾಡಿಕೆಯಂತೆ ಈಗಲೂ ಸಹ ನೀರು ಕೊಡಲಾಗಿದೆ ಎಂದರು.

ತಮಿಳುನಾಡು ಸರ್ಕಾರ ಸಿಡಬ್ಲ್ಯುಸಿ ಮುಂದೆ ಹೋಗಿದೆ. 10–12 ಟಿಎಂಸಿ ನೀರು ಕೊಡಲು ಸೂಚನೆಗೆ ಅನುಗುಣವಾಗಿ ಬಿಡಲಾಗುತ್ತದೆ. ಕಮಿಟಿ ತೀರ್ಮಾನದಲ್ಲಿ ಆದ ನಿಲುವಿನಂತೆ ನಮ್ಮ ಸರ್ಕಾರ ನೀರು ಬಿಟ್ಟಿರುವುದು ಸತ್ಯ. ತಮಿಳುನಾಡು ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಹಾಕಿದ್ದಾರೆ. ಇವತ್ತು ವಿಚಾರಣೆ ಹಂತದಲ್ಲಿದೆ. ಸಿಡಬ್ಲ್ಯುಸಿ ತೀರ್ಮಾನ ಅನುಷ್ಠಾನ ಗೊಳಿಸಿಲ್ಲವಾದರೆ ಸುಪ್ರೀಂ ಕೋರ್ಟ್ ನಮ್ಮ ಮನವಿ ಗಂಭೀರಗೊಳಿಸಲ್ಲ ಎಂದು ಸ್ಪಷ್ಟಪಡಿಸಿದರು.

ಬಿಜೆಪಿಯವರು ಚುನಾವಣೆಗಾಗಿ ಹೋರಾಟ ಮಾಡುತ್ತಿದ್ದಾರೆ. ಕಳೆದ 3 ತಿಂಗಳ ಹಿಂದೆ ನಿಮ್ಮದೇ ಸರ್ಕಾರ ಇತ್ತು. ರಾಜ್ಯದ ಸಂಸದರು ಕಾವೇರಿ ವಿಚಾರವಾಗಿ ಕೇಂದ್ರಕ್ಕೆ ಒತ್ತಡ ಹಾಕಿಲ್ಲ. ಕಳೆದ ಒಂದು ವಾರದಿಂದ ತಮಿಳುನಾಡಿಗೆ ನೀರು ಕೊಟ್ಟಿದ್ದೇವೆ. ಸುಪ್ರೀಂ ಕೋರ್ಟ್ ತೀರ್ಪಿಗೆ ಕಾಯುತ್ತಿದ್ದೇವೆ. ಸಂಜೆಯೊಳಗೆ ನೀರು ನಿಲ್ಲಿಸುವ ತಿರ್ಮಾನಕ್ಕೆ ರಾಜ್ಯ ಸರ್ಕಾರ ಮುಂದಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಅಶೋಕ್, ಜಿಲ್ಲಾ ಯುವ ಘಟಕದ ಅಧ್ಯಕ್ಷ ವಿಜಯಕುಮಾರ್, ಮುಖಂಡರಾದ ಕೃಷ್ಣ, ಸಿ.ಎಂ.ದ್ಯಾವಪ್ಪ, ಸುರೇಶ್ ಕಂಠಿ, ನಹೀಂ ಇದ್ದರು.

# ಸರ್ಕಾರ, ರಾಜ್ಯದ ರೈತರ ಹಿತದೃಷ್ಟಿಯಿಂದ ತಮಿಳ್ನಾಡಿಗೆ ಕಾವೇರಿ ಹರಿಸಿದ್ದೇವೆ

- ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮರ್ಥನೆ
- ಕಾವೇರಿ ನದಿ ನಿರ್ವಹಣಾ ಮಂಡಳಿ ಆಗಸ್ಟ್ ಅಂತ್ಯದವರೆಗೆ ಪ್ರತಿನಿತ್ಯ 10 ಸಾವಿರ ಕ್ಯೂಸೆಕ್ ನೀರು ಬಿಡಲು ಸೂಚಿಸಿತ್ತು

ಬೆಂಗಳೂರು, ಆ.21(ಕೆಎಂಶಿ)– ಸರ್ಕಾರ ಮತ್ತು ರಾಜ್ಯದ ರೈತರ ಹಿತ ದೃಷ್ಟಿಯಿಂದ ತಮಿಳುನಾಡಿಗೆ ಕಾವೇರಿ ನೀರು ಹರಿಸಿದ್ದಾಗಿ ಜಲಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಸಮರ್ಥನೆ ಮಾಡಿಕೊಂಡಿದ್ದಾರೆ. ಸಂಕಷ್ಟ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ಯಾವ ಪ್ರಮಾಣದ ನೀರು ಹರಿಸಬೇಕಿತ್ತೋ ಅದಕ್ಕಿಂತ ಕಡಿಮೆ ನೀರನ್ನು ಹರಿಸಿ ನಮ್ಮ ರೈತರ ಮತ್ತು ಕಾನೂನಿನ ಹಿತ ಕಾಪಾಡಲು ಸರ್ಕಾರ ಈ ತೀರ್ಮಾನ ಕೈಗೊಂಡಿತು ಎಂದಿದ್ದಾರೆ.

ಜಲಸಂಪನ್ಮೂಲ ಇಲಾಖೆ ಹೊಣೆ ಹೊತ್ತಿರುವ ಉಪ ಮುಖ್ಯಮಂತ್ರಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಎರಡು ರಾಜ್ಯದ ರೈತರು ಉಳಿಯಬೇಕು. ಜತೆಗೆ ಮುಂದಿನ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಅನುಕೂಲವಾಗುವ ದೃಷ್ಟಿಯಿಂದ ಸರ್ಕಾರ ತೀರ್ಮಾನ ಕೈಗೊಂಡಿದೆ.



ಕಾವೇರಿ ನದಿ ನಿರ್ವಹಣಾ ಮಂಡಳಿಯು ಆಗಸ್ಟ್ ಅಂತ್ಯದವರೆಗೂ ಪ್ರತಿನಿತ್ಯ 10 ಸಾವಿರ ಕ್ಯುಸೆಕ್ ನೀರು ಬಿಡುವಂತೆ ಸೂಚಿಸಿತ್ತು ಆದರೆ, ನಾವು ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದು, ಇದಕ್ಕಾಗಿ ಪ್ರತ್ಯೇಕ ಪೀಠ ರಚನೆಯನ್ನು ಮುಖ್ಯ ನ್ಯಾಯಮೂರ್ತಿಗಳು ಮಾಡಿದ್ದಾರೆ.

ಪೀಠ ರಚನೆ ಆಗಿ ಹೋಗಿದೆ. ಕೇಂದ್ರ ಸರ್ಕಾರ ಮನಸ್ಸು ಮಾಡಿದ್ದರೆ, ಕರ್ನಾಟಕದ ನೀರಿನ ಸ್ಥಿತಿಗತಿಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಬಹುದಿತ್ತು. ಆದರೆ, ಆ ರೀತಿ ಮಾಡಿಲ್ಲ. ಪೀಠದ ಮುಂದೆ ನಮ್ಮ ವಾದವನ್ನು ಮಂಡಿಸುತ್ತೇವೆ. ಆಗಸ್ಟ್ ತಿಂಗಳಲ್ಲಿ 36.76 ಟಿಎಂಸಿ ನೀರು ಬಿಡುವಂತೆ ಕೋರಿತ್ತು. ಆದರೆ, ಇದುವರೆಗೂ ನಾವು 19.6 ಟಿಎಂಸಿ ನೀರು ಹರಿಸಲಾಗಿದೆ.

ಕಾವೇರಿ ಜಲಾನಯನ ಭಾಗದ ನಾಲ್ಕು ಜಲಾಶಯದಲ್ಲೂ 55 ಟಿಎಂಸಿ ಮಾತ್ರ ಶೇಖರಣೆ ಇದೆ. ನಮಗೇ 124 ಟಿಎಂಸಿ ನೀರು ಬೇಕು. ನಮಗೆ ನೀರು ಇಲ್ಲದಿರುವಾಗ ತಮಿಳುನಾಡಿಗೆ ಹೆಚ್ಚು ನೀರು ಹರಿಸುವುದು ಎಲ್ಲಿಂದ ಎಂದು ಪ್ರಶ್ನಿಸಿದರು.

ಕೃಷ್ಣರಾಜಸಾಗರ ಅಣೆಕಟ್ಟೆಯಲ್ಲಿ 22, ಹೇಮಾವತಿ 20, ಹಾರಂಗಿ 7 ಹಾಗೂ ಕಬಿನಿ ಜಲಾಶಯದಲ್ಲಿ 6.5 ಟಿಎಂಸಿ ನೀರು ಶೇಖರಣೆಯಾಗಿದೆ. ಬೆಂಗಳೂರು ಮತ್ತು ಮೈಸೂರು ಸೇರಿದಂತೆ ವಿವಿಧ ನಗರಗಳ ಕುಡಿಯುವ ನೀರಿಗೆ 45 ಟಿಎಂಸಿ ಬೇಕು. ನಮ್ಮ ರಾಜ್ಯದ ಎಲ್ಲಾ ಅಣೆಕಟ್ಟುಗಳ ಕೀಲಿಕೈ ಕೇಂದ್ರದ ಬಳಿ ಇದೆ.

ಅವರು ಹೇಳಿದಂತೆ ನಡೆದುಕೊಳ್ಳುವ ಪರಿಸ್ಥಿತಿ ಇದೆ. ಹಿಂದೆ ಅಧಿಕಾರದಲ್ಲಿದ್ದ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಬಿಜೆಪಿ ಮತ್ತು ಜನತಾದಳದ ಅವಧಿಯಲ್ಲಿ ಕಾನೂನು ಗೌರವಿಸಿ ನೀರು ಬಿಟ್ಟಿದ್ದಾರೆ. ಈಗ ನಾವು ಅದನ್ನೇ ಮಾಡಿದ್ದೇವೆ ಎಂದು ಸಮರ್ಥಿಸಿಕೊಂಡರು.

ಎರಡು ರಾಜ್ಯಗಳ ಸಂಕಷ್ಟ ಪರಿಹಾರವಾಗಬೇಕಾದರೆ, ಕೃಷ್ಣರಾಜಸಾಗರ ಅಣೆಕಟ್ಟೆಗೆ ಮೇಕೆದಾಟು ಬಳಿ ಸಮಾನಾಂತರ ಅಣೆಕಟ್ಟು ನಿರ್ಮಾಣವೊಂದೇ ಪರಿಹಾರ. ಇದಕ್ಕಾಗಿಯೇ ನಾವು ಪ್ರಯತ್ನ ಮಾಡುತ್ತಿದ್ದೇವೆ ಎಂದರು.

ಈ ಬಾರಿಯ ಮುಂಗಾರು ಮಳೆ ಕೊರತೆಯಿಂದಾಗಿ ಕಾವೇರಿ ಜಲಾನಯನ ಭಾಗದಲ್ಲಿ ನೀರಿನ ಕೊರತೆ ಹೆಚ್ಚಾಗಿದೆ.

ಕಾವೇರಿ ನ್ಯಾಯಾಧೀಕರಣದ ತೀರ್ಪಿನಂತೆ ಪೂರ್ಣ ಪ್ರಮಾಣದ ನೀರು ಹರಿಸಲಾಗಿಲ್ಲ. ಇದನ್ನು ಪ್ರಶ್ನಿಸಿ ತಮಿಳುನಾಡು ಸರ್ಕಾರ ನ್ಯಾಯಾಲಯದ ಮೊರೆ ಹೋಗಿತ್ತು.

## ಪ್ರಯಾಣಿಕರ ಪರದಾಟ

ಬಸ್ಸಿಗಾಗಿ ಕಾಯುತ್ತಿದ್ದ ಪ್ರಯಾಣಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಎರಡು ತಾಸಿಗೂ ಹೆಚ್ಚು ಕಾಲ ಸಾರ್ವಜನಿಕರಿಗೆ ತೊಂದರೆಯಾಯಿತು.

ಪ್ರತಿಭಟನೆ ವೇಳೆ ಭಾರೀ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ದಕ್ಷಿಣ ವಲಯ ಡಿಐಜಿಪಿ ಬೋರಲಿಂಗಯ್ಯ, ಎಸ್ಪಿ ಯತೀಶ್ ಭದ್ರತೆ ಪರಿಶೀಲಿಸಿದರು. ಪ್ರತಿಭಟನೆ ನಡೆಯುವ ಸಂದರ್ಭ ಎಎಸ್ಪಿ ತಿಮ್ಮಯ್ಯ ನೇತೃತ್ವದಲ್ಲಿ ಪೊಲೀಸರ ತಂಡ ಸ್ಥಳದಲ್ಲೇ ಮೊಕ್ಕಾಂ ಹೂಡಿತ್ತು. ಪ್ರತಿಭಟನಾಕಾರರನ್ನು ವಶಕ್ಕೆ ಪಡೆಯಲು ಬಸ್ ಸೇರಿದಂತೆ ಪೊಲೀಸ್ ವಾಹನಗಳನ್ನು ಸ್ಥಳದಲ್ಲಿ ಇರಿಸಿಕೊಳ್ಳಲಾಗಿತ್ತು. ಆದರೆ ಪ್ರತಿಭಟನಾಕಾರರು ಸ್ವಯಂ ಪ್ರೇರಿತರಾಗಿ ಪ್ರತಿಭಟನೆ ಕೈಬಿಟ್ಟ ಹಿನ್ನೆಲೆಯಲ್ಲಿ ಮಧ್ಯಾಹ್ನದ ವೇಳೆಗೆ ವಾಹನ ಸಂಚಾರ ಸಹಜ ಸ್ಥಿತಿಗೆ ಮರಳಿತು.

ಮೈಸೂರು ಮಿತ್ರ ಮಂಗಳವಾರ 22 ಆಗಸ್ಟ್ 2023

# ವಿರಾಜಪೇಟೆ ಬಳಿ ಕಾಡಾನೆ ದಾಳಿಗೆ ಮಹಿಳೆ ಬಲಿ

## ಮನೆ ಸಮೀಪ ವಾಕಿಂಗ್ ಮಾಡುತ್ತಿದ್ದಾಗ ದುರಂತ

**●ಕಾಡಾನೆ ಹಾವಳಿ ತಡೆಗೆ ಆಗ್ರಹಿಸಿ ಪ್ರತಿಭಟನೆ ●ಕೆಪಿಸಿಸಿ ವಕ್ತಾರ ಸಂಕೇತ್‌ಪೂವಯ್ಯರಿಂದ ಮನವೊಲಿಕೆ**

ವಿರಾಜಪೇಟೆ, ಆ.21– ಕಾಡಾನೆ ದಾಳಿಗೆ ಮಹಿಳೆಯೊಬ್ಬರು ಬಲಿಯಾದ ಘಟನೆ ವಿರಾಜಪೇಟೆ ತಾಲೂಕಿನ ಮಟ್ಟಂ ಗ್ರಾಮದಲ್ಲಿ ನಡೆದಿದೆ. ಮಟ್ಟಂ ಗ್ರಾಮ ನಿವಾಸಿ ಆಯೆಷಾ(63) ಎಂಬುವರೇ ಕಾಡಾನೆ ದಾಳಿಯಿಂದ ಮೃತಪಟ್ಟ ದುರ್ದೈವಿ. ಸೋಮವಾರ ಬೆಳಗ್ಗೆ ಮನೆ ಸಮೀಪ ವಾಕಿಂಗ್ ಮಾಡುತ್ತಿದ್ದ ಸಂದರ್ಭದಲ್ಲಿ ಕಾಫಿ ತೋಟದಿಂದ ಮುಖ್ಯ ರಸ್ತೆಗೆ ಅಡ್ಡಲಾಗಿ ಬಂದ ಕಾಡಾನೆ ದಾಳಿ ನಡೆಸಿದ್ದು, ಗಂಭೀರವಾಗಿ ಗಾಯಗೊಂಡ ಆಯೆಷಾ ಅವರು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ.





**ಗ್ರಾಮಸ್ಥರ ಪ್ರತಿಭಟನೆ:** ಘಟನೆಯ ಮಾಹಿತಿ ಅರಿತ ಸುತ್ತಮುತ್ತಲ ಗ್ರಾಮಸ್ಥರು ಸ್ಥಳದಲ್ಲೇ ದಿಢೀರ್ ಪ್ರತಿಭಟನೆ ನಡೆಸಿ, ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕಾಡಾನೆಗಳ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಬೇಕೆಂದು ಒತ್ತಾಯಿಸಿದರು. ದಿನ ನಿತ್ಯ ಕಾಡಾನೆಗಳ ಹಿಂಡು ಗ್ರಾಮದ ಕಾಫಿ ತೋಟಗಳಿಗೆ ಲಗ್ಗೆ ಇಟ್ಟು ಅಪಾರ ಪ್ರಮಾಣದ ಬೆಳೆ ಹಾನಿ ಮಾಡುತ್ತಿದ್ದು, ಇದೀಗ ಗ್ರಾಮದ ಮುಖ್ಯ ರಸ್ತೆಗಳಲ್ಲೇ ರಾಜಾರೋಷವಾಗಿ ಕಾಡಾನೆಗಳು ಓಡಾಟ ನಡೆಸುತ್ತಿದ್ದು, ಆತಂಕದ ವಾತಾವರಣ ಮೂಡಿದೆ. ಶಾಲಾ ವಿದ್ಯಾರ್ಥಿಗಳು ಶಾಲೆಗಳಿಗೆ ತೆರಳಲು ಹಾಗೂ ಕಾರ್ಮಿಕರು ಕೆಲಸಕ್ಕೆ ತೆರಳಲು ಭಯಪಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಮಾಹಿತಿ ಇದ್ದರೂ ಅರಣ್ಯ ಇಲಾಖೆ ಯಾವುದೇ ಕ್ರಮಕ್ಕೆ ಗೊಂಡಿಲ್ಲ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾ ಉಸ್ತುವಾರಿ ಸಚಿವರು, ಜನಪ್ರತಿನಿಧಿಗಳು, ಅಧಿಕಾರಿಗಳು ಸ್ಥಳಕ್ಕೆ ಬರಬೇಕೆಂದು ಪಟ್ಟುಹಿಡಿದರು.

ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟುವಲ್ಲಿ ವಿಫಲವಾಗಿರುವ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಘಟನೆ ನಡೆದ ಬಳಿಕ ಎರಡೂವರೆ ಗಂಟೆ ತಡವಾಗಿ ಬಂದ ಅರಣ್ಯ ಇಲಾಖೆ ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಈ ಹಿನ್ನೆಲೆಯಲ್ಲಿ ಕೆಲ ಕಾಲ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಸ್ಥಳಕ್ಕಾಗಮಿಸಿದ ಸಿದ್ದಾಪುರ ಪೊಲೀಸರು ಪ್ರತಿಭಟನಾಕಾರರ ಮನವೊಲಿಕೆಗೆ ವಿಫಲ ಯತ್ನ ನಡೆಸಿದರು.

**ಸಂಕೇತ್ ಪೂವಯ್ಯ ಭೇಟಿ:** ಕೆಪಿಸಿಸಿ ರಾಜ್ಯ ವಕ್ತಾರ ಮೇರಿಯಂಡ ಸಂಕೇತ್ ಪೂವಯ್ಯ ಅವರು ಸ್ಥಳಕ್ಕೆ ಭೇಟಿ ನೀಡಿ, ಪ್ರತಿಭಟನಾಕಾರರ ಮನವೊಲಿಸಿದರು. ಸ್ಥಳಕ್ಕೆ ಆಗಮಿಸಿದ ಡಿಎಫ್‌ಓ ಪೂವಯ್ಯ ಪ್ರತಿಭಟನಾಕಾರರೊಂದಿಗೆ ಮಾತನಾಡಿ, ಕಾಡಾನೆ ಕಾಡಿಗಟ್ಟುವ ಕಾರ್ಯಾಚರಣೆ, ಉಪಟಳ ನೀಡುತ್ತಿರುವ ಕಾಡಾನೆ ಸೆರೆ ಹಾಗೂ ಸರ್ಕಾರದ ಪರಿಹಾರ ತಕ್ಷಣ ಕೊಡಿಸುವ ಭರವಸೆ ನೀಡಿದರು. ಈ ಸಂದರ್ಭ ವಿರಾಜಪೇಟೆ ಡಿಎಫ್‌ಓ ಶರಣಬಸಪ್ಪ, ಎಸಿಎಫ್ ನೆಹರು, ಉಪ ವಲಯ ಅರಣ್ಯಾಧಿಕಾರಿಗಳಾದ ಅಶೋಕ್, ದೇವಯ್ಯ, ಸರ್ಕಲ್ ಇನ್ಸ್‌ಪೆಕ್ಟರ್ ಅನೂಪ್ ಮಾದಪ್ಪ, ಸಿದ್ದಾಪುರ ಠಾಣಾಧಿಕಾರಿ ರಾಘವೇಂದ್ರ ಸೇರಿದಂತೆ ಮತ್ತಿತರರು ಹಾಜರಿದ್ದರು.

ಘಟನಾ ಸ್ಥಳದಲ್ಲಿ ಮಾಲ್ದಾರೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಾಲತಿ, ಮಾಜಿ ಅಧ್ಯಕ್ಷ ಸಮೀರ್, ರೈತ ಸಂಘದ ಕಾನೂನು ಸಲಹೆಗಾರ ಹೇಮಚಂದ್ರ, ಕಾರ್ಮಿಕ ಮುಖಂಡ ರಮೇಶ್, ಪ್ರಮುಖರಾದ ನಜೀರ್, ಮೊಹಮ್ಮದ್ ಅಲಿ, ಹುಸೇನ್, ವಿ.ಕೆ.ಬಶೀರ್, ಸೇರಿದಂತೆ ಕಾರ್ಮಿಕ ಮಹಿಳೆಯರು ಹಾಜರಿದ್ದರು. ಸಿದ್ದಾಪುರದ ಆರೋಗ್ಯ ಕೇಂದ್ರದಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು. ಈ ಘಟನೆ ಕುರಿತು ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

# ಅರಸರ ಹಾದಿಯಲ್ಲಿ ಸಾಗದಿದ್ದರೆ ಸರ್ಕಾರಕ್ಕೆ ಕಷ್ಟ

## ಡಿ. ದೇವರಾಜ ಅರಸರ ಜನ್ಮದಿನಾಚರಣೆಯಲ್ಲಿ ಮಾಜಿ ಸಚಿವ ಎಂ.ಸಿ. ನಾಣಯ್ಯ ಆತಂಕ



ಮಡಿಕೇರಿ, ಆ.21– ಸಾಮಾಜಿಕ ಪರಿವರ್ತಕ ಹಾಗೂ ಅಭಿವೃದ್ಧಿಯ ಹರಿಕಾರ ಡಿ.ದೇವರಾಜ ಅರಸು ಕಾಲದ ನಂತರ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ದಾಖಲೆಯ 135 ಸ್ಥಾನಗಳಲ್ಲಿ ಗೆಲುವು ದಾಖಲಿಸುವ ಮೂಲಕ ಇತಿಹಾಸ ಸೃಷ್ಟಿಸಿದ್ದು, ಅರಸರ ಹಾದಿಯಲ್ಲಿ ಈಗಿನ ಸರ್ಕಾರ ಸಾಗದಿದ್ದರೆ ಕಷ್ಟವಾಗಬಹುದು ಎಂದು ಮಾಜಿ ಸಚಿವ ಎಂ.ಸಿ.ನಾಣಯ್ಯ ಅಭಿಪ್ರಾಯಪಟ್ಟಿದ್ದಾರೆ.

ಕೊಡಗು ಜಿಲ್ಲಾ ಅಹಿಂದ ಒಕ್ಕೂಟ ಹಾಗೂ ಸಹಮತ ವೇದಿಕೆ ವತಿಯಿಂದ ನಗರದ ಪತ್ರಿಕಾ ಭವನದಲ್ಲಿ ನಡೆದ ಡಿ.ದೇವರಾಜ ಅರಸರ 108ನೇ ಜನ್ಮ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. 1972ರಲ್ಲಿ 216 ವಿಧಾನಸಭಾ ಕ್ಷೇತ್ರಗಳಲ್ಲಿ 165 ಕ್ಷೇತ್ರಗಳನ್ನು ಗೆಲ್ಲುವ ಮೂಲಕ ದೇವರಾಜ ಅರಸು ಅವರು ಇತಿಹಾಸ ಸೃಷ್ಟಿಸಿದ್ದರು. ಇದೀಗ ಕರ್ನಾಟಕದಲ್ಲಿ 2ನೇ ಇತಿಹಾಸ ಸೃಷ್ಟಿಯಾಗಿದ್ದು, ಕಾಂಗ್ರೆಸ್ ಪಕ್ಷ 135 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಪ್ರಧಾನಿ ನರೇಂದ್ರಮೋದಿ ಅವರು ರಾಜ್ಯದಲ್ಲಿ 26 ದಿನಗಳ ಕಾಲ ಪ್ರವಾಸ ಕೈಗೊಂಡು 36 ಸಭೆಗಳನ್ನು ನಡೆಸಿದರು. ಆದರೆ ಮೌನವಾಗಿಯೇ ಇದ್ದ ಮತದಾರ ಬದಲಾವಣೆಯನ್ನು ಬಯಸಿ ಕಾಂಗ್ರೆಸ್‌ಗೆ 135 ಸ್ಥಾನಗಳನ್ನು ತಂದು ಕೊಟ್ಟಿದ್ದಾರೆ. ಇದು 2ನೇ ದಾಖಲೆಯಾಗಿದ್ದು, ಇದೀಗ ಆಡಳಿತದಲ್ಲಿರುವ ಕಾಂಗ್ರೆಸ್ ಸರ್ಕಾರ ದೇವರಾಜ ಅರಸು ಅವರ ಹಾದಿಯಲ್ಲೇ ಸಾಗಬೇಕು. ಜನರು ಕೂಡ ಇದನ್ನೇ ನಿರೀಕ್ಷೆ ಮಾಡುತ್ತಿದ್ದಾರೆ. ಸರ್ಕಾರ ಬೇರೆ ಹಾದಿ ಹಿಡಿದರೆ ಕಷ್ಟವಾಗಬಹುದು ಎಂದು ನಾಣಯ್ಯ ಅಭಿಪ್ರಾಯಪಟ್ಟರು.

ದೇವರಾಜ ಅರಸು ಅವರು ನನ್ನ ರಾಜಕೀಯ ಗುರು, ನನ್ನನ್ನು ಒತ್ತಾಯ ಮಾಡಿ ಚುನಾವಣೆಗೆ ನಿಲ್ಲಿಸಿದ ಪರಿಣಾಮ ನಾನು ವಿಧಾನಸಭೆ ಪ್ರವೇಶಿಸುವಂತಾಯಿತು. ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು, ಜನಸಾಮಾನ್ಯರು ವಿಧಾನಸಭೆ ಪ್ರವೇಶಿಸಲಾಗದ ಕಾಲಘಟ್ಟದಲ್ಲಿ ಅರಸು ಅವರು ರಾಜ್ಯದ 216 ವಿಧಾನಸಭಾ ಕ್ಷೇತ್ರಗಳಲ್ಲಿ ಸಂಚರಿಸಿ ಪಕ್ಷ ಸಂಘಟಿಸುವ ಮೂಲಕ ಹೊಸ ರಾಜಕೀಯ ಮುಖಂಡರುಗಳಿಗೆ ಹಾಗೂ ಯುವ ಪ್ರತಿಭೆಗಳಿಗೆ ಅವಕಾಶ ನೀಡಿ ವಿಧಾನಸಭೆ ಪ್ರವೇಶಿಸುವಂತೆ ಮಾಡಿದರು ಎಂದು ನೆನಪಿಸಿಕೊಂಡರು.

**ರಮೇಶ್‌ಗೆ ಅಧಿಕಾರ ಸಿಗಲಿ:** ಜಿಲ್ಲೆಯಲ್ಲಿ ಕಳೆದ ಅನೇಕ ವರ್ಷಗಳಿಂದ ಅಹಿಂದ ಒಕ್ಕೂಟವನ್ನು ಬೆಳೆಸುತ್ತಾ ಬಂದಿರುವ ಟಿ.ಪಿ.ರಮೇಶ್ ಅವರು ಜನಪ್ರತಿನಿಧಿಯಾಗಿ ಅಧಿಕಾರಕ್ಕೆ ಬರಬೇಕಾಗಿತ್ತು. ಆದರೆ ಇಲ್ಲಿಯವರೆಗೆ ಸಾಧ್ಯವಾಗಿಲ್ಲ, ಮುಂದಿನ ದಿನಗಳಲ್ಲಿ ಅವರು ಉನ್ನತ ಸ್ಥಾನಕ್ಕೇರಲಿ, ಶಾಸಕರಾಗಲಿ ಎಂದು ನಾಣಯ್ಯ ಆಶಿಸಿದರು. ಸಹಮತ ವೇದಿಕೆಯ ಅಧ್ಯಕ್ಷ ಹಾಗೂ ಅಹಿಂದ ಒಕ್ಕೂಟದ ಸ್ಥಾಪಕ ಅಧ್ಯಕ್ಷ ಟಿ.ಪಿ.ರಮೇಶ್ ಮಾತನಾಡಿ, ದೇವರಾಜ ಅರಸು ಅವರು ಸಾಮಾಜಿಕ ನ್ಯಾಯವನ್ನು ನೀಡಿದರು. ಸಿದ್ಧಾಂತ ಮತ್ತು ಮೌಲ್ಯ ಇದ್ದರೆ ಮಾತ್ರ ಜನಸಾಮಾನ್ಯರಿಗೆ ಸಹಾಯ ಮಾಡಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

**ಸನ್ಮಾನ:** ಮಹಿಳೋದಯ ಮಹಿಳಾ ಒಕ್ಕೂಟದ ಸಂಯೋಜಕಿ ಜಾಯ್ಸ್ ಮೆನೇಜಸ್, ತನಲ್ ವೃದ್ಧಾಶ್ರಮದ ಮೇಲ್ವಿಚಾರಕಿ ಜಿ.ಕೆ.ಶಕೀಲಾ, ಕೂರ್ಗ್ ಬ್ಲಡ್ ಫೌಂಡೇಶನ್‌ನ ಪದಾಧಿಕಾರಿ ಎಂ.ಸಮೀರ್ ಹಾಗೂ ಸಮಾಜ ಸೇವಕ ಬಾಬುಚಂದ್ರ ಉಳ್ಳಾಗಡ್ಡಿ ಅವರುಗಳನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು.

ಸಹಮತ ವೇದಿಕೆಯ ಪ್ರಧಾನ ಕಾರ್ಯದರ್ಶಿ ಮುನೀರ್ ಅಹಮ್ಮದ್, ವೇದಿಕೆಯ ಪ್ರಮುಖ ಲಿಯಾಕತ್ ಅಲಿ, ಅಹಿಂದ ಒಕ್ಕೂಟದ ಅಧ್ಯಕ್ಷ ಟಿ.ಎಂ.ಮುದ್ದಯ್ಯ, ರೇವತಿ ರಮೇಶ್, ಕಾರ್ಯಾಧ್ಯಕ್ಷ ಕೆ.ಟಿ.ಬೇಬಿ ಮ್ಯಾಥ್ಯು ಮತ್ತಿತರರು ಉಪಸ್ಥಿತರಿದ್ದರು.

# ಬೆಟ್ಟಗೇರಿಯಲ್ಲಿ ನಾಗರಪಂಚಮಿ ಅಂಗವಾಗಿ ವಿಶೇಷಪೂಜೆ



ಗುಡ್ಡೆಹೊಸೂರು, ಆ.21– ಇಲ್ಲಿಗೆ ಸಮೀಪದ ಬೆಟ್ಟಗೇರಿ ಗ್ರಾಮದ ಶ್ರೀ ಚೌಡೇಶ್ವರಿ ದೇವಸ್ಥಾನದ ಆವರಣದ ನಾಗಬನದಲ್ಲಿ ನಾಗರಪಂಚಮಿ ಅಂಗವಾಗಿ ವಿಶೇಷ ಪೂಜೆ ನಡೆಸಲಾಯಿತು. ಈ ಪೂಜಾ ಕಾರ್ಯದಲ್ಲಿ ದೇವಸ್ಥಾನ ಸಮಿತಿಯವರು ಮತ್ತು ಅಧಿಕ ಗ್ರಾಮಸ್ಥರು ಹಾಜರಿದ್ದರು. ಕುಶಾಲನಗರ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಅರ್ಚಕರಾದ ಸೋಮಶೇಖರ್ ಮತ್ತು ತಂಡದವರು ಪೂಜಾಕಾರ್ಯ ನಡೆಸಿದರು.

# ಕೊಡಗು ವೈದ್ಯಕೀಯ ಕಾಲೇಜು ವಿದ್ಯಾರ್ಥಿನಿಯರ ವಸತಿ ಗೃಹದ ಬಳಿ ಪುಂಡರ ಹಾವಳಿ ವಿರೋಧಿಸಿ ಪ್ರತಿಭಟನೆ



ಮಡಿಕೇರಿ, ಆ.21– ನಗರದ ಹೊರವಲಯದಲ್ಲಿರುವ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಅವ್ಯವಸ್ಥೆಗಳ ಕೂಪವಾಗಿದೆ. ವಿದ್ಯಾರ್ಥಿನಿಯರ ವಸತಿ ಗೃಹದ ಸಮೀಪ ಪುಂಡರ ಹಾವಳಿ ಮಿತಿಮೀರಿದ್ದು, ಸೂಕ್ತ ರಕ್ಷಣೆ ಇಲ್ಲವಾಗಿದೆ ಎಂದು ಆರೋಪಿಸಿ, ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ವೈದ್ಯಕೀಯ ಕಾಲೇಜಿನ ಸುಮಾರು 600ಕ್ಕೂ ಅಧಿಕ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ, ಸೂಕ್ತ ರಕ್ಷಣೆ ನೀಡುವಂತೆ ಆಗ್ರಹಿಸಿದರು.

ಮೆಡಿಕಲ್ ಕಾಲೇಜು ಅವ್ಯವಸ್ಥೆಯಿಂದ ಕೂಡಿದ್ದು, ಸೂಕ್ತ ರಕ್ಷಣೆ ಇಲ್ಲವಾಗಿದೆ. ತಡರಾತ್ರಿ ಹೊರಗಿನಿಂದ ಬರುವ ಕೆಲ ಪುಂಡರು ವಿದ್ಯಾರ್ಥಿನಿಯರ ಹಾಸ್ಟೆಲ್ ಎದುರು ನಿಂತು ಅಸಭ್ಯವಾಗಿ ವರ್ತಿಸುತ್ತಿದ್ದಾರೆ ಎಂದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು. ಹಾಸ್ಟೆಲ್ ಎದುರು ಉತ್ತಮ ಗುಣಮಟ್ಟದ ಸಿಸಿಟಿವಿ ಅಳವಡಿಸಿಲ್ಲ, ವಿದ್ಯುತ್ ವ್ಯವಸ್ಥೆಯೂ ಸಮರ್ಪಕವಾಗಿಲ್ಲ ಅಲ್ಲದೇ ಕಾಲೇಜಿನಲ್ಲಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿಲ್ಲ ವೆಂದು ದೂರಿದ ಪ್ರತಿಭಟನಾನಿರತ ವಿದ್ಯಾರ್ಥಿಗಳು ಕಾಲೇಜು ಡೀನ್ ಸ್ಥಳಕ್ಕೆ ಬರಬೇಕೆಂದು ಒತ್ತಾಯಿಸಿ ಧರಣಿ ಕುಳಿತರು.

ಈ ಸಂದರ್ಭ ಸ್ಥಳಕ್ಕೆ ಆಗಮಿಸಿದ ಡೀನ್ ಕಾರ್ಯಪ್ಪ ಅವರನ್ನು ವಿದ್ಯಾರ್ಥಿಗಳು ತೀವ್ರ ತರಾಟೆಗೆ ತೆಗೆದುಕೊಂಡರು. ಈ ಸಂದರ್ಭ ಮಾತನಾಡಿದ ಕಾಲೇಜು ಡೀನ್ ಕಾರ್ಯಪ್ಪ ಅವರು, ಕಾಲೇಜು ಆವರಣದ ಪ್ರವೇಶ ದ್ವಾರಗಳಿಗೆ ಮೂರು ಭದ್ರತಾ ಸಿಬ್ಬಂದಿಗಳ ನೇಮಕ, ಸಿಸಿಟಿವಿ ಸುಧಾರಣೆ, ಹಾಸ್ಟೆಲ್‌ಗೆ ಭದ್ರತೆ ಕಲ್ಪಿಸುವ ಭರವಸೆ ನೀಡಿದರು.

ಈ ಸಂದರ್ಭ ಮಡಿಕೇರಿ ಗ್ರಾಮಾಂತರ ಠಾಣೆ ಪೊಲೀಸರು ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು.

# ಸಂವಹನ ಸಭೆ

ಮಡಿಕೇರಿ, ಆ.21– ಪ್ರತಿ ತಿಂಗಳ ಮೂರನೇ ಶನಿವಾರದಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 12 ಗಂಟೆವರೆಗೆ ಮಡಿಕೇರಿ, ಗೋಣಿಕೊಪ್ಪಲು, ವಿರಾಜಪೇಟೆ, ಕುಶಾಲನಗರ, ಸೋಮವಾರಪೇಟೆ ಉಪ ವಿಭಾಗ ವ್ಯಾಪ್ತಿಯ ವಿದ್ಯುತ್ ಗ್ರಾಹಕರೊಂದಿಗೆ ಸಂವಹನ (Consumer's interaction Meeting) ಸಭೆಯು ಉಪ ವಿಭಾಗಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಆಯಾಯ ಉಪವಿಭಾಗ ಕಚೇರಿ ಆವರಣದಲ್ಲಿ ನಡೆಯಲಿದೆ.

ವಿದ್ಯುತ್ ಗ್ರಾಹಕರು ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಸಮಸ್ಯೆ ಅಥವಾ ದೂರುಗಳು ಇದ್ದಲ್ಲಿ ಈ ಸಭೆಯಲ್ಲಿ ಭಾಗವಹಿಸುವಂತೆ ಮಡಿಕೇರಿ ವಿಭಾಗದ ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ಕೋರಿದ್ದಾರೆ.

# ವೀರ ಸೇನಾನಿ ಜನರಲ್ ತಿಮ್ಮಯ್ಯನವರ ಪ್ರತಿಮೆ ಸ್ಥಾಪನೆಗೆ ಕೇಂದ್ರದ ಸಹಭಾಗಿತ್ವ ಅಗತ್ಯ

ಮಡಿಕೇರಿ, ಆ.21– ವೀರ ಸೇನಾನಿಗಳಾದ ಫೀ.ಮಾ.ಕಾರ್ಯಪ್ಪ ಹಾಗೂ ಜನರಲ್ ತಿಮ್ಮಯ್ಯ ಅವರುಗಳು ಈ ದೇಶಕ್ಕಾಗಿ ರಕ್ಷಣಾ ಕ್ಷೇತ್ರದಲ್ಲಿ ಅಮೋಘ ಸೇವೆ ಸಲ್ಲಿಸಿರುವುದರಿಂದ ಇವರುಗಳ ಪ್ರತಿಮೆ ಸ್ಥಾಪನೆಯ ಸಂದರ್ಭ ಕೇಂದ್ರ ಸರ್ಕಾರದ ಸಹಭಾಗಿತ್ವ ಅಗತ್ಯವೆಂದು ಆಮ್ ಆದ್ಮಿ ಪಾರ್ಟಿಯ ರಾಜ್ಯ ಮುಖಂಡ ಬ್ರಿಜೇಶ್ ಕಾಳಪ್ಪ ಒತ್ತಾಯಿಸಿದ್ದಾರೆ.



ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಸ್ ಡಿಕ್ಕಿಯಾಗಿ ವೀರ ಸೇನಾನಿ ಜನರಲ್ ತಿಮ್ಮಯ್ಯ ಅವರ ಪ್ರತಿಮೆ ನೆಲಕ್ಕುರುಳಲು ಮಡಿಕೇರಿ ನಗರದ ಅವೈಜ್ಞಾನಿಕ ರಸ್ತೆ ಮತ್ತು ವೃತ್ತಗಳೇ ಕಾರಣವಾಗಿದೆ. ಈ ಘಟನೆ ನಡೆದಿರುವುದು ವಿಷಾದಕರ. ಅಪಘಾತದಿಂದ ಹಾನಿಗೊಳಗಾಗಿರುವ ಜನರಲ್ ತಿಮ್ಮಯ್ಯ ಅವರ ಪ್ರತಿಮೆಯನ್ನು ಗೌರವಯುತವಾಗಿ ಪುನರ್ ಪ್ರತಿಷ್ಠಾಪಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು. ಇದರಲ್ಲಿ ಕೇಂದ್ರ ಸರ್ಕಾರದ ಸಹಭಾಗಿತ್ವವೂ ಇರಬೇಕು ಎಂದು ಆಗ್ರಹಿಸಿದ್ದಾರೆ. ದೇಶದ ರಕ್ಷಣೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ವೀರ ಸೇನಾನಿಗಳ ಪ್ರತಿಮೆ ಪ್ರತಿಷ್ಠಾಪಿಸುವ ವಿಚಾರದಲ್ಲಿ ಕೇಂದ್ರ ಪ್ರಮುಖ ಪಾತ್ರ ವಹಿಸಬೇಕು. ಆ ಮೂಲಕ ಅದು ಯೋಧರಿಗೆ ಗೌರವ ಅರ್ಪಿಸಬೇಕು. ಸ್ಥಳೀಯ ಆಡಳಿತ ಪ್ರತಿಮೆ ಇರುವ ಪ್ರದೇಶಕ್ಕೆ ಗೌರವಯುತ ಸ್ಥಾನಮಾನ ನೀಡಿ ಸಂರಕ್ಷಿಸಬೇಕು ಎಂದು ತಿಳಿಸಿದ್ದಾರೆ.

# ಚಾ.ನಗರ ಜಿಲ್ಲೆಯಲ್ಲಿ ಕೆರೆ, ಸರ್ಕಾರಿ ಜಾಗ ಒತ್ತುವರಿ ತೆರವುಗೊಳಿಸಿ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್ ಸೂಚನೆ

ಚಾಮರಾಜನಗರ, ಆ.21– ಜಿಲ್ಲೆಯಲ್ಲಿ ಒತ್ತುವರಿಯಾಗಿರುವ ಕೆರೆ, ಸರ್ಕಾರಿ ಜಾಗಗಳನ್ನು ಗುರುತಿಸಿ ಅವುಗಳ ತೆರವಿಗೆ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್ ಸೂಚಿಸಿದರು.



ನಗರದ ಜಿಪಂ ಸಭಾಂಗಣದಲ್ಲಿ ನಡೆದ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಒತ್ತುವರಿ ಸ್ಥಳಗಳಿಗೆ ಭೇಟಿ ನೀಡಿ ಸಂಪೂರ್ಣ ಮಾಹಿತಿ ಪಡೆಯಬೇಕು. ಕೆರೆಗಳನ್ನು ಸರ್ವೇ ಮಾಡಿಸಿ, ಒತ್ತುವರಿ ತೆರವುಗೊಳಿಸಿ ಅಧಿಕಾರಿಗಳ ಸಮ್ಮುಖದಲ್ಲಿ ಸಂಬಂಧಪಟ್ಟ ಕೆರೆಗಳ ಒಡೆತನದ ಇಲಾಖೆಗಳಿಗೆ ಹಸ್ತಾಂತರಿಸುವ ಪ್ರಕ್ರಿಯೆ ನಡೆಯಬೇಕು. ಬಳಿಕ ಸಂಬಂಧಪಟ್ಟ ಇಲಾಖೆಗಳು ಕೆರೆಗಳ ಸಂರಕ್ಷಣೆ ಮಾಡಬೇಕು. ಮೂಲ ದಾಖಲಾತಿಗಳನ್ನು ಪರಿಶೀಲಿಸಿ ಸರ್ಕಾರಿ ಜಮೀನು, ಆಸ್ತಿಗಳ ಒತ್ತುವರಿ ತೆರವಿಗೂ ಕ್ರಮ ತೆಗೆದುಕೊಳ್ಳಬೇಕು ಎಂದರು.

ಸಾಮಾಜಿಕ ಭದ್ರತಾ ಯೋಜನೆಗಳಡಿ ನೀಡುವ ಪಿಂಚಣಿ ಮಂಜೂರಾತಿ ತ್ವರಿತವಾಗಿ ಮಾಡಬೇಕು. ಅರ್ಹರು ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವುದನ್ನು ಕಾಯಬೇಕಿಲ್ಲ. ವಯಸ್ಸಿನ ಅರ್ಹತೆಗೆ ಅನುಗುಣವಾಗಿ ಫಲಾನುಭವಿಗಳಿಗೆ ಪಿಂಚಣಿ ಸೌಲಭ್ಯ ತಲುಪಿಸಲು ಅಧಿಕಾರಿಗಳೇ ಮುತುವರ್ಜಿ ವಹಿಸಿ ಫಲಾನುಭವಿಗಳ ಮನೆ ಬಾಗಿಲಿಗೆ ಪಿಂಚಣಿ ಮಂಜೂರಾತಿ ತಲುಪಿಸಬೇಕು. ವಿಶೇಷಚೇತನರಿಗೂ ಪಿಂಚಣಿ ಸೌಲಭ್ಯ ಸಕಾಲಕ್ಕೆ ದೊರಕಬೇಕು ಎಂದರು.

ಕಾಡಂಚಿನ ಜನವಸತಿ ಪ್ರದೇಶಗಳಿಗೆ ಮೂಲ ಸೌಕರ್ಯ ತಲುಪಬೇಕಿದೆ. ರಸ್ತೆ, ಕುಡಿಯುವ ನೀರು, ಆರೋಗ್ಯ, ಶಾಲೆಯಂತಹ ಅಗತ್ಯ ಸೌಲಭ್ಯಗಳಿಗೆ ಕೊರತೆಯಾಗಬಾರದು. ಸಾರಿಗೆ ವ್ಯವಸ್ಥೆ ಇರಬೇಕು. ಅರಣ್ಯ ಪ್ರದೇಶದ ಜನರು, ಬುಡಕಟ್ಟು ಸಮುದಾಯಗಳಿಗೆ ವಿಶೇಷ ಗಮನ ಹರಿಸಬೇಕು ಎಂದರು.

ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಮಾತನಾಡಿ, ಬುಡಕಟ್ಟು ಜನಾಂಗದವರಲ್ಲಿ ರಕ್ತಹೀನತೆ ಹೋಗಲಾಡಿಸಲು ಸೆ.1ರಿಂದ ವಿಶೇಷ ಆರೋಗ್ಯ ತಪಾಸಣೆ ಹಮ್ಮಿಕೊಳ್ಳಲು ಯೋಜನೆ ಸಿದ್ಧಪಡಿಸಲಾಗುತ್ತಿದೆ. ಬುಡಕಟ್ಟು ಸಮುದಾಯದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಅಧಿಕಾರಿಗಳಿಗೆ ವಿಶೇಷ ಜವಾಬ್ದಾರಿ ನೀಡಲಾಗಿದೆ. ಎಸ್‌ಎಸ್‌ಎಲ್‌ಸಿ ಹಂತದಲ್ಲಿ ಶಾಲೆ ತೊರೆದಿರುವ ಹಾಗೂ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ವಿಶೇಷ ಶಿಬಿರ ಆಯೋಜಿಸಿ ಅವರ ಕಲಿಕಾ ಉತ್ತೇಜನಕ್ಕೆ ಕ್ರಮವಹಿಸಲಾಗುತ್ತಿದೆ ಎಂದರು.

ಉಸ್ತುವಾರಿ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್ ಮಾತನಾಡಿ, ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸೇರಿದಂತೆ ಇತರೆ ಇಲಾಖೆಗಳ ಹಾಸ್ಟೆಲ್‌ಗಳಲ್ಲಿ ಪ್ರವೇಶ ಪಡೆದಿರುವ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಗಮನ ಹರಿಸಬೇಕು. ಇಲಾಖೆಗಳ ವ್ಯಾಪ್ತಿಯ ವಸತಿ ಶಾಲೆಗಳ ಕಟ್ಟಡ ನಿರ್ಮಾಣಕ್ಕೆ ನಿವೇಶನ ಪಡೆದು ಮುಂದಿನ ಪ್ರಕ್ರಿಯೆ ಕೈಗೊಳ್ಳಬೇಕು ಎಂದರು.

ಜಿಲ್ಲೆಯ ಕೃಷಿ ಚಟುವಟಿಕೆ, ಬಿತ್ತನೆ, ಮಳೆ ಪ್ರಮಾಣದ ಬಗ್ಗೆ ಪರಿಶೀಲಿಸಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಿರುವ ಕ್ರಮಗಳ ಬಗ್ಗೆ ಯೋಜನೆ ಸಿದ್ಧಪಡಿಸಬೇಕು. ಕೃಷಿ, ತೋಟಗಾರಿಕೆ ಬೆಳೆ ಕುರಿತು ಮಾರ್ಗದರ್ಶನ ಸಲಹೆ ನೀಡಬೇಕು. ಅಂಗನವಾಡಿ, ಆಸ್ಪತ್ರೆ, ಶಾಲಾ ಕೊಠಡಿಗಳ ನಿರ್ಮಾಣ, ಗಂಗಾ ಕಲ್ಯಾಣ ಯೋಜನೆ ಸೇರಿದಂತೆ ವಿವಿಧ ಇಲಾಖೆಗಳ ಕಾರ್ಯಕ್ರಮ ಅನುಷ್ಠಾನವಾಗಬೇಕು. ಜಿಲ್ಲೆಯ ಅಭಿವೃದ್ಧಿ ಸಂಬಂಧ ಯಾವುದೇ ಪ್ರಸ್ತಾವನೆಗಳಿದ್ದರೂ ಕೂಡಲೇ ಸಲ್ಲಿಸಬೇಕೆಂದು ನಿರ್ದೇಶನ ನೀಡಿದರು.

ಜಿಪಂ ಸಿಇಓ ಎಸ್.ಪೂವಿತಾ, ಎಡಿಸಿ ಗೀತಾ ಹುಡೇದ, ಬಿಆರ್‌ಟಿ ನಿರ್ದೇಶಕರಾದ ದೀಪಾ ಜೆ. ಕಂಟ್ರಾಕ್ಟರ್, ಅರಣ್ಯಾಧಿಕಾರಿ ಸಂತೋಷ್ ಕುಮಾರ್, ಎಸಿ ಮಹೇಶ್, ಅಧಿಕಾರಿಗಳು ಸಭೆಯಲ್ಲಿದ್ದರು.

# ಆಶಾಕಿರಣ ಆಂದೋಲನ ಯಶಸ್ವಿಗೊಳಿಸಿ: ಡಿಸಿ ಸೂಚನೆ



ಚಾಮರಾಜನಗರ, ಆ.21– ವಿವಿಧ ಕಾರಣಗಳಿಂದಾಗುವ ಅಂಧತ್ವ ಪ್ರಮಾಣ ಇಳಿಸುವ ಉದ್ದೇಶದಿಂದ ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ಸಮಗ್ರ ನೇತ್ರ ತಪಾಸಣೆ ಮತ್ತು ಉಚಿತ ಶಸ್ತ್ರ ಚಿಕಿತ್ಸಾ ಶಿಬಿರ ಆಶಾಕಿರಣ ಆಂದೋಲನ ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಸಮಗ್ರ ನೇತ್ರ ತಪಾಸಣೆ ಮತ್ತು ಉಚಿತ ಶಸ್ತ್ರಚಿಕಿತ್ಸಾ ಶಿಬಿರ ಆಶಾಕಿರಣ ಆಂದೋಲನ ಕುರಿತ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂಧತ್ವ ಪ್ರಮಾಣ ತಗ್ಗಿಸುವ ಉದ್ದೇಶದಿಂದ ಸಮಗ್ರ ನೇತ್ರ ತಪಾಸಣೆ ಮತ್ತು ಶಸ್ತ್ರಚಿಕಿತ್ಸಾ ಶಿಬಿರಗಳನ್ನು ನಡೆಸಲು ಪ್ರಾಯೋಜಿತ ಯೋಜನೆಯಡಿ ಆಯ್ಕೆಯಾಗಿರುವ ರಾಜ್ಯದ ನಾಲ್ಕು ಜಿಲ್ಲೆಗಳ ಪೈಕಿ ಚಾಮರಾಜನಗರವು ಸಹ ಒಂದಾಗಿದೆ. ಕಣ್ಣಿನ ಆರೋಗ್ಯ ರಕ್ಷಣೆಗೆ ಒತ್ತು ನೀಡಲಿರುವ ಇಂತಹ ಸದಾವಕಾಶವನ್ನು ಜಿಲ್ಲೆ ಸಮರ್ಪಕವಾಗಿ ಬಳಸಿಕೊಳ್ಳಬೇಕಿದೆ. ಹೀಗಾಗಿ ಆಶಾಕಿರಣ ಆಂದೋಲನವನ್ನು ಸಮರ್ಪಕವಾಗಿ ಅನುಷ್ಠಾನ ಮಾಡಬೇಕೆಂದು ತಿಳಿಸಿದರು.

ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನೇತ್ರ ತಪಾಸಣೆ ಹಾಗೂ ಇದರ ಸಂಬಂಧಿ ಚಟುವಟಿಕೆಗಳಿಗೆ ಪ್ರತ್ಯೇಕ ಕಾರ್ಯಯೋಜನೆ ರೂಪಿಸಬೇಕು. ಕಣ್ಣಿನ ಪೊರೆಯಿಂದ ಗುರುತಿಸಲ್ಪಡುವವರಿಗೆ ಹತ್ತಿರದ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಸರ್ಕಾರೇತರ ಸ್ವಯಂ ಸಂಸ್ಥೆಗಳ ನೆರವು ಪಡೆದು ಶಸ್ತ್ರ ಚಿಕಿತ್ಸೆಗೆ ಶಿಫಾರಸ್ಸು ಮಾಡಬೇಕು. ಶಿಬಿರಗಳ ಆಯೋಜನೆಗೆ ಸ್ವಯಂ ಸೇವಾ ಸಂಸ್ಥೆಗಳ ಸಹಕಾರ ಪಡೆಯುವುದರೊಂದಿಗೆ ಇತರರ ಸೇವೆ ಪಡೆಯಬೇಕು ಎಂದರು.

ಸಮಗ್ರ ನೇತ್ರ ತಪಾಸಣೆ ಆಂದೋಲನಕ್ಕೆ ವಿವಿಧ ಇಲಾಖೆಗಳು ತೊಡಗಿಸಿಕೊಳ್ಳಬೇಕು. ಕಾಡಂಚಿನ ಗ್ರಾಮಗಳು, ಗುಡ್ಡಗಾಡು ಪ್ರದೇಶಗಳಲ್ಲಿಯೂ ತಪಾಸಣಾ ಕಾರ್ಯ ನಡೆಯುವುದರಿಂದ ಅರಣ್ಯ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಅಗತ್ಯ ಅನುಕೂಲ ಕಲ್ಪಿಸಬೇಕು. ಇದಕ್ಕೆ ಆಶಾ ಕಾರ್ಯಕರ್ತೆಯರ ಸಹಕಾರ ಪ್ರಮುಖವಾಗಿದೆ. ಆರೋಗ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಈ ವಿಶೇಷ ಆರೋಗ್ಯ ಕಾರ್ಯಕ್ರಮವನ್ನು ಎಲ್ಲಾ ರೀತಿಯ ಸಮನ್ವಯದೊಂದಿಗೆ ಫಲಪ್ರದಗೊಳಿಸಬೇಕೆಂದು ತಿಳಿಸಿದರು.

ಜಿಪಂ ಉಪ ಕಾರ್ಯದರ್ಶಿ ಸರಸ್ವತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ.ವಿಶ್ವೇಶ್ವರಯ್ಯ, ಜಿಲ್ಲಾ ಅಂಧತ್ವ ನಿಯಂತ್ರಣಾಧಿಕಾರಿ ಹಾಗೂ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ.ಪಿ.ಚಂದ್ರಶೇಖರ್, ಹಿರಿಯ ನೇತ್ರ ತಜ್ಞರಾದ ಡಾ.ಎಸ್.ಬಾಲಸುಬ್ರಹ್ಮಣ್ಯ, ಡಾ.ದೈವಿಕ್ ಸಿ.ಎಂ, ಆರ್.ಸಿ.ಹೆಚ್. ಅಧಿಕಾರಿ ಡಾ.ಮಂಜುನಾಥ್, ಜಿಲ್ಲಾ ಸರ್ವಲೆನ್ಸ್ ಅಧಿಕಾರಿ ಡಾ.ನಾಗರಾಜು, ತಾಲೂಕು ಆರೋಗ್ಯ ಅಧಿಕಾರಿಗಳಾದ ಡಾ.ಪ್ರಕಾಶ್, ಡಾ.ಗೋಪಾಲ್, ಡಾ. ಶ್ರೀನಿವಾಸ್, ಡಾ.ಜಿ.ಗಿರಿದಾಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಗೀತಾಲಕ್ಷ್ಮಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ಇತರೆ ಇಲಾಖೆ ಅಧಿಕಾರಿಗಳು ಸಭೆಯಲ್ಲಿದ್ದರು.

> ಜಿಲ್ಲೆಯ ಎಲ್ಲಾ ನಾಗರಿಕರಿಗೆ ಕಣ್ಣಿನ ತಪಾಸಣೆ ನಡೆಸಲಾಗುತ್ತದೆ. 2 ಹಂತಗಳಲ್ಲಿ ಕಣ್ಣಿನ ತಪಾಸಣೆ ಕಾರ್ಯ ನಡೆಯಲಿದ್ದು, ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ, ಕಣ್ಣಿನ ಇತರೆ ತೊಂದರೆಗಳಿಗೆ ಉಚಿತವಾಗಿ ಚಿಕಿತ್ಸೆ ನೀಡಿ ಕನ್ನಡಕ ನೀಡಲಾಗುತ್ತದೆ. ಮನೆ ಮನೆಗೆ ಭೇಟಿ ನೀಡಿ ಕಣ್ಣಿನ ತಪಾಸಣೆ, ನಿರ್ವಹಣೆ ಉತ್ತಮ ದೃಷ್ಟಿಯ ಪ್ರಾಮುಖ್ಯತೆ, ಕಣ್ಣುಗಳ ಸಂರಕ್ಷಣೆ ಕುರಿತು ಕಾರ್ಯ ಚಟುವಟಿಕೆಗಳನ್ನು ನಡೆಸಿ ಅರಿವು ಮೂಡಿಸಲಾಗುತ್ತದೆ.
>
> **– ಸಿ.ಟಿ.ಶಿಲ್ಪಾನಾಗ್, ಜಿಲ್ಲಾಧಿಕಾರಿ.**

# ನಂದಿನಿ ಸಿಹಿ ಉತ್ಸವಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ

ಚಾಮರಾಜನಗರ, ಆ.21– ರಾಜ್ಯ ಹಾಲು ಒಕ್ಕೂಟದಿಂದ ನಂದಿನಿ ಸಿಹಿ ಉತ್ಸವಕ್ಕೆ ಚಾಲನೆ ನೀಡಲಾಗಿದ್ದು, ಅದರಂತೆ ಚಾಮುಲ್‌ನಿಂದಲೂ ಸಿಹಿ ಉತ್ಸವಕ್ಕೆ ಚಾಲನೆ ನೀಡಲಾಗಿದ್ದು ಶೇ.20 ರಿಯಾಯಿತಿ ದರದಲ್ಲಿ ವಿವಿಧ ಬಗೆಯ ನಂದಿನಿ ಸಿಹಿ ಉತ್ಪನ್ನಗಳು ಸಾರ್ವಜನಿಕರಿಗೆ ದೊರೆಯಲಿವೆ.

ನಗರದ ಚಿಕ್ಕ ಅಂಗಡಿ ಬೀದಿಯಲ್ಲಿರುವ ನಂದಿನಿ ವಾಕಿಂಗ್ ಕೋಲ್ಡ್ ಸ್ಟೋರೇಜ್‌ನಲ್ಲಿ ಸಿಹಿ ಉತ್ಸವಕ್ಕೆ ಚಾಲನೆ ನೀಡಿ ಶಾಸಕ ಸಿ. ಪುಟ್ಟರಂಗಶೆಟ್ಟಿ ಮಾತನಾಡಿ, 50ಕ್ಕೂ ಹೆಚ್ಚು ನಂದಿನಿ ಉತ್ಪನ್ನಗಳಿದ್ದು, ಇವುಗಳಿಗೆ ಶೇ.20 ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದರು.



ಕರ್ನಾಟಕ ಹಾಲು ಮಂಡಳಿಯಿಂದ ರಾಜ್ಯದ ಎಲ್ಲಾ ಹಾಲು ಒಕ್ಕೂಟಗಳಲ್ಲೂ ಕಳೆದ 16 ವರ್ಷಗಳಿಂದ ನಂದಿನಿ ಸಿಹಿ ಉತ್ಸವವನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಮೈಸೂರ್ ಪಾಕ್, ಪೇಡಾ, ಬೇಸನ್ ಲಡ್ಡು, ಸಿರಿಧಾನ್ಯ ಲಾಡು ಮತ್ತು ಇತರೆ ಸಿಹಿ ಉತ್ಪನ್ನಗಳ ಜೊತೆಗೆ ನಮ್ಮ ಚಾಮುಲ್ ಉತ್ಪಾದಿಸುವ ಉಲ್ಲಾಸ್ ಗುಲ್ಲಾ ಸಿಹಿ ಸೇರಿದ್ದು, ಒಕ್ಕೂಟದ ಎಲ್ಲಾ ಶಾಪ್, ಕ್ಷೀರ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದರು.

ಚಾಮುಲ್ ನಿರ್ದೇಶಕ ಹೆಚ್.ಎಸ್.ಬಸವರಾಜು ಮಾತನಾಡಿ, ನಂದಿನಿ ಗ್ರಾಹಕರನ್ನು ಸಂತೃಪ್ತಿಪಡಿಸುವುದು ಮುಖ್ಯ ಉದ್ದೇಶವಾಗಿದ್ದು, ಇದರಿಂದ ಬರುವ ಲಾಭವನ್ನು ಹಾಲು ಉತ್ಪಾದಕರಿಗೆ ನೀಡಲಾಗುತ್ತದೆ ಎಂದರು.

ಚಾಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ರಾಜ್‌ಕುಮಾರ್ ಮಾತನಾಡಿ, ನಂದಿನಿ ಹಾಲಿನ ಬಗ್ಗೆ ವಿವರಣೆ ನೀಡುತ್ತಾ ಒಕ್ಕೂಟಕ್ಕೆ ಲಾಭ ಮಾಡುವುದಷ್ಟೇ ಅಲ್ಲದೇ ರೈತರ ಹಿತರಕ್ಷಣೆ ಜೊತೆಗೆ ಗ್ರಾಹಕರಿಗೆ ತಾಜಾ ಹಾಗೂ ಪರಿಶುದ್ಧ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸರಬರಾಜು ಮಾಡುವುದು ಒಕ್ಕೂಟದ ಮುಖ್ಯ ಉದ್ದೇಶವಾಗಿದೆ ಎಂದರು.

ಮನೆಗಳಲ್ಲಿ ವಿವಿಧ ಮಾದರಿಯ ಹಾಲುಗಳಾದ ನಂದಿನಿ ಶುಭಂ, ನಂದಿನಿ ಸ್ಪೆಷಲ್ ಹಾಲು, ನಂದಿನಿ ಶುಭಂ ಗೋಲ್ಡ್ ಹಾಗೂ ನಂದಿನಿ ಹಾಲನ್ನು ತಪ್ಪದೇ ಬಳಸುವಂತೆ ತಿಳಿಸಿದ ಅವರು, ಚಾಮುಲ್ ಉತ್ಪಾದಿಸುವ ಉಲ್ಲಾಸ್ ಗುಲ್ಲಾ ಜೊತೆಗೆ ಎಲ್ಲಾ ನಂದಿನಿ ಸಿಹಿ ಉತ್ಪನ್ನಗಳಿಗೆ ಸೆ.20ರವರೆಗೆ ಶೇ.20 ರಿಯಾಯಿತಿ ಇದ್ದು, ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಿ ಎಂದರು.

ಚಾಮುಲ್ ನಿರ್ದೇಶಕರಾದ ಶೀಲಾ ಪುಟ್ಟರಂಗಶೆಟ್ಟಿ, ಸದಾಶಿವಮೂರ್ತಿ, ಚಾಮುಲ್ ಮಾರಾಟ ವ್ಯವಸ್ಥಾಪಕ ಎಂ.ಪ್ರಸಾದ್, ಆಡಳಿತ ವ್ಯವಸ್ಥಾಪಕ ಜಿ.ಶ್ರೀಕಾಂತ್, ಡೇರಿ ವ್ಯವಸ್ಥಾಪಕ ಗೋವಿಂದರಾಜ್, ಮಾರಾಟ ಉಪ ವ್ಯವಸ್ಥಾಪಕ ಎ.ಶಿವಕುಮಾರ್, ಸಹಾಯಕ ವ್ಯವಸ್ಥಾಪಕರಾದ ಸೈಯದ್ ಮನ್ಸೂರ್ ಉಲ್ಲಾ, ನೂತನ್, ರವಿ, ಮುಖಂಡರಾದ ಪಿ.ರಾಜಣ್ಣ ಎಪಿಎಂಸಿ ಮಾಜಿ ಅಧ್ಯಕ್ಷ ಎಂ. ಶಿವಸ್ವಾಮಿ, ಪಿ.ಶಾಂತು, ಕೋಲ್ಡ್ ಸ್ಟೋರೇಜ್ ಮಾಲೀಕರಾದ ಎನ್.ಆರ್.ಪುರುಷೋತ್ತಮ್, ಮಹೇಶ್, ವೀರಭದ್ರಸ್ವಾಮಿ, ಕೋಲ್ಡ್ ಸ್ಟೋರೇಜ್‌ನ ಸಿಬ್ಬಂದಿ ಇತರರಿದ್ದರು.

# ಡಿ.ದೇವರಾಜ ಅರಸು ಕೊಡುಗೆ ಅಪಾರ: ಎಂ.ರಾಮಚಂದ್ರ

ಚಾಮರಾಜನಗರ, ಆ.21– ರಾಜ್ಯಕ್ಕೆ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಕೊಡುಗೆ ಅಪಾರ ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಬಣ್ಣಿಸಿದರು.

ನಗರದ ಸೋಮಣ್ಣ ಲೇಔಟ್ ನಲ್ಲಿರುವ ತಮ್ಮ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಿ.ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಅರಸು ಅವರು ತಮ್ಮ ಅಧಿಕಾರವಧಿಯಲ್ಲಿ ಎಲ್.ಜಿ.ಹಾವನೂರು ಆಯೋಗ ರಚನೆ ಮಾಡಿ



ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಿಕೊಟ್ಟರು. ಹಿಂದುಳಿದ ವರ್ಗಗಳ ಆಯೋಗ ರಚಿಸಿದರು. ಬಡವರು, ಹಿಂದುಳಿದ ವರ್ಗಗಳ ಪರ ಅನೇಕ ಯೋಜನೆಗಳನ್ನು ಜಾರಿಗೆ ತಂದು ಅಭಿವೃದ್ಧಿಗೆ ಒತ್ತು ನೀಡುವ ಮೂಲಕ ಹಿಂದುಳಿದ ವರ್ಗಗಳ ಹರಿಕಾರರಾಗಿದ್ದಾರೆ. ಸಾಮಾಜಿಕ ನ್ಯಾಯ ಪರವಾಗಿದ್ದ ಅವರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದರು.

ದೇವರಾಜ ಅರಸು ಅವರು ಜಾರಿಗೆ ತಂದ ಭೂ ಸುಧಾರಣೆ ಕಾಯ್ದೆ ಪರಿಣಾಮ ಹೊಲ ಉಳುತ್ತಿದ್ದ ರೈತರು, ಕೂಲಿ ಮಾಡುವವರು ಭೂ ಮಾಲೀಕರಾದರು. ಹಿಂದುಳಿದ ವರ್ಗದವರ ಅಭಿವೃದ್ಧಿಗೆ ಅವರು ಶ್ರಮಿಸಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ನಗರಸಭಾ ಸದಸ್ಯ ರಾಮಸಮುದ್ರ ಸುರೇಶ್, ಶಿವಸ್ವಾಮಿ, ರಾಜು, ವೇಣುಗೋಪಾಲ್, ಶಿವು, ಲಿಂಗರಾಜು, ಮಹದೇವನಾಯಕ, ರಾಜು ಇತರರಿದ್ದರು.



ಗುಂಡ್ಲುಪೇಟೆಯ ಶ್ರೀರಾಮೇಶ್ವರ ದೇವಾಲಯದಲ್ಲಿ ನಾಗರಪಂಚಮಿ ಪ್ರಯುಕ್ತ ಪ್ರಧಾನ ಅರ್ಚಕ ಶಂಕರ್ ನಾರಾಯಣ್ ಜೋಯಿಸ್ ಅವರ ನೇತೃತ್ವದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ನೂರಾರು ಭಕ್ತರು ದೇವಾಲಯಕ್ಕೆ ಆಗಮಿಸಿ, ದರ್ಶನ ಪಡೆದು ಪುನೀತರಾದರು.

ಮೈಸೂರು ಮಿತ್ರ



## ಪ್ರವಾಹದಿಂದ ತತ್ತರಿಸಿದ ಹಿಮಾಚಲ ಪ್ರದೇಶಕ್ಕೆ 15 ಕೋಟಿ ಬಿಡುಗಡೆಗೆ ಸಿಎಂ ಸಿದ್ದರಾಮಯ್ಯ ಆದೇಶ

**ಬೆಂಗಳೂರು:** ಪ್ರವಾಹ ಹಾಗೂ ಭೂ ಕುಸಿತದಿಂದ ತತ್ತರಿಸಿರುವ ಹಿಮಾಚಲ ಪ್ರದೇಶಕ್ಕೆ ಕರ್ನಾಟಕ ಆರ್ಥಿಕ ನೆರವು ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆದೇಶದಂತೆ 15 ಕೋಟಿ ರೂಪಾಯಿಯನ್ನು ಹಣಕಾಸು ಇಲಾಖೆ ಹಣ ಬಿಡುಗಡೆ ಮಾಡಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಈ ಕುರಿತು ಟ್ವೀಟ್ ಮಾಡಿರುವ ಮುಖ್ಯಮಂತ್ರಿ, ಸಂಕಷ್ಟದ ಸಮಯದಲ್ಲಿ ನಮ್ಮ ಸಹೋದರ, ಸಹೋದರಿಯರೊಂದಿಗೆ ನಿಲ್ಲುವುದು ಮುಖ್ಯವಾಗಿದೆ. ಕರ್ನಾಟಕದ ಜನರು ಹಿಮಾಚಲ ಪ್ರದೇಶದ ಜನರ ಯೋಗಕ್ಷೇಮಕ್ಕಾಗಿ ಪ್ರಾರ್ಥಿಸುತ್ತಾರೆ ಎಂದು ಹೇಳಿದ್ದಾರೆ. ಛತ್ತೀಸ್ ಗಢ ಸರ್ಕಾರ ಕೂಡಾ ಹಿಮಾಚಲ ಪ್ರದೇಶಕ್ಕೆ ನೆರವು ನೀಡಿದ್ದು, ವಿಪತ್ತು ಸಂತ್ರಸ್ತರ ಪರಿಹಾರ ಮತ್ತು ಪುನರ್ವಸತಿಗಾಗಿ ಛತ್ತೀಸ್ ಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು 11 ಕೋಟಿ ರೂಪಾಯಿ ಆರ್ಥಿಕ ನೆರವು ನೀಡಿದ್ದಾರೆ. ಅದೇ ರೀತಿ ರಾಜಸ್ಥಾನ ಸರ್ಕಾರ ಕೂಡಾ 15 ಕೋಟಿ ರೂ. ಆರ್ಥಿಕ ನೆರವನ್ನು ಹಿಮಾಚಲ ಪ್ರದೇಶಕ್ಕೆ ನೀಡಿದೆ.



ಮೈಸೂರು ತಾಲೂಕು ಇಲವಾಲ ಹೋಬಳಿ ಕರಕನಹಳ್ಳಿಯಲ್ಲಿ ನಿರ್ಮಿಸಿರುವ ಪಾರ್ವತಮ್ಮ ರಾಮೇಗೌಡ ಕನ್ವೆನ್ಷನ್ ಹಾಲ್ ಅನ್ನು ಕೃಷಿ ಸಚಿವ ಚಲುವರಾಯಸ್ವಾಮಿ ಭಾನುವಾರ ಉದ್ಘಾಟಿಸಿದರು. ಈ ವೇಳೆ ಶಾಸಕರಾದ ಜಿ.ಟಿ. ದೇವೇಗೌಡ, ಕೆ. ಹರೀಶ್‌ಗೌಡ, ತನ್ವೀರ್‌ಸೇಠ್, ರಮೇಶ್‌ಬಾಬು ಬಂಡೀಸಿದ್ದೇಗೌಡ, ಅನಿಲ್ ಚಿಕ್ಕಮಾದು, ರವಿಶಂಕರ್, ಜಿ.ಡಿ. ಹರೀಶ್‌ಗೌಡ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ದಿವ್ಯ ಹಾಗೂ ರವಿ ಆರ್ (ಡೆಲ್ಲಿ) ಇದರ ಮಾಲೀಕರಾಗಿದ್ದಾರೆ.



ಮಡಿಕೇರಿ ಶಾಸಕ ಡಾ. ಮಂಥರ್‌ಗೌಡ ಅವರನ್ನು ಉದ್ಯಮಿ ವಿವೇಕ್, ವಕೀಲರೂ ಆದ ಲಾ ಗೈಡ್ ಕಾನೂನು ಪತ್ರಿಕೆಯ ಗೌರವ ಸಂಪಾದಕ ಹೆಚ್.ಎನ್. ವೆಂಕಟೇಶ್, ಕೊಡಗು ಗೌಡ ಸಮಾಜದ ಅಧ್ಯಕ್ಷ ಟಿ.ಇ. ಮನೋಹರ್, ಅರಣ್ಯ ಇಲಾಖೆ ನಿವೃತ್ತ ಅಧಿಕಾರಿ ಕೆ.ಡಿ. ಬೆಳ್ಳಿಯಪ್ಪ ಆತ್ಮೀಯವಾಗಿ ಅಭಿನಂದಿಸಿದರು.



ಮೈಸೂರು ಮತ್ತು ಚಾಮರಾಜನಗರ ನ್ಯಾಯಾಂಗ ನೌಕರರ ಸಂಘದ ಅಧ್ಯಕ್ಷರಾಗಿ ಶೇಷಾದ್ರಿ ಅವರು ಅವಿರೋಧವಾಗಿ ಆಯ್ಕೆಯಾದರು. ಅವರನ್ನು ನಿರ್ದೇಶಕರುಗಳಾದ ತುಳಸಿ, ಉಮಾದೇವಿ, ಪುರುಷೋತ್ತಮ್ ಹಾಗೂ ಲಾ ಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ವತಿಯಿಂದ ಅಭಿನಂದಿಸಲಾಯಿತು.

## ಬುಡಕಟ್ಟು ಸಮುದಾಯಗಳ ಅಂಗಳಕ್ಕೂ ಧರ್ಮ ಪ್ರವೇಶ



ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿರುವ ವಿವಿಧ ಬುಡಕಟ್ಟು ಸಮುದಾಯಗಳ ಪ್ರತಿನಿಧಿಗಳು.

ಮೈಸೂರು,ಆ.21(ಎಂಟಿವೈ)– ಮೂಲ ನಿವಾಸಿಗಳಾದ ಬುಡಕಟ್ಟು ಸಮುದಾಯಗಳ ಅಂಗಳಕ್ಕೂ ಧರ್ಮ ಪ್ರವೇಶಿಸಿರುವುದು ಆತಂಕ ಸೃಷ್ಟಿಸುತ್ತಿದೆ ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವಿಶೇಷ ಅಧಿಕಾರಿ ಡಾ.ವೆಂಕಟಗಿರಿ ದಳವಾಯಿ ವಿಷಾದ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ದಟ್ಟಗಳ್ಳಿಯಲ್ಲಿರುವ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಸೋಮವಾರ ಆಯೋಜಿಸಿದ್ದ 'ಭಾರತದಲ್ಲಿ ಬುಡಕಟ್ಟು ಪರಿವರ್ತನೆ: ಸಮಸ್ಯೆಗಳು ಮತ್ತು ಸವಾಲುಗಳು' ಕುರಿತಾದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಧರ್ಮ ವಿಚಾರ ಬುಡಕಟ್ಟು ಸಮುದಾಯದಲ್ಲಿ ತಲ್ಲಣವನ್ನುಂಟು ಮಾಡುತ್ತಿದೆ. ಈ ಹಿಂದೆ ಆದಿವಾಸಿ ಸಮುದಾಯಕ್ಕೆ ಗಾಳಿ, ನೀರು, ಬೆಳಕು ಧರ್ಮವಾಗಿತ್ತು. ಆದರೆ ಇದೀಗ ಬುಡಕಟ್ಟು ಸಮುದಾಯದ ಅಂಗಳಕ್ಕೂ ಹಿಂದು, ಕ್ರೈಸ್ತ, ಮುಸ್ಲಿಂ ಧರ್ಮಗಳು ಪ್ರವೇಶಿಸಿವೆ. ಈ ಮೂಲಕ ಬುಡಕಟ್ಟು ಸಮುದಾಯದ ಒಗ್ಗಟ್ಟನ್ನು ವಿಭಜಿಸುವ ಹುನ್ನಾರ ನಡೆಯುತ್ತಿದೆ. ಹಿಂದು ಧರ್ಮದ ಬುಡಕಟ್ಟು ಸಮುದಾಯಗಳಿಗೆ ಹೆಚ್ಚಿನ ಸೌಲಭ್ಯ ದೊರೆತರೆ, ಕ್ರೈಸ್ತ ಹಾಗೂ ಮುಸ್ಲಿಂ ಧರ್ಮದೊಂದಿಗೆ ಗುರುತಿಸಿಕೊಂಡಿರುವ ಬುಡಕಟ್ಟು ಜನರು ಸೌಲಭ್ಯದಿಂದ ವಂಚಿತರಾಗುವಂತಾಗಿದೆ. ಬುಡಕಟ್ಟು ಸಮುದಾಯದಲ್ಲಿ ಇಂತಹ ತಾರತಮ್ಯ ಮೂಡುವಂತೆ ಯಾರು ಮಾಡಿದ್ದು, ಇದರ ಹಿಂದಿನ ಉದ್ದೇಶವೇನು ಎಂದು ಅರಿತುಕೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಮೂಲ ಅರಣ್ಯ ವಾಸಿಗಳಿಗೆ ಆಧುನಿಕತೆಯೊಂದಿಗೆ ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ. ಆದಿವಾಸಿಗಳ ಈ ಅಸಹಾಯಕತೆ ನಿವಾರಿಸಲು ಸರ್ಕಾರ ನೆರವಿಗೆ ಧಾವಿಸುತ್ತಿಲ್ಲ. ಬುಡಕಟ್ಟು ಸಮುದಾಯಗಳು ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು. ಈ ಮೂಲಕ ಬುಡಕಟ್ಟು ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಬೇಕು. ಆಗ ಆದಿವಾಸಿಗಳ ಅಸ್ತಿತ್ವ ಗುರುತು ಉಳಿಸಿಕೊಂಡು ಆಧುನಿಕ ಸಮಾಜದೊಂದಿಗೆ ಅನುಸಂಧಾನ ಮಾಡಲು ಸಾಧ್ಯವಾಗುತ್ತದೆ. ಆದಿವಾಸಿಗಳನ್ನು ನೋಡುವ ಮತ್ತು ಅಧ್ಯಯನ ದೃಷ್ಟಿಕೋನವೇ ಪರಿವರ್ತನೆಯಾಗಬೇಕು ಎಂದರು.

ಬುಡಕಟ್ಟು ಜನರು ಅಧಿಕ ಸಂತಾನದ ಪ್ರಾಣಿಗಳನ್ನು ಮಾತ್ರ ಬೇಟೆಯಾಡುತ್ತಾರೆ. ಜಿಂಕೆ, ಹಂದಿ ಬೇಟೆಯಾಡುವುದು ಪುರಾಣದಲ್ಲೂ ಉಲ್ಲೇಖಿಸಲಾಗಿದೆ. ಈ ರೀತಿ ಆಹಾರ ಪದ್ಧತಿಯನ್ನು ಅವರು ಮೈಗೂಡಿಸಿಕೊಂಡಿದ್ದಾರೆ. ಇದು ಅವರಲ್ಲಿರುವ ಅರಣ್ಯ ಪ್ರೀತಿ. ಆದರೆ, ಅವರ ಈ ಪ್ರೀತಿಯನ್ನೇ ಪ್ರಭುತ್ವ ಅನುಮಾನಿಸುತ್ತಿದೆ. ಕಾಡಿನಲ್ಲಿ ದೊರೆಯುವ ಆಹಾರ, ಸಸ್ಯಗಳನ್ನು ಇವರು ಮುಟ್ಟದಂತೆ ಕಡಿವಾಣ ಹಾಕಲಾಗಿದೆ. ಇಂತಹ ಕಟ್ಟುನಿಟ್ಟಿನ ಕ್ರಮಗಳಿಂದ ಆದಿವಾಸಿಗಳು ಎಲ್ಲಿಗೆ ಹೋಗಬೇಕು? ರೆಸಾರ್ಟ್, ಜಲಾಶಯಗಳು ಸೇರಿದಂತೆ ಇನ್ನಿತರ ಯೋಜನೆಗಳು ಆದಿವಾಸಿ ಸಮುದಾಯದ ಕೇಂದ್ರವಾಗಿಲ್ಲ. ಅರಣ್ಯದಲ್ಲಿ ಕಾಡಿನ ಮಕ್ಕಳನ್ನೇ ನಿರ್ಲಕ್ಷಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಸಂಸ್ಥೆಯ ನಿರ್ದೇಶಕ ಡಾ.ಎಲ್.ಶ್ರೀನಿವಾಸ್ ಮಾತನಾಡಿ, ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಿಂದ 26 ಸಮುದಾಯಗಳ ಕುಲಶಾಸ್ತ್ರ ಅಧ್ಯಯನವನ್ನು ಪೂರ್ಣಗೊಳಿಸಲಾಗಿದೆ. 18 ಸರ್ಕಾರಿ ಕೆಲಸ– ಕಾರ್ಯಗಳ ಮೌಲ್ಯಮಾಪನ ಮಾಡಿ ವರದಿ ನೀಡಲಾಗಿದೆ. ನಮ್ಮ ಸಂಸ್ಥೆಯಿಂದ ಆದಿವಾಸಿಗಳ ಸ್ಥಿತಿಗತಿಗಳ ಅಧ್ಯಯನ ಮಾಡುತ್ತಿದ್ದೇವೆ. ಬುಡಕಟ್ಟು ಭಾಷಾ ನಿಘಂಟು ಸಿದ್ಧಪಡಿಸಲಾಗಿದೆ. ಆದಿವಾಸಿಗಳ ಭಾಷೆಯನ್ನು ಉಳಿಸಲು ಸದ್ಯಕ್ಕೆ ಜೇನು ಕುರುಬ, ಕೊರವ ಸಮುದಾಯದ ಭಾಷಾ ಕಲಿಕಾ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಆಶ್ರಮ ಶಾಲೆಯ ಬೋಧಕರಿಗೆ ತರಬೇತಿ ನೀಡಲಾಗುತ್ತಿದೆ ಎಂದು ಮಾಹಿತಿ ತಿಳಿಸಿದರು. ಪುರುಷೋತ್ತಮ ಕಾಳ್ಯ ಇಲಾಖೆಯ ನಿರ್ದೇಶಕ ಬಿ.ಕಲ್ಲೇಶ್, ಪ್ರಾಧ್ಯಾಪಕ ಪ್ರೊ.ಎಂ. ಜಡೇಗೌಡ, ಸಂಸ್ಥೆಯ ಉಪನಿರ್ದೇಶಕಿ ಪಿ.ಎಸ್.ಪ್ರಭಾ ಅರಸ್, ಸಂಶೋಧನಾ ಅಧಿಕಾರಿ ಸಿ.ಶಿವಕುಮಾರ್ ಇದ್ದರು.

### ಸುನಾಮಿಯಿಂದ ಪಾರಾದ ಜರಾವಾ ಬುಡಕಟ್ಟು

ಭಾರತ, ಇಂಡೋನೇಷ್ಯಾ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಅಪಾರ ಪ್ರಮಾಣದ ಪ್ರಾಣಹಾನಿಯುಂಟು ಮಾಡಿದ್ದ ಸುನಾಮಿಯಿಂದ ಅಂಡಮಾನ್ ದ್ವೀಪದಲ್ಲಿರುವ ಜರಾವಾ ಬುಡಕಟ್ಟು ಜನರು ರೋಚಕವಾಗಿ ಪಾರಾಗಿ ಎಲ್ಲರ ಗಮನ ಸೆಳೆದಿದ್ದಾರೆ. ಈ ವಿಚಾರವನ್ನು ವಿಚಾರ ಸಂಕಿರಣದಲ್ಲಿ ಡಾ.ವೆಂಕಟಗಿರಿ ದಳವಾಯಿ ವಿವರಿಸುವ ಮೂಲಕ ಬುಡಕಟ್ಟು ಸಮುದಾಯ ಪ್ರಕೃತಿಯೊಂದಿಗೆ ಬೆರೆತಿರುವ ಹಾಗೂ ಅದರೊಂದಿಗೆ ಹೊಂದಿರುವ ಅವಿನಾಭಾವ ಸಂಬಂಧವನ್ನು ಅನಾವರಣಗೊಳಿಸಿದರು. ಸುನಾಮಿ ಅಪ್ಪಳಿಸುವ ಕುರಿತು ಒಂದು ವಾರ ಮುನ್ನವೇ ಪ್ರಕೃತಿ ಮುನ್ಸೂಚನೆ ಕೊಟ್ಟಿತ್ತು. ಸಮುದ್ರದ ಆಳದ ಅಪರೂಪದ ಸಾವಿರಾರು ಮೀನುಗಳು ದಂಡೆಗೆ ಬಂದಿದ್ದವು. ಗಾಳಿ ಅಬ್ಬರಕ್ಕೆ ತೆಂಗಿನಮರ ನೆಲಕ್ಕೆ ತಾಗುತ್ತಿತ್ತು. ಸಾಕುಪ್ರಾಣಿಗಳು ವಿಚಿತ್ರವಾಗಿ ವರ್ತಿಸುತ್ತಿದ್ದವು. ನಾಯಿಗಳು ಬೊಗಳುತ್ತಿದ್ದವು. ಇದನ್ನು ಗಮನಿಸಿದ ಆದಿವಾಸಿಗಳು ಅಪಾಯದ ಅರಿವಿನಿಂದಾಗಿ ತಮ್ಮ ಸಾಕುಪ್ರಾಣಿಗಳು, ಸಾಮಗ್ರಿಗಳೊಂದಿಗೆ ಬೆಟ್ಟದ ತುದಿಗೆ ತೆರಳಿ ರಕ್ಷಣೆ ಪಡೆದಿದ್ದರು. ಆ ನಂತರ ಅಪ್ಪಳಿಸಿದ ಸುನಾಮಿಯಿಂದ ಪ್ರಾಣ ರಕ್ಷಣೆ ಮಾಡಿಕೊಂಡಿದ್ದಲ್ಲದೆ, ಬೆಟ್ಟದ ತುದಿಯಲ್ಲಿ ನಿಂತುಕೊಂಡು ಸುನಾಮಿಯ ಅಬ್ಬರ, ಅರ್ಭಟವನ್ನು ವೀಕ್ಷಿಸಿದ್ದರು ಎಂದು ವಿವರಿಸಿದರು.

## ಆ.29ರಂದು ಬಾಲಕ, ಬಾಲಕಿಯರಿಗೆ ರಸ್ತೆ ಓಟದ ಸ್ಪರ್ಧೆ



ಮೈಸೂರು,ಆ.21(ಪಿಎಂ)– ಅಲುಮ್ನಿ ಅಸೋಸಿಯೇಷನ್ ಆಫ್ ಸ್ಪೋರ್ಟ್ಸ್ ಪರ್ಸನ್ಸ್ ರೆಪ್ರೆಸೆಂಟೆಡ್ ಯೂನಿವರ್ಸಿಟಿ ಆಫ್ ಮೈಸೂರ್ ವತಿಯಿಂದ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಪ್ರಯುಕ್ತ ಹಾಗೂ ರಾಷ್ಟ್ರೀಯ ಖೋಖೋ ಆಟಗಾರ ಎಂ.ವಿಜಯ ಕುಮಾರ್ ಸ್ಮರಣಾರ್ಥ ಆ.29ರಂದು 12 ರಿಂದ 16 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ರಸ್ತೆ ಓಟದ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಡಾ.ಸಿ.ಕೃಷ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 7ಕ್ಕೆ ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಬಳಿಯ ಲಯನ್ಸ್ ಕ್ಲಬ್ ಆಫ್ ಮೈಸೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯ ಕ್ರೀಡಾ ಸಮುಚ್ಚಯದ ಮುಂಭಾಗದಲ್ಲಿ ಓಟಕ್ಕೆ ಚಾಲನೆ ದೊರೆಯಲಿದೆ. ನಮ್ಮ ಅಸೋಸಿಯೇಷನ್‌ನಲ್ಲಿ ಖಜಾಂಚಿಯಾಗಿ ಸೇವೆ ಸಲ್ಲಿಸಿ 2020ರಲ್ಲಿ ಅಕಾಲಿಕ ಮರಣಕ್ಕೆ ತುತ್ತಾದ ಎಂ.ವಿಜಯ ಕುಮಾರ್ ಅವರ ಸ್ಮರಣಾರ್ಥ ಈ ಓಟದ ಸ್ಪರ್ಧೆ ಆಯೋಜಿಸಲಾಗಿದೆ ಎಂದರು.

ಸ್ಪರ್ಧೆಯಲ್ಲಿ ಭಾಗವಹಿಸಲು ಯಾವುದೇ ಪ್ರವೇಶ ಶುಲ್ಕವಿಲ್ಲ. ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಬಾಲಕರಿಗೆ 3 ಕಿ.ಮೀ. ಹಾಗೂ ಬಾಲಕಿಯರಿಗೆ 2 ಕಿ.ಮೀ. ಓಟ ನಿಗದಿ ಮಾಡಲಾಗಿದೆ. ಎರಡೂ ವಿಭಾಗಗಳಲ್ಲಿ ಕ್ರಮವಾಗಿ 6 ಸ್ಥಾನಗಳಿಗೆ ನಗದು ಬಹುಮಾನ ನೀಡಲಾಗುವುದು. 6 ಸಾವಿರ, 5 ಸಾವಿರ, 4 ಸಾವಿರ, 3 ಸಾವಿರ, 2 ಸಾವಿರ, 1 ಸಾವಿರ ರೂ.ಗಳ ನಗದು ಬಹುಮಾನಗಳನ್ನು ಕ್ರಮವಾಗಿ ನೀಡಲಾಗುವುದು ಎಂದು ತಿಳಿಸಿದರು.

ಸ್ಪರ್ಧೆ ಮಾಡುವ ಆಸಕ್ತರು ಮೈಸೂರಿನ ಕೆಜಿ ಕೊಪ್ಪಲಿನ ಕಾಂತರಾಜ ಅರಸು ರಸ್ತೆಯ ಪರ್ಫಾರ್ಮ್ ಸ್ಪೋರ್ಟ್ಸ್ ವೇರ್‌ನಲ್ಲಿ ಆ.23ರಿಂದ 26ರವರೆಗೆ ಬೆಳಗ್ಗೆ 11ರಿಂದ ಸಂಜೆ 7ರವರೆಗೆ ನೋಂದಣಿ ಮಾಡಿಕೊಳ್ಳಬಹುದು. ಮೊದಲು ನೋಂದಾಯಿಸಿದ 300 ಬಾಲಕರು, 200 ಬಾಲಕಿಯರಿಗೆ ಸೈಕಲ್ ಪ್ಯೂರ್ ಅಗರಬತ್ತಿ ಪ್ರಾಯೋಜಕತ್ವದ ಟಿ–ಶರ್ಟ್‌ಗಳನ್ನು ನೀಡಲಾಗುವುದು ಎಂದರು.

ಬೆಳಗ್ಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಓಟದ ಸ್ಪರ್ಧೆಗೆ ಚಾಲನೆ ನೀಡಲಿದ್ದಾರೆ. ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ವಿಜೇತರಿಗೆ ಬಹುಮಾನ ವಿತರಣೆ ಮಾಡಲಿದ್ದಾರೆ. ದಿವಂಗತ ಎಂ.ವಿಜಯ ಕುಮಾರ್ ಅವರ ಪತ್ನಿ ಎಸ್.ಶಶಿಕಲಾ ವಿಜಯಕುಮಾರ್ ಹಾಗೂ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು.

ಅಸೋಸಿಯೇಷನ್‌ನ ಕಾರ್ಯದರ್ಶಿ ಎಂ.ಜೆ.ಚರಣ್, ಜಂಟಿ ಕಾರ್ಯದರ್ಶಿ ಬಿ.ಶ್ರೀಕಾಂತ್, ಖಜಾಂಚಿ ಎಸ್.ಮಹದೇವ್, ಸದಸ್ಯ ಎಂ.ನಟರಾಜನ್ ಗೋಷ್ಠಿಯಲ್ಲಿದ್ದರು.

## ಆ.24, 25ರಂದು 'ಗೊರೂರು' ನಾಟಕ ಪ್ರದರ್ಶನ



ಮೈಸೂರು,ಆ.21(ಪಿಎಂ)– ನಿರಂತರ ಫೌಂಡೇಷನ್ ವತಿಯಿಂದ ಗಾಂಧಿವಾದಿ ಮತ್ತು ಸ್ವಾತಂತ್ರ್ಯ ಹೋರಾಟಗಾರ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ನಮ್ಮ ಊರಿನ ರಸಿಕರು' ಹಾಗೂ ಅವರ ಇತರ ಕೃತಿಗಳ ಆಧಾರಿತ ನಾಟಕ 'ಗೊರೂರು' ಇದೇ ಆ.24 ಮತ್ತು 25ರಂದು ಪ್ರದರ್ಶನಗೊಳ್ಳಲಿದೆ ಎಂದು ಫೌಂಡೇಷನ್‌ನ ಅಧ್ಯಕ್ಷ ಎಂ.ಎಂ.ಸುಗುಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಈ ಎರಡೂ ದಿನಗಳಂದು ಸಂಜೆ 6.30ಕ್ಕೆ ಪ್ರದರ್ಶನ ನಡೆಯಲಿದ್ದು, ನಿರಂತರ ರಂಗತಂಡದ ಸದಸ್ಯರು ಅಭಿನಯಿಸಲಿದ್ದಾರೆ. ಟಿಕೆಟ್ ದರ 100 ರೂ. ಎಂದರು.

ಸ್ವಾತಂತ್ರ್ಯ ಹೋರಾಟದ ಜೊತೆಗೆ ಸಾಹಿತ್ಯದಲ್ಲೂ ತೊಡಗಿಕೊಂಡಿದ್ದ ಗೊರೂರು ರಾಮಸ್ವಾಮಿ ಅಯ್ಯಂಗಾರರು ಕನ್ನಡ ಸಾಹಿತ್ಯಕ್ಕೆ ಮಹತ್ವದ ಹಲವು ಕೃತಿಗಳನ್ನು ನೀಡಿದ್ದಾರೆ. ಅವರ ಆಯ್ದ ಬರಹಗಳನ್ನಾಧರಿಸಿ ರಂಗರೂಪ ಪಡೆದಿರುವ 'ಗೊರೂರು' ನಾಟಕವು ಗೊರೂರಿನ ಮೋಡಿ ಮಾಡುವ ಜಗತ್ತನ್ನು ಪರಿಚಯಿಸುತ್ತಲೇ ವಿಶಿಷ್ಟ ಅನುಭವ ನೀಡಲಿದೆ ನಾಟಕದಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಪಾತ್ರವೂ ಇದೆ. ನಾಟಕಕ್ಕೆ ಮಂಜುನಾಥ್ ಎಲ್.ಬಡಿಗೇರ ಅವರ ನಿರ್ದೇಶನವಿದ್ದು, ಅವರೇ ರಂಗಪಠ್ಯ ರಚಿಸಿ, ವಿನ್ಯಾಸ ಮಾಡಿದ್ದಾರೆ ಎಂದು ವಿವರಿಸಿದರು.

1 ಗಂಟೆ 45 ನಿಮಿಷಗಳ ಅವಧಿಯ ನಾಟಕದಲ್ಲಿ 20 ಕಲಾವಿದರು ಅಭಿನಯಿಸಲಿದ್ದಾರೆ. ಈ ಎರಡೂ ದಿನಗಳಂದು ಹಿರಿಯ ಪತ್ರಕರ್ತ ಎನ್.ಜಗದೀಶ್ ಕೊಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಹಾಗೂ ನಿರಂತರದ ಪ್ರಸಾದ್ ಕುಂದೂರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ನಾಟಕದ ನಿರ್ದೇಶಕ ಮಂಜುನಾಥ್ ಎಲ್.ಬಡಿಗೇರ, ಪತ್ರಕರ್ತರಾದ ದಯಾಶಂಕರ್‌ಮೈಲಿ, ಕೃಷ್ಣ, ಫೌಂಡೇಷನ್‌ನ ಶ್ರೀನಿವಾಸ್, ಆಕಾಶ್ ಗೋಷ್ಠಿಯಲ್ಲಿದ್ದರು.

## ಒಂದನೇ ಪುಟದಿಂದ

### ಪರ್ಯಾಯವಾಗಿ ಆಪರೇಷನ್ ಕಮಲ

ಬೃಹತ್ ಹೋರಾಟ ನಡೆಸಿ ಹೆಚ್ಚು ಶಾಸಕರನ್ನು ಕಾಂಗ್ರೆಸ್ ಸೆಳೆಯದಂತೆ ನೋಡಿಕೊಳ್ಳಬೇಕು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕನಿಷ್ಠ 20 ಸ್ಥಾನ ಗೆಲ್ಲಬೇಕು ಎಂದು ಪಣತೊಟ್ಟಿರುವ ಕಾಂಗ್ರೆಸ್ ಶೇಕಡವಾರು ಮತಗಳನ್ನು ಹೆಚ್ಚಿಸಿಕೊಳ್ಳಲು ವಾಮ ಮಾರ್ಗದಿಂದ ನಮ್ಮ ಬಲಿಷ್ಠ ಶಾಸಕರು ಮತ್ತು ಮುಖಂಡರನ್ನು ಸೆಳೆಯಲು ತಂತ್ರಗಾರಿಕೆ ರೂಪಿಸಿದ್ದಾರೆ.

ಕಾಂಗ್ರೆಸ್ ವರಿಷ್ಠರ ಮಾರ್ಗದರ್ಶನದಲ್ಲೇ ಆಪರೇಷನ್ ಹಸ್ತಾಕ್ಕೆ ಇಲ್ಲಿನ ನಾಯಕರು ಮುಂದಾಗಿದ್ದಾರೆ. ನಾವು ಎಚ್ಚರಿಕೆಯಿಂದ ಮುಂದಿನ ಹೆಜ್ಜೆ ಇಡಬೇಕು ಎಂದು ಸಭೆ ತೀರ್ಮಾನಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ವೈಷಮ್ಯದ ಕಂದಕ ಹಾಗೇ ಮುಂದುವರೆದಿದೆ. ಇವರಿಬ್ಬರ ಶೀತಲ ಸಮರದಲ್ಲಿ ಹಲವರಿಗೆ ಅಧಿಕಾರ ತಪ್ಪಿದೆ. ನಾಯಕರ ವಿರುದ್ಧ ಅಸಮಾಧಾನಗೊಂಡಿರುವ ಕಾಂಗ್ರೆಸ್ ಶಾಸಕರನ್ನು ಗುರುತಿಸಿ ಅವರ ಮನವೊಲಿಸಿ ಪಕ್ಷಕ್ಕೆ ಸೆಳೆಯಬೇಕು. ನಾವು ಆಪರೇಷನ್ ಮಾಡುತ್ತೇವೆ ಎಂಬ ಸಂದೇಶ ನೀಡಲು ಶಾಸಕರನ್ನು ಸೆಳೆಯಲು ಮುಂದಾಗಿದೆ. ನಾವು ಅಧಿಕಾರದಲ್ಲಿದ್ದಾಗ ಭ್ರಷ್ಟಾಚಾರದ ಆರೋಪ ಹೊರಿಸಿ ಅಧಿಕಾರಕ್ಕೆ ಬಂದವರಿಗೆ ಈಗ ಆ ಆರೋಪ ಸುತ್ತಿಕೊಂಡಿದೆ. ಇದರ ವಿರುದ್ಧ ಬೀದಿಗಿಳಿದು ಹೋರಾಟ ನಡೆಸಬೇಕು. ಆ. 28ರಂದು ರಾಜ್ಯಾದ್ಯಂತ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡೋಣ. ಇದು ಒಂದು ದಿನಕ್ಕೆ ಸೀಮಿತವಾಗದೇ ಸಿದ್ದರಾಮಯ್ಯ ಆಡಳಿತದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಮತ್ತು ಇತರೆ ವೈಫಲ್ಯಗಳನ್ನು ನಿರಂತರವಾಗಿ ಜನರ ಮುಂದಿಡೋಣ ಎಂದಿದ್ದಾರೆ.

ಸಭೆಯಲ್ಲಿ ಈ ಪ್ರಮುಖ ವಿಚಾರವಲ್ಲದೆ, ರಾಷ್ಟ್ರೀಯ ಶಿಕ್ಷಣ ನೀತಿ ರದ್ದು ಮಾಡುವ ರಾಜ್ಯ ಸರ್ಕಾರದ ನಡೆಗೆ ವಿವಿಧ ಸ್ವರೂಪದ ಹೋರಾಟಕ್ಕೆ ರೂಪುರೇಷೆ ಸಿದ್ಧಪಡಿಸಲು ತೀರ್ಮಾನಿಸಲಾಗಿದೆ. ಬಿಬಿಎಂಪಿ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಗೆಲ್ಲುವ ವಾರ್ಡ್ ವಿಂಗಡಣೆ ಅವೈಜ್ಞಾನಿಕವಾಗಿದೆ ಎಂಬ ಆರೋಪ ಮತ್ತು ಈ ಬಗ್ಗೆ ನ್ಯಾಯಾಲಯ ಹೋಗುವ ಬಗ್ಗೆ ಚರ್ಚೆ ನಡೆಸಲಾಗಿದೆ.

### ನೈಸ್ ರಸ್ತೆ ಅಗತ್ಯವಿಲ್ಲ

ವರದಿ ಕೊಟ್ಟಿದ್ದೇನೆ. ಇದರ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು ಹಾಗೂ ಹೆಚ್ಚುವರಿ ಭೂಮಿಯನ್ನು ಹಿಂಪಡೆಯಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ ಎಂದರು. ನೈಸ್ ಯೋಜನೆಗೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಹಾಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಆರೋಪ–ಪ್ರತ್ಯಾರೋಪಗಳ ಬಗ್ಗೆ ನೀವು ಅವರಿಬ್ಬರನ್ನೇ ಕೇಳಿ ಎಂದು ಹೇಳಿದರು.

ಕಾವೇರಿ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಬುಧವಾರ ರಾಜ್ಯ ಸರ್ಕಾರ ಸರ್ವಪಕ್ಷ ಸಭೆ ಕರೆದಿದ್ದು, ಅಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುತ್ತದೆ. ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ಆದರೆ ಕಳೆದ ಏಳು ವರ್ಷಗಳಿಂದ ಕೇಂದ್ರ ಸರ್ಕಾರ ಹಣವನ್ನೇ ಬಿಡುಗಡೆ ಮಾಡಿಲ್ಲ. ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ 5 ಸಾವಿರ ಕೋಟಿ ರೂ. ನೀಡುವುದಾಗಿ ಘೋಷಣೆ ಮಾಡಿದ್ದಾರೆ. ಇದು ಕೇಂದ್ರದ ಯೋಜನೆಯಾಗಲಿ ಅಥವಾ ರಾಜ್ಯ ಸರ್ಕಾರದ ಯೋಜನೆಯೇ ಆಗಲಿ ಕೇಂದ್ರ ಸರ್ಕಾರ ಯಾವುದೇ ಮಾನದಂಡದಲ್ಲಿ ಗುರುತಿಸಲಿ ಕಗ್ಗಂಟಿಲ್ಲದೆ ಹಣ ಬಿಡುಗಡೆ ಮಾಡಲಿ ಎಂದು ಜಯಚಂದ್ರ ಒತ್ತಾಯಿಸಿದ್ದಾರೆ.

ಈ ಯೋಜನೆಗೆ ರಾಜ್ಯ ಸರ್ಕಾರ 20 ಸಾವಿರ ಕೋಟಿ ರೂಪಾಯಿ ವೆಚ್ಚ ಮಾಡುತ್ತಿದೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿದೆ. ಕೇಂದ್ರ ಸರ್ಕಾರ ಬಜೆಟ್ ಮಂಡಿಸಿದ ಬಳಿಕ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ಬಜೆಟ್‌ನಲ್ಲಿ ಅಳವಡಿಸಿಕೊಳ್ಳುವುದು ಸಂಪ್ರದಾಯವಾಗಿದೆ.

ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರ ಎಷ್ಟು ವೆಚ್ಚ ಮಾಡಿದೆ ಬಾಕಿ ಎಷ್ಟು ಬಿಡುಗಡೆ ಮಾಡಲಿದೆ ಎಂಬ ವಿವರಗಳನ್ನು ಮುಂದಿನ ದಿನಗಳಲ್ಲಿ ಮಾಹಿತಿ ಪಡೆದು ನೀಡುವುದಾಗಿ ಇದೇ ವೇಳೆ ಜಯಚಂದ್ರ ತಿಳಿಸಿದರು.

### ಕೃಷಿ ಅಧಿಕಾರಿಗಳು 3 ದಿನ ಸಿಐಡಿ ಕಸ್ಟಡಿಗೆ

ಮತ್ತೆ ಹಾಜರು ಪಡಿಸಲಿದ್ದಾರೆ. ಪೊಲೀಸ್ ಕಸ್ಟಡಿಯಲ್ಲಿರುವ ಅಧಿಕಾರಿಗಳನ್ನು ಅಜ್ಞಾತ ಸ್ಥಳದಲ್ಲಿ ಸಿಐಡಿ ಸುದೀರ್ಘ ವಿಚಾರಣೆ ನಡೆಸಲಿದೆ. ಜಿಲ್ಲೆಯ 7 ತಾಲೂಕಿನ ಕೃಷಿ ಅಧಿಕಾರಿಗಳ ಹೆಸರಿನಲ್ಲಿ ಮೈಸೂರು ಕೃಷಿ ಅಧಿಕಾರಿಗಳಾದ ನೀವು ಕೃಷಿ ಸಚಿವರ ವಿರುದ್ಧ ಏಕೆ ಪತ್ರ ಬರೆದಿದ್ದೀರಿ. ಮೈಸೂರಿನಿಂದ ರಾಜ್ಯಪಾಲರ ಕಚೇರಿಗೆ ಏಕೆ ಕಳುಹಿಸಿದ್ದೀರಿ. ಈ ಪ್ರಕರಣಕ್ಕೂ ನಿಮಗೂ ಏನು ಸಂಬಂಧ ಎಂದು ಸುದೀರ್ಘ ವಿಚಾರಣೆ ನಡೆಯಲಿದೆ.

ಪತ್ರ ಬರೆದ ಮೈಸೂರು ಕೃಷಿ ಇಲಾಖೆ ಎಡಿ ಗುರುಪ್ರಸಾದ್ ಹಾಗೂ ಎಓ ಸುದರ್ಶನ್‌ರನ್ನು ಸಿಐಡಿ ಐಓಗಳಾದ ತನ್ವೀರ್ ಮತ್ತು ಶಿವಕುಮಾರ್ ವಿಚಾರಣೆ ನಡೆಸುತ್ತಿದ್ದು, ಸಿಐಡಿ ಐಜಿಪಿ ಮಧುಕರ್ ಪ್ರವೀಣ್ ಪವಾರ್ ಮಾರ್ಗದರ್ಶನದಲ್ಲಿ ತನಿಖೆ ನಡೆಸಲಾಗುತ್ತಿದೆ.

## ಹಿಂದೂ ಜಾಗರಣ ವೇದಿಕೆ ಪದಾಧಿಕಾರಿ ಬಂಧನ ಖಂಡಿಸಿ ಪ್ರತಿಭಟನೆ





ಮೈಸೂರು,ಆ.21(ಪಿಎಂ)– ಹಿಂದೂ ಜಾಗರಣ ವೇದಿಕೆ ಪ್ರಾಂತ ಸಹಸಂಯೋಜಕ ಸತೀಶ್ ದಾವಣಗೆರೆ ಅವರನ್ನು ಪೊಲೀಸರು ಬಂಧಿಸಿದ್ದನ್ನು ಖಂಡಿಸಿ ವೇದಿಕೆಯ ಮೈಸೂರು ಘಟಕದ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಪಂ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನಲ್ಲಿ ಆ.14ರಂದು ಆಯೋಜಿಸಿದ್ದ ಅಖಂಡ ಭಾರತ ಸಂಕಲ್ಪ ದಿನ ಕಾರ್ಯಕ್ರಮದಲ್ಲಿ ಪ್ರಚೋದನಾಕಾರಿ ಭಾಷಣ ಮಾಡಿದ್ದಾರೆಂದು ಆರೋಪಿಸಿ ಸತೀಶ್ ದಾವಣಗೆರೆ ಅವರನ್ನು ಸ್ಥಳೀಯ ಪೊಲೀಸರು ಬಂಧಿಸಿದ್ದರು. ಅವರ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ ಬಂಧಿಸಲಾಗಿತ್ತು ಇದೀಗ ಅವರು ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹಿಂದೂ ವಿರೋಧಿ ನೀತಿಗೆ ಈ ಪ್ರಕರಣ ಕೈಗನ್ನಡಿಯಾಗಿದೆ ಎಂದು ಆರೋಪಿಸಿದರು.

ಸತೀಶ್ ದಾವಣಗೆರೆ ಅವರು ಅಂದಿನ ಕಾರ್ಯಕ್ರಮದಲ್ಲಿ ಭಾಷಣ ಮಾಡಿದ್ದರು. ಆ ಮೂಲಕ ಭಾರತದಲ್ಲಿ 1947ರಲ್ಲಿ ದೇಶ ವಿಭಜನೆ ಮತ್ತು ವಿಭಜನೆಗೆ ಮೊದಲು ದೇಶದಲ್ಲಿ ಏನೇನು ಘಟನೆಗಳು ಘಟಿಸಿತು ಎನ್ನುವ ಸತ್ಯ ಸಂಗತಿ ಅನಾವರಣ ಮಾಡಿದ್ದರು. ಆದರೆ ಅವರನ್ನು ಬಂಧಿಸಿ, ಸತ್ಯ ಸಂಗತಿ ಮಾತನಾಡುವ ಹಿಂದೂ ಸಂಘಟನೆಗಳ ಕಾರ್ಯಕರ್ತರನ್ನು ದಮನ ಮಾಡುವ ಪ್ರಯತ್ನ ಮಾಡಲಾಗಿದೆ ಎಂದು ಆರೋಪಿಸಿದರು.

ಸಂಘಟನೆಯ ಕಾರ್ಯಕರ್ತರನ್ನು ಇನ್ನು ಮುಂದೆ ಕೆಣಕಿದರೆ, ವಾಕ್ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತಹ ಕೆಲಸ ಮಾಡಿದರೆ, ವೇದಿಕೆಯು ಒಂದು ಸಮಾಜವಾಗಿ ಉತ್ತರ ಕೊಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಲಿದೆ ಎಂದು ಎಚ್ಚರಿಸಿದರು. ವೇದಿಕೆ ಮೈಸೂರು ಮಹಾನಗರ ಸಂಚಾಲಕ ರಂಗಸ್ವಾಮಿ, ಪದಾಧಿಕಾರಿಗಳಾದ ಆನಂದ್, ಸುಧೀರ್, ಅರ್ಜುನ್, ಸುಭಾಷ್, ಸಂತೋಷ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಭಾನುವಾರ ಸುಪ್ರೀಂ ಕೋರ್ಟ್ ನ್ಯಾಯಾಧೀಶರಾದ ನ್ಯಾಯಮೂರ್ತಿ ಪಂಕಜ್ ಮಿತ್ತಲ್ ಅವರು ಮೈಸೂರು ಅರಮನೆಗೆ ಭೇಟಿ ನೀಡಿದ್ದರು. ಈ ವೇಳೆ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಅವರು ನ್ಯಾಯಮೂರ್ತಿಗಳನ್ನು ಸ್ವಾಗತಿಸಿ, ಸನ್ಮಾನಿಸಿ, ಸತ್ಕರಿಸಿದರು. ಮೈಸೂರು ಅರಮನೆಯಲ್ಲಿರುವ ಚಿನ್ನದ ಅಂಬಾರಿ, ಕಲ್ಯಾಣ ಮಂಟಪ, ಪಬ್ಲಿಕ್ ದರ್ಬಾರ್, ಖಾಸಗಿ ದರ್ಬಾರ್, ಅಪರೂಪದ ಕಲಾಕೃತಿಗಳನ್ನು ವೀಕ್ಷಿಸಿದ ನ್ಯಾಯಮೂರ್ತಿಗಳು ಅರಮನೆ ಅಂದ ಹಾಗೂ ಉದ್ಯಾನವನಗಳ ನಿರ್ವಹಣೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

## ಸುಗಮ ಸಂಗೀತ ಅರ್ಥೈಸಿ, ಅನುಭವಿಸಿ ಪ್ರಸ್ತುತಪಡಿಸಬೇಕು






ಮೈಸೂರು,ಆ.21(ಸಿಎನ್)– ಈಗಿನ ಪೀಳಿಗೆಗೆ ಸುಗಮ ಸಂಗೀತ ಅಷ್ಟು ಪರಿಚಯವಿಲ್ಲ. ಸುಗಮ ಸಂಗೀತವನ್ನು ಲಘುವಾಗಿ ತೆಗೆದುಕೊಂಡು ಹಾಡುತ್ತಿದ್ದಾರೆ. ಹಾಡಿನ ಭಾವಾರ್ಥ, ತಾತ್ಪರ್ಯ ಅರಿಯದೇ ಹಾಡುತ್ತಾರೆ ಅಷ್ಟೇ, ಆದರೆ ಮೂಲ ಗಾಯನದ ಶೈಲಿಯನ್ನು ತಿರುಚುತ್ತಿದ್ದಾರೆ ಎಂದು ಖ್ಯಾತ ಕವಿ ಜಯಪ್ಪ ಹೊನ್ನಾಳಿ ಬೇಸರ ವ್ಯಕ್ತಪಡಿಸಿದರು.

ನಗರದ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಸಂಚಲನ ಮೈಸೂರು ಸಂಸ್ಥೆ ಸಹಯೋಗದಲ್ಲಿ ಹಾಗೂ ಕನ್ನಡ, ಸಂಸ್ಕೃತಿ ಇಲಾಖೆ ಸಹಕಾರದೊಂದಿಗೆ ಸೋಮವಾರ ನಡೆದ 'ಐದು ದಿನಗಳ ಸುಗಮ ಸಂಗೀತ ಕಾರ್ಯಾಗಾರ ಸಮಾರೋಪ ಸಮಾರಂಭ' ಉದ್ಘಾಟಿಸಿ ಮಾತನಾಡಿ, ಸುಗಮ ಸಂಗೀತಕ್ಕೆ ತನ್ನದೇ ಆದ ಶಾಸ್ತ್ರ ಇದೆ. ಪ್ರತಿಯೊಂದು ಕವಿತೆಗಳಿಗೂ ಅದರದೇ ಆದ ಭಾವ, ಭಾವನೆಗಳಿರುತ್ತದೆ. ಅದನ್ನು ಅರ್ಥೈಸಿಕೊಂಡು, ಅನುಭವಿಸಿ ಪ್ರಸ್ತುತಪಡಿಸಬೇಕಾಗುತ್ತದೆ ಎಂದರು.

ಆಧುನಿಕ ಜಗತ್ತಿಗೆ ಸುಗಮ ಸಂಗೀತದ ಹೊಸ ಆಯಾಮ ಕೊಟ್ಟವರು ಕಾಳಿಂಗ ರಾವ್, ಸಿ.ಎಸ್.ಅಶ್ವಥ್, ಮೈಸೂರು ಅನಂತಸ್ವಾಮಿ. ಇವರ ಮುಂದುವರಿದ ಭಾಗವಾಗಿ ರಾಜು ಅನಂತಸ್ವಾಮಿ ಸೇರಿದಂತೆ ಹಲವು ಸಾಧಕರಿದ್ದಾರೆ. ಒಬ್ಬ ಕವಿಯನ್ನು ಅಂತರಂಗದಲ್ಲಿ ಬದುಕಿಸಿಕೊಂಡು ಹಾಡಿದಾಗ, ಆ ಮೂಲ ಕವಿಗಳಿಗೆ ಸಲ್ಲಿಸಿದ ನಮನವಾಗುತ್ತದೆ ಎಂದು ಸ್ಮರಿಸಿದರು.

ಹೆಣ್ಣುಮಕ್ಕಳಿಗೆ ಸ್ತ್ರಾಂಗು ಗುರು ಎನ್ನುತ್ತಾರೆ. ಅದು ಸತ್ಯ. ಏಕೆಂದರೆ ದಿಗ್ಗಜರ ಹಾಡುಗಳ ಅದ್ಭುತವಾದ ಗಾಯನದ ಮೂಲಕ ಗಂಧರ್ವ ಲೋಕಕ್ಕೆ ಕರೆದೊಯ್ದಂತೆ ಭಾಸವಾಯಿತು. ಸಂಗೀತ ವಿಲಾಸಕ್ಕಾಗಿ ಅಲ್ಲ ವಿಕಾಸಕ್ಕಾಗಿ ಎಂಬುದು ನನ್ನ ಸ್ಪಷ್ಟ ಅಭಿಮತವಾಗಿದೆ ಎಂದರು.

ರವಿ ಮೂರೂರು ಅವರ ಸಾರಥ್ಯದಲ್ಲಿ 'ಅನಂತಾಶ್ವಥ' ಗೀತಗಾಯನದಲ್ಲಿ 10 ಶಿಬಿರಾರ್ಥಿಗಳಿಂದ ದಿ.ಮೈಸೂರು ಅನಂತಸ್ವಾಮಿ ಹಾಗೂ ದಿ.ಸಿ.ಎಸ್. ಅಶ್ವಥ್ ಅವರ ಸಂಯೋಜಿತ ಭಾವಗೀತೆಗಳನ್ನು ಹಾಡಿ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದರು.

ಈ ಸಂದರ್ಭ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ಘಟಕದ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್, ಖ್ಯಾತ ಗಮಕ ಕಲಾವಿದೆ ಶುಭ ರಾಘವೇಂದ್ರ, ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮತ್ತಿತರರು ಉಪಸ್ಥಿತರಿದ್ದರು.

# ತಮಿಳುನಾಡಿಗೆ ನೀರು: ಕಬಿನಿ ಮುಂದೆ ರೈತರ ಪ್ರತಿಭಟನೆ

## ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ, ಕೋರ್ಟ್ ಮೊರೆ ಹೋಗಲು ನಿರ್ಧಾರ



ಹೆಚ್.ಡಿ.ಕೋಟೆ, ಆ.21– ಕಬಿನಿ ಜಲಾಶಯದಿಂದ ತಮಿಳುನಾಡಿಗೆ ನೀರು ಬಿಡುತ್ತಿರುವುದನ್ನು ವಿರೋಧಿಸಿ ಕಬಿನಿ ಜಲಾಶಯದ ಮುಖ್ಯದ್ವಾರದ ಬಳಿ ಕರ್ನಾಟಕ ರಾಜ್ಯ ರೈತ ಪರ್ವ ಸಂಘಟನೆ ಪ್ರತಿಭಟನೆ ನಡೆಸಿತು.

ಪ್ರತಿಭಟನೆಗೂ ಮುನ್ನ ಕರ್ನಾಟಕ ರೈತ ಪರ್ವ ರಾಜ್ಯಾಧ್ಯಕ್ಷ ಅರುಣ್‌ಕುಮಾರ್, ಕಾರ್ಯಾಧ್ಯಕ್ಷ ನವೀನ್‌ಗೌಡ ಅವರು, ತಮಿಳುನಾಡಿಗೆ ನೀರು ಬಿಡಬಾರದೆಂದು ಹೋರಾಟ ನಡೆಸಿ ನೀರಿಗಾಗಿ ಪ್ರಾಣ ತ್ಯಾಗ ಮಾಡಿದ ರೈತ ಗುರುಸ್ವಾಮಿ ಅವರ ಪ್ರತಿಮೆಗೆ ಹಸಿರು ಶಾಲು ಹಾಕಿ ಪ್ರತಿಭಟನೆ ನಡೆಸಿದರು.

ಬಳಿಕ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಅರುಣ್‌ಕುಮಾರ್, ರೈತರು ಯಾವುದೇ ರಾಜಕೀಯ ಪಕ್ಷಗಳ ಒತ್ತಡಕ್ಕೆ ಮಣಿಯದೆ ಒಗ್ಗಟ್ಟಿನಿಂದ ಹೋರಾಟ ಮಾಡಿದರೆ ಪ್ರತಿಫಲ ಸಿಗುತ್ತದೆ, ಏಕೆಂದರೆ ಯಾವುದೇ ಸರ್ಕಾರ ಬಂದರೂ ರೈತರ ಪರ ನಿಲ್ಲುವುದಿಲ್ಲ. ಸರ್ಕಾರಗಳು ರೈತರ ವಿರುದ್ಧವೇ ಹೊರತು, ರೈತರ ಪರವಾಗಿ ಹೋರಾಟ ಮಾಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಾದ್ಯಂತ ಎಲ್ಲಾ ರೈತಪರ ಸಂಘಟನೆಗಳು, ರೈತರುಗಳು, ಒಗ್ಗಟ್ಟಿನಿಂದ ನೀರಿಗಾಗಿ ಹೋರಾಟ ಮಾಡುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟಿಗೆ ರೈತರುಗಳ ಸಮ್ಮುಖದಲ್ಲಿ ಅರ್ಜಿಯನ್ನು ಸಲ್ಲಿಸೋಣ. ನಮಗೆ ನ್ಯಾಯ ದೊರಕಿಸಿ ಕೊಡಿ ಎಂದು ನ್ಯಾಯಾಲಯದ ಮೊರೆ ಹೋಗೋಣ ಎಂದರು.

ಕರ್ನಾಟಕ ರಾಜ್ಯ ರೈತ ಪರ್ವ ಕಾರ್ಯಾಧ್ಯಕ್ಷ ವೈ.ಎಲ್.ನವೀನ್‌ಗೌಡ ಮಾತನಾಡಿ, ರಾಜಕಾರಣಿಗಳು ರೈತರನ್ನು ದಾರಿ ತಪ್ಪಿಸುವಂತಹ ಕೆಲಸ ಮಾಡಿ, ರೈತರಲ್ಲಿರುವ ಒಗ್ಗಟ್ಟನ್ನು ಒಡೆಯುವ ಕೆಲಸವನ್ನು ಮಾಡಿದ್ದಾರೆ, ರಾಜ್ಯಾದ್ಯಂತ ರೈತರುಗಳು ರೈತಪರ್ವ ಸಂಘಟನೆಗಳು ಎಲ್ಲರೂ ಒಗ್ಗೂಡಿ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ತಡೆಯುವಂತಹ ಕೆಲಸ ಮಾಡಬೇಕಾಗಿದೆ ಎಂದರು.

ಕಬಿನಿ ಜಲಾಶಯದಲ್ಲಿ ಹಿನ್ನಿರು ಕಡಿಮೆಯಾಗಲು ಇಲ್ಲಿಯ ಅಧಿಕಾರಿಗಳ ಬೇಜವಾಬ್ದಾರಿಯೇ ಕಾರಣವಾಗಿದೆ, ಈ ಬಾರಿ ಮುಂಗಾರು ತಡವಾಗಿ ಆರಂಭವಾದ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಸಾಕಷ್ಟು ನೀರು ಹರಿದು ಬಂತು. ಆದರೆ ಜಲಾಶಯದಲ್ಲಿ ನೀರನ್ನು ಶೇಖರಣೆ ಮಾಡಿಕೊಳ್ಳದೆ, ಸಾವಿರಾರು ಕ್ಯೂಸೆಕ್ ನೀರನ್ನ ನದಿಗೆ ಹರಿಯಲು ಬಿಟ್ಟು ಸಂಪೂರ್ಣ ನೀರನ್ನು ಪೋಲು ಮಾಡಿದ್ದಾರೆ ಎಂದು ಆರೋಪಿಸಿದರು.

ಇದೇ ಸಂದರ್ಭದಲ್ಲಿ ಕಬಿನಿ ನೀರಾವರಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಾದ ಚಂದ್ರಶೇಖರ್, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಜನಾರ್ಧನ್, ಸಹಾಯಕ ಇಂಜಿನಿಯರ್ ರಮೇಶ್ ಬಾಬು ಅವರುಗಳಿಗೆ ಕಬಿನಿ ಜಲಾಶಯದಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ನಿಲ್ಲಿಸಬೇಕು ಎಂದು ಮನವಿ ಪತ್ರ ನೀಡಿ ಪ್ರತಿಭಟನಾಕಾರರು ಪ್ರತಿಭಟನೆಯನ್ನು ಕೈಬಿಟ್ಟರು.

ಸಬ್‌ಇನ್ಸ್‌ಪೆಕ್ಟರ್‌ಗಳಾದ ರವಿಶಂಕರ್, ನಂದೀಶ್ ಕುಮಾರ್, ತಮ್ಮೇಗೌಡ, ಗೋಪಾಲಕೃಷ್ಣ, ಎಎಸ್ಐ ಪುಟ್ಟನಾಯಕ, ಕುಮಾರ್, ಸುಬ್ರಹ್ಮಣ್ಯ ಹಾಗೂ ಎರಡು ಪೊಲೀಸ್ ತುಕಡಿ ಸೇರಿದಂತೆ ಕಬಿನಿ ಜಲಾಶಯದ ಮುಖ್ಯದ್ವಾರದ ಬಳಿ ಸಂಪೂರ್ಣ ಬಿಗಿ ಪೊಲೀಸ್ ಬಂದೋಬಸ್ತ್ ಆಯೋಜಿಸಲಾಗಿತ್ತು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜುಳಾ, ಮೈಸೂರು ಮಹಿಳಾ ಜಿಲ್ಲಾಧ್ಯಕ್ಷೆ ಸುಮಲತಾ, ಕೋಟೆ ತಾಲೂಕು ಅಧ್ಯಕ್ಷ ಕುಮಾರ್, ನಂಜನಗೂಡು ತಾಲೂಕು ಅಧ್ಯಕ್ಷ ಕೃಷ್ಣನಾಯಕ್, ಹುಣಸೂರು ತಾಲೂಕು ಅಧ್ಯಕ್ಷ ಬಾಲಕೃಷ್ಣ, ಪಿರಿಯಾಪಟ್ಟಣ ತಾಲೂಕು ಅಧ್ಯಕ್ಷ ಇದಾಯಿ, ರೈತ ಮುಖಂಡರಾದ ನಾಗರತ್ನ, ಭಾಗ್ಯಮ್ಮ, ಮಾಲಮ್ಮ, ರೇಣುಕಾ, ಸುಧಾ ಜ್ಯೋತಿ, ಶಶಿಕಲಾ, ಯೋಗೇಶ್ ಸಿದ್ಲಿಂಗೇಗೌಡ, ಏಜಾಜ್ ಪಾಷಾ ಬೀಚನಹಳ್ಳಿ ಅಬೀಬ್, ವೀರಣ್ಣ, ಮಂಜುನಾಥ್, ದೇವನಾಯಕ ಮಂಜು ಶಿವಮಲ್ಲಪ್ಪ ನಾಗರಾಜು, ಅಜ್‌ಗರ್, ವಿವಿಧ ತಾಲೂಕುಗಳಿಂದ ಆಗಮಿಸಿದ ಎಲ್ಲಾ ತಾಲೂಕಿನ ರೈತ ಪರ್ವ ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

ಸಂಬಳ, ವೈದ್ಯಕೀಯ ಸೇವೆ ಸೇರಿದಂತೆ ಇನ್ನಿತರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ

# ಅರಣ್ಯ ಇಲಾಖೆ ದಿನಗೂಲಿ ನೌಕರರ ಅಹೋರಾತ್ರಿ ಧರಣಿ

## ಶಾಸಕ ಜಿ.ಡಿ.ಹರೀಶ್‌ಗೌಡರಿಂದ ಭರವಸೆ



ಹುಣಸೂರು,ಆ.21– ರಾಜ್ಯ ಅರಣ್ಯ ಇಲಾಖೆ ದಿನಗೂಲಿ ನೌಕರರ ಸಂಘ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ನೌಕರರ ಸಂಘದ ಸಂಯುಕ್ತಾಶ್ರಯದಲ್ಲಿ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ದಿನಗೂಲಿ ನೌಕರರು ನಗರದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಮುಂದೆ ಅಹೋರಾತ್ರಿ ಧರಣಿ ಸತ್ಯಾಗ್ರಹವನ್ನು ಅರಂಭಿಸಿದ್ದಾರೆ.

ಹುಣಸೂರು ಉಪ ವಿಭಾಗದ 8 ವಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರಿಗೆ ಕಳೆದ ಮೂರು ತಿಂಗಳಿಂದ ಸಂಬಳ ನೀಡಿಲ್ಲ. ಕಾರ್ಮಿಕ ಇಲಾಖೆಯ ಅನುಮೋದನೆಯ ಹೊಸ ದರ ಪಟ್ಟಿಯಂತೆ ದಿನಗೂಲಿ ನೀಡುತ್ತಿಲ್ಲ, ನೌಕರರ ಖಾತೆಗೆ ಪಿಎಫ್ ಹಣ ತುಂಬುತ್ತಿಲ್ಲ, ನೌಕರರಿಗೆ ಆರೋಗ್ಯ ತಪಾಸಣೆಯ ಮತ್ತು ವೈದ್ಯಕೀಯ ಸೇವೆಗಾಗಿ ಇಎಸ್ಐ ಕಾರ್ಡ್ ನೀಡಿಲ್ಲ ಎಂದು ಆಪಾದಿಸಿದ ಪ್ರತಿಭಟನಾಕಾರರು, ದಿನಗೂಲಿ ನೌಕರರನ್ನು ಹೊರಗುತ್ತಿಗೆ ಏಜೆನ್ಸಿಗಳು ಶೋಷಣೆ ಮಾಡುತ್ತಿವೆ. ಇದಕ್ಕೆ ಅಧಿಕಾರಿಗಳು ಕೈಜೋಡಿಸಿ ನೌಕರರನ್ನು ಶೋಷಿಸುತ್ತಿದ್ದಾರೆ. ಇದಕ್ಕೆಲ್ಲ ಸೂಕ್ತ ಪರಿಹಾರ ಸಿಗುವವರೆಗೂ ಅಹೋರಾತ್ರಿ ಧರಣಿ ಕೈಬಿಡುವುದಿಲ್ಲ ಎಂದು ಸಂಘದ ರಾಜ್ಯಾಧ್ಯಕ್ಷ ಎ.ಎಂ.ನಾಗರಾಜ್ ತಿಳಿಸಿದರು.

ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಕಲ್ಲಹಳ್ಳ, ನಾಗರಹೊಳೆ, ಅಂತರಸಂತೆ, ಡಿ.ಬಿ ಕುಪ್ಪೆ, ವೀರನಹೊಸಳ್ಳಿ, ಮತ್ತಿಗೋಡು, ತಿತಿಮತಿ, ಹುಣಸೂರು ಸೇರಿದಂತೆ 8 ವಲಯಗಳ ಕಾಡು ಕಾಯುವ ಕೆಲಸಕ್ಕಾಗಿ ವಿನಾಯಕ, ಆರ್.ಸಿ.ಬಿ, ಬಿ.ಡಿ.ಎನ್.ಎ, ಕೆ.ಎಂ.ಕೆ, ರಂಗನಾಥ್ ಎಂಟರ್‌ಪ್ರೈಸಸ್, ಶಾರ್ಪ್ ವಾಚ್ ಇನ್‌ವೆಸ್ಟಿಗೇಷನ್ ಏಜೆನ್ಸಿಗಳು ನಿರ್ವಹಣಾ ಕಾರ್ಯ ವಹಿಸಿಕೊಂಡಿದ್ದು, ಈ ವಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಸರಿಯಾಗಿ ಸಂಬಳ ಮತ್ತು ವೈದ್ಯಕೀಯ ಸೇವೆಗಳು ಮತ್ತು ಜೀವನದ ಭದ್ರತೆಗಳನ್ನು ಒದಗಿಸದೆ ಕೇವಲ ಹಣದ ದಂಧೆಯಲ್ಲಿ ತೊಡಗಿದ್ದಾರೆ ಎಂದರು.

**ಶಾಸಕರ ಭೇಟಿ:** ನೌಕರರ ಧರಣಿ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಏಜೆನ್ಸಿಗಳಿಂದ ಕಾಡು ಕಾಯುವ ನೌಕರರಿಗೆ ಅನ್ಯಾಯವಾಗುತ್ತಿದೆ ಎಂದು ಹೇಳುತ್ತಿದ್ದೀರಿ. ನಾಳೆ ಏಜೆನ್ಸಿಗಳನ್ನು ಸ್ಥಳಕ್ಕೆ ಕರೆದು ಅಧಿಕಾರಿಗಳ ಸಮ್ಮುಖದಲ್ಲಿ ನಿಮ್ಮ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿದರು.

# ಆ.27ರ ಕಂಪಲಾಪುರ ಸಹಕಾರ ಸಂಘದ ಚುನಾವಣೆ ಕಣದಲ್ಲಿ 24 ಅಭ್ಯರ್ಥಿಗಳು

ಕಂಪಲಾಪುರ,ಆ 21– ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ಆ.27ರ ಭಾನುವಾರ ಚುನಾವಣೆ ನಡೆಯಲಿದೆ.

ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಬೆಳಗ್ಗೆ 9ರಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದ್ದು, ಅದೇ ದಿನ ಫಲಿತಾಂಶ ಹೊರಬೀಳಲಿದೆ. ಒಟ್ಟು 12 ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಸಾಲಗಾರರ ಕ್ಷೇತ್ರದಿಂದ 11, ಸಾಲಗಾರರಲ್ಲದ ಕ್ಷೇತ್ರದಿಂದ 1 ಸ್ಥಾನ. ನಾಮಪತ್ರ ಹಿಂಪಡೆಯಲು ಆ.21 ಅಂತಿಮ ದಿನವಾದ್ದರಿಂದ ನಾಲ್ಕು ಮಂದಿ ತಮ್ಮ ಉಮೇದುವಾರಿಕೆ ಹಿಂಪಡೆದಿದ್ದಾರೆ. 12 ಸ್ಥಾನಕ್ಕೆ ಒಟ್ಟು 24 ಮಂದಿ ಕಣದಲ್ಲಿದ್ದಾರೆ.

# ಕಬ್ಬಿನ ಗದ್ದೆಗೆ ಬೆಂಕಿ

ನಂಜನಗೂಡು, ಆ.21– ತಾಲೂಕಿನ ತಗಡೂರು ಗ್ರಾಮದಲ್ಲಿ ದುಷ್ಕರ್ಮಿಗಳು ಕಟಾವಿಗೆ ಬಂದಿದ್ದ ಕಬ್ಬಿನ ಗದ್ದೆಗೆ ಬೆಂಕಿ ಹಚ್ಚಿದ ಪರಿಣಾಮ 3.5 ಲಕ್ಷ ರೂ. ಮೌಲ್ಯದ ಎರಡು ಎಕರೆ ಕಬ್ಬು ನಾಶವಾಗಿರುವ ಘಟನೆ ಸೋಮವಾರ ಜರುಗಿದೆ.

ರೈತ ಸೋಮಪ್ಪ ತಮಗೆ ಸೇರಿದ ಎರಡು ಎಕರೆ ಜಮೀನಿನಲ್ಲಿ ಕಬ್ಬಿನ ಬೆಳೆ ಬೆಳೆದಿದ್ದರು. ಸೋಮವಾರ ಸಂಜೆ ವೇಳೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದರಿಂದಾಗಿ ಎರಡು ಎಕರೆ ಪ್ರದೇಶದ ಕಬ್ಬಿನ ಬೆಳೆ ಸುಟ್ಟು ಬೂದಿಯಾಗಿದೆ.

ಸೋಮಪ್ಪ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಸಾಲ ಸೋಲ ಮಾಡಿ ಕಬ್ಬಿನ ಬೆಳೆ ಬೆಳೆದಿದ್ದೆ. ಮುಂದಿನ ಎರಡು ದಿನಗಳಲ್ಲಿ ಕಬ್ಬು ಕಟಾವು ಮಾಡಬೇಕಿತ್ತು, ಆದರೆ ಕಿಡಿಗೇಡಿಗಳು ಬೆಂಕಿ ಹಚ್ಚಿ ಬೆಳೆ ನಾಶ ಮಾಡಿದ್ದಾರೆ ಎಂದರು.

# ತಿ.ನರಸೀಪುರದಲ್ಲಿ ಬೃಹತ್ ಉದ್ಯೋಗ ಮೇಳಕ್ಕೆ ಸಿದ್ಧತೆ



ತಿ.ನರಸೀಪುರ.ಆ.21 – ವಸತಿ ಯೋಜನಾ ಜಾಗೃತ ಸಮಿತಿಯ ಮಾಜಿ ಅಧ್ಯಕ್ಷ ಹಾಗೂ ಕೆಡಿಪಿ ಸದಸ್ಯರಾದ ಸುನೀಲ್ ಬೋಸ್ ಹುಟ್ಟುಹಬ್ಬದ ಅಂಗವಾಗಿ ಆ.31 ರಂದು ಪಟ್ಟಣದಲ್ಲಿ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿರುವ ಹಿನ್ನೆಲೆಯಲ್ಲಿ ಸೋಮವಾರ ಪೀಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆ.ವಜ್ರೇಗೌಡ, ಮೈಮುಲ್ ನಿರ್ದೇಶಕ ಆರ್. ಚೆಲುವರಾಜು ಒಳಗೊಂಡ ತಂಡ ಪಟ್ಟಣದ ಎಪಿಎಂಸಿ ಆವರಣದಲ್ಲಿ ಸ್ಥಳ ಪರಿಶೀಲನೆ ನಡೆಸಿತು.

ಕಾಂಗ್ರೆಸ್ ಮುಖಂಡರ ತಂಡ ಎಪಿಎಂಸಿ ಉದ್ಯೋಗ ಮೇಳಕ್ಕೆ ಬೇಕಾಗುವ ಜಾಗದ ವಿಸ್ತೀರ್ಣ ಹಾಗೂ ಆವರಣದ ಸ್ವಚ್ಛತೆ ಮಾಡುವ ನಿಟ್ಟಿನಲ್ಲಿ ಎಪಿಎಂಸಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿತು.ಎಪಿಎಂಸಿ ಆವರಣದಲ್ಲಿ ಪ್ರತಿ ನಿತ್ಯ ತರಕಾರಿ ಮಾರುಕಟ್ಟೆ ನಡೆಯುತ್ತಿದ್ದು, ಉದ್ಯೋಗ ಮೇಳ ನಡೆಯುವ ದಿನದಿಂದ ಎರಡು ದಿನ ಮುಂಚಿತವಾಗಿ ತರಕಾರಿ ಮಾರುಕಟ್ಟೆಯನ್ನು ಬೇರೆಡೆಗೆ ಸ್ಥಳಾಂತರಿಸುವ ಕುರಿತಂತೆ ಮಾತುಕತೆ ನಡೆಸಿ,ಅಧಿಕಾರಿಗಳಿಗೆ ಸೂಚನೆ ನೀಡಿತು.

ಈ ವೇಳೆ ಮಾತನಾಡಿದ ಮಹದೇಶ್ವರ ಬಸ್ ಮಾಲೀಕ ಪೀಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಹಾಗೂ ಮೈಮುಲ್ ನಿರ್ದೇಶಕ ಆರ್.ಚೆಲುವರಾಜು, ತಾಲೂಕಿನಲ್ಲಿಯೇ ಪ್ರಪ್ರಥಮ ಬಾರಿಗೆ ಸುನೀಲ್ ಬೋಸ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಆ.31 ರಂದು ದೊಡ್ಡಮಟ್ಟದ ಉದ್ಯೋಗ ಮೇಳ ನಡೆಯಲಿದ್ದು, ಮೇಳದಲ್ಲಿ ನೂರಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಳ್ಳಲಿವೆ ಎಂದರು.

ಉದ್ಯೋಗ ಮೇಳದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೊಮಾ, ಐಟಿಐ,ಟಿ.ಇ.ಟಿ ಫಾರ್ಮ,ಡಿ ಫಾರ್ಮ,ನರ್ಸಿಂಗ್, ಬಿಎ, ಬಿಕಾಂ,ಬಿಎಸ್ಸಿ,ಬಿಬಿಎಂ,ಎಂಬಿಎ,ಎಂಕಾಂ, ಎಂಎಸ್ಸಿಎಂಎಸ್ ಡಬ್ಲ್ಯೂ ಇನ್ನಿತರೆ ಯಾವುದೇ ಪದವಿ ಪಡೆದಿರುವ ಯುವಕ–ಯುವತಿ ಉದ್ಯೋಗಾಕಾಂಕ್ಷಿಗಳು ಭಾಗವಹಿಸಿ ಸಂಪೂರ್ಣ ಉಚಿತವಾದ ಮೇಳದ ಸದುಪಯೋಗ ಪಡೆದು ಕೊಳ್ಳುವಂತೆ ತಿಳಿಸಿದರು.

ಈ ವೇಳೆ ಆಪ್ತ ಸಹಾಯಕ ಲಕ್ಷ್ಮೀನಾರಾಯಣ್, ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಗ್ರಾಪಂ ಮಾಜಿ ಅಧ್ಯಕ್ಷ ನಾಗರಾಜು(ಚೀಕಾ). ಮಟನ್ ಅಸ್ಲಾಂ, ಅಬ್ದುಲ್ ಅತೀಕ್, ಸೋಮುದಾದ ಮತ್ತಿತರರಿದ್ದರು.

# ಶ್ರೀಕಂಠೇಶ್ವರನ ದೇವಾಲಯದ ಮುಂಭಾಗ ಇಳಿದ ಚಂದ್ರಯಾನ–3 ಲ್ಯಾಂಡರ್!




ನಂಜನಗೂಡು, ಆ.21– ಅರೆ ಚಂದ್ರನ ಅಂಗಳದ ಮೇಲೆ ಇಳಿಯಬೇಕಿದ್ದ ಚಂದ್ರಯಾನ–3 ರ ಲ್ಯಾಂಡರ್ ಶ್ರೀಕಂಠೇಶ್ವರನ ದೇವಾಲಯದ ಮುಂಭಾಗ ಇಳಿದಿದೆ ಎಂದು ಸಾರ್ವಜನಿಕರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ನಂಜನಗೂಡಿನ ಎ9 ಆರ್ಟ್ ಸ್ಟುಡಿಯೋದ ವಿದ್ಯಾರ್ಥಿಗಳು ನಗರದ ಶ್ರೀಕಂಠೇಶ್ವರ ದೇವಾಲಯದ ಮುಂಭಾಗ ಚಂದ್ರಯಾನ 3ರ ಲ್ಯಾಂಡರ್ ಯಶಸ್ವಿಯಾಗಲಿ ಎಂದು ಚಂದ್ರಯಾನ ಲ್ಯಾಂಡರ್‌ನ 14 x 28 ಅಳತೆಯಲ್ಲಿ ತ್ರೀಡಿ ಚಿತ್ರ ಬರೆದು ಸಾರ್ವಜನಿಕರನ್ನು ಆಶ್ಚರ್ಯಗೊಳ್ಳುವಂತೆ ಮಾಡಿದ್ದಾರೆ. ದೇವಾಲಯಕ್ಕೆ ಆಗಮಿಸುವ ಭಕ್ತಾದಿಗಳು ಈ ವಿಶೇಷ ತ್ರೀಡಿ ಚಿತ್ರಗಳನ್ನು ಕಂಡು ಆಶ್ಚರ್ಯ ಪಡುವುದರ ಜೊತೆಗೆ ವಿದ್ಯಾರ್ಥಿಗಳ ಚಿತ್ರಕಲೆಗೆ ಮೆಚ್ಚುಗೆ ವ್ಯಕ್ತಪಡಿಸಿ ಸಂತೋಷಗೊಂಡಿದ್ದಾರೆ.

ಚಿತ್ರ ಕಲಾವಿದ ಅನಿಲ್ ಭೋಗಶೆಟ್ಟಿ ಮಾತನಾಡಿ, ಎ9 ಆರ್ಟ್ ಸ್ಟುಡಿಯೋದ ವಿದ್ಯಾರ್ಥಿಗಳು ಚಂದ್ರಯಾನ–3 ಲ್ಯಾಂಡರ್ ಯಶಸ್ವಿಗೊಳ್ಳಲಿ ಎಂದು ಶ್ರೀಕಂಠೇಶ್ವರನಲ್ಲಿ ಪ್ರಾರ್ಥನೆ ಸಲ್ಲಿಸಿ ಈ ವಿಶೇಷ ಚಿತ್ರವನ್ನು ರಚನೆ ಮಾಡಿದ್ದಾರೆ. ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಈ ಚಿತ್ರವನ್ನು ದೇವಾಲಯದ ಮುಂಭಾಗ ಬರೆಯಲಾಗಿದೆ. ಈ ಚಿತ್ರದಿಂದ ವಿದ್ಯಾರ್ಥಿಗಳ ಕಲೆ, ಕೌಶಲ ಹೊರಬರಲು ಸಹಾಯಕವಾಗಿದೆ. ಸಾರ್ವಜನಿಕರು ಚಿತ್ರಗಳನ್ನು ಕಂಡು ಸಂತಸ ವ್ಯಕ್ತಪಡಿಸಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ಚಿತ್ರ ರಚನೆಕಾರರಾದ ಎ9 ಆರ್ಟ್ ಸ್ಟುಡಿಯೋದ ವಿದ್ಯಾರ್ಥಿಗಳಾದ ಮನೋಜ್, ಭರತ್, ಧೀರಜ್, ಪ್ರೀತಮ್, ಮೋನಿಶ್, ಮೋಹಿತ್, ಜಯಂತ್, ನಯನ, ತೇಜಸ್ವಿನಿ, ಶಾಲಿನಿ ಇದ್ದರು

# ಗಾಂಜಾ ಬೆಳೆದಿದ್ದವನ ಬಂಧನ

## ಹುಣಸೂರು ಬಳಿ 5 ಕೆಜಿ ಹೆಚ್ಚು ಗಾಂಜಾ ವಶ



ಹುಣಸೂರು,ಆ.21– ಮನೆಯ ಹಿಂಭಾಗ ಅಕ್ರಮವಾಗಿ ಬೆಳೆದಿದ್ದ ಗಾಂಜಾ ಗಿಡವನ್ನು ಗ್ರಾಮಾಂತರ ಪೊಲೀಸರು ವಶಪಡಿಸಿಕೊಂಡು, ಆರೋಪಿಯನ್ನು ಬಂಧಿಸಿರುವ ಘಟನೆ ತಾಲೂಕಿನ ತಟ್ಟೆಕೆರೆ ಗ್ರಾಮದಲ್ಲಿ ಸಂಭವಿಸಿದೆ. ಗ್ರಾಮದ ವಾಸಿ ಲೇಟ್ ಬಸವರಾಜು ಅವರ ಮಗ ವಿಶ್ವನಾಥ್ ಬಂಧಿತ ಆರೋಪಿ.

ಈತ ಅಕ್ರಮವಾಗಿ ತನ್ನ ಮನೆಯ ಹಿಂದೆ ಗಾಂಜಾ ಗಿಡ ಬೆಳೆದಿದ್ದ. ಖಚಿತ ಮಾಹಿತಿ ಮೇರೆಗೆ ಇನ್ಸ್‌ಪೆಕ್ಟರ್ ರವಿ ಅವರ ಸೂಚನೆಯಂತೆ ಪಿಎಸ್ಐ ರಾಮಚಂದ್ರನಾಯ್ಕ ಮತ್ತು ಸಿಬ್ಬಂದಿ ಗ್ರಾಮಕ್ಕೆ ತೆರಳಿ ಆರೋಪಿ ಮನೆಯ ಹಿಂಭಾಗದಲ್ಲಿ ಅಕ್ರಮವಾಗಿ ಬೆಳೆದಿದ್ದ ಸುಮಾರು 5 ಕೆಜಿಗೂ ಹೆಚ್ಚು ಗಾಂಜಾ ಸೊಪ್ಪನ್ನು ವಶಪಡಿಸಿಕೊಂಡು ಆರೋಪಿಯನ್ನು ಬಂಧಿಸಿದರು. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕಾರ್ಯಾಚರಣೆಯಲ್ಲಿ ಪೊಲೀಸ್ ಸಿಬ್ಬಂದಿಗಳಾದ ನಂದೀಶ್, ಮಂಜುನಾಥ್, ಇಮ್ರಾನ್ ಷರೀಫ್, ಕಿರಣ್, ಮೇರಾಜ್, ಸುಂದರ್ ಭಾಗವಹಿಸಿದ್ದರು.

# ಹಾಲಿನ ಲಾರಿ ಡಿಕ್ಕಿ; ಜೆಕೆ ಕಾರ್ಖಾನೆ ನೌಕರ ದುರ್ಮರಣ

ಹುಣಸೂರು, ಆ.21– ಹಾಲಿನ ಲಾರಿಯೊಂದು ಹೋಂಡಾ ಆಕ್ಟೀವಾಗೆ ಡಿಕ್ಕಿ ಹೊಡೆದ ಪರಿಣಾಮ ಮೈಸೂರಿನ ಜೆಕೆ ಕಾರ್ಖಾನೆಂಯ ನೌಕರನೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಬಿಳಿಕೆರೆ ಸಮೀಪದ ರಾಷ್ಟ್ರೀಯ ಹೆದ್ದಾರಿ 275ರ ಕೆ.ಆರ್. ನಗರ ಜಂಕ್ಷನ್ ಬಳಿ ಸಂಭವಿಸಿದೆ.

ತಾಲೂಕಿನ ಸೋಮನಹಳ್ಳಿ ಗ್ರಾಮದ ಲೇಟ್ ಜವರಶೆಟ್ಟಿ ಅವರ ಮಗನಾದ ಮೈಸೂರಿನ ಜೆಕೆ ಫ್ಯಾಕ್ಟರಿ ನೌಕರ ಗಿರೀಶ್(40) ಎಂಬಾತನೆ ಅಪಘಾತದಲ್ಲಿ ಮೃತಪಟ್ಟ ನತದೃಷ್ಟ. ಇಂದು ಬೆಳಗ್ಗೆ ಗಿರೀಶ್ ತನ್ನ ಹೋಂಡಾ ಆಕ್ಟೀವ (ಕೆ.ಎ–09, ಹೆಚ್.ಹೆಚ್–1006)ದಲ್ಲಿ ಮೈಸೂರಿನ ಜೆಕೆ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುತ್ತಿದ್ದಾಗ ಕೆ.ಆರ್.ನಗರ ಜಂಕ್ಷನ್ ಬಳಿ ಮೈಸೂರು ಕಡೆಯಿಂದ ಬಂದ ಐಷರ್ ಹಾಲಿನ ವಾಹನ (ಕೆ.ಎ–41, 1334) ಡಿಕ್ಕಿ ಹೊಡೆದ ಪರಿಣಾಮ ತಲೆಗೆ ತೀವ್ರವಾದ ಪೆಟ್ಟು ಬಿದ್ದು ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಅಪಘಾತವೆಸಗಿದ ಹಾಲಿನ ವಾಹನ ಚಾಲಕ ವಾಹನದೊಂದಿಗೆ ಪರಾರಿಯಾಗಿದ್ದಾನೆ.

ಈ ಸಂಬಂಧ ಬಿಳಿಕೆರೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮೃತದೇಹವನ್ನು ಶವ ಪರೀಕ್ಷೆಯ ನಂತರ ವಾರಸುದಾರರಿಗೆ ಒಪ್ಪಿಸಿದರು. ಪರಾರಿಯಾಗಿರುವ ಹಾಲಿನ ವಾಹನ ಮತ್ತು ಚಾಲಕನ ಪತ್ತೆ ಕಾರ್ಯದಲ್ಲಿ ತೊಡಗಿದ್ದು, ಮುಂದಿನ ಕ್ರಮಕೈಗೊಂಡಿದ್ದಾರೆ.

# ಮಾಜಿ ಶಾಸಕ ಯತೀಂದ್ರರಿಗೆ ಸೂಕ್ತ ಸ್ಥಾನಮಾನಕ್ಕೆ ಆಗ್ರಹ



ತಿ.ನರಸೀಪುರ.ಆ.21 – ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯರವರಿಗೆ ರಾಜ್ಯ ಸರ್ಕಾರದಲ್ಲಿ ಉನ್ನತ ಸ್ಥಾನಮಾನ ನೀಡುವ ಮೂಲಕ ಅವರು ಕ್ಷೇತ್ರದ ಕಡೆ ಗಮನ ಹರಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾಧ್ಯಮ ವಕ್ತಾರ ಸಂತೃಪ್ತಿಕುಮಾರ್ ಮುಖ್ಯಮಂತ್ರಿ ಸಿದ್ದರಾಮಯ್ಯರಲ್ಲಿ ಮನವಿ ಮಾಡಿದ್ದಾರೆ.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಸುಭದ್ರವಾದ ಆಡಳಿತ ನೀಡುತ್ತಿದೆ. ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷ ಜನರಿಗೆ ನೀಡಿದ್ದ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ತಲುಪಿಸುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇಡೀ ರಾಜ್ಯದ ಜವಾಬ್ದಾರಿ ಹೊತ್ತು ಅಚ್ಚು ಕಟ್ಟಾಗಿ ಸಾರ್ವಜನಿಕ ಕೆಲಸಗಳನ್ನು ಮಾಡುತ್ತಿದ್ದಾರೆ ಎಂದರು.

ಸಿದ್ದುರವರು ವರುಣ ಕ್ಷೇತ್ರದಿಂದ ಎರಡನೇ ಬಾರಿ ಗೆದ್ದು ಮುಖ್ಯಮಂತ್ರಿಯಾಗಿರುವುದು ಇಡೀ ಕ್ಷೇತ್ರಕ್ಕೆ ಹೆಮ್ಮೆಯ ವಿಷಯವಾಗಿದೆ. ಸಿದ್ದು ಈಗ ಕೇವಲ ವರುಣ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರದೇ ಇಡೀ ರಾಜ್ಯದ ಜವಾಬ್ದಾರಿ ಹೊತ್ತಿರುವುದರಿಂದ ಕಾರ್ಯಕರ್ತರು, ಸಾರ್ವಜನಿಕರು ಹಾಗೂ ಮುಖಂಡರುಗಳಿಗೆ ಹೆಚ್ಚಿನ ಸಮಯ ಮೀಸಲಿಡಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಕ್ಷೇತ್ರದ ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ರವರಿಗೆ ಸರ್ಕಾರದಲ್ಲಿ ಸೂಕ್ತ ಸ್ಥಾನಮಾನ ನೀಡಿ ಕ್ಷೇತ್ರದ ಜನತೆಯ ಕೆಲಸ ಮಾಡಿಕೊಡಲು ಅವಕಾಶ ಕೊಡಬೇಕು ಎಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಎಪಿಎಂಸಿ ಮಾಜಿ ಸದಸ್ಯ ಸೋಮಣ್ಣನಾಯಕ, ಡಿಸಿಸಿ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ.ಪ್ರದೀಪ್, ಕಾಂಗ್ರೆಸ್ ಬೋರ್‌ವೆಲ್ ಮನ್ನೇಹುಂಡಿ ಪರಶಿವ, ಮುಖಂಡರಾದ ರೇವಣ್ಣಬಸಪ್ಪ ಲಿಂಗರಾಜು, ಪ್ರಕಾಶ್ ಹಾಜರಿದ್ದರು.

# ಅರ್ಹರೆಲ್ಲರಿಗೂ ಗೃಹಲಕ್ಷ್ಮಿ ಜಾರಿಯಾಗುವವರೆಗೂ ವಿಶ್ರಮಿಸುವುದಿಲ್ಲ

## ನಂಜುಂಡೇಶ್ವರನ ದರ್ಶನ ಪಡೆದ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿಕೆ



ನಂಜನಗೂಡು, ಆ.21– ರಾಜ್ಯದಲ್ಲಿ ಎಪಿಎಲ್, ಬಿಪಿಎಲ್ ಕಾರ್ಡ್ ಹೊಂದಿರುವ 1 ಕೋಟಿ 28 ಲಕ್ಷ ಕುಟುಂಬಗಳು ಗೃಹಲಕ್ಷ್ಮಿ ಯೋಜನೆಯ ವ್ಯಾಪ್ತಿಗೆ ಒಳಪಡಲಿದ್ದು, ರಾಜ್ಯದಲ್ಲಿ ಈಗಾಗಲೇ ಸುಮಾರು 1 ಕೋಟಿ 10 ಲಕ್ಷ ಕುಟುಂಬಗಳ ನೋಂದಣಿ ಕಾರ್ಯ ಮುಕ್ತಾಯಗೊಂಡಿದೆ. ಬಾಕಿ 18 ಲಕ್ಷ ಕುಟುಂಬಗಳನ್ನು ಯೋಜನೆ ವ್ಯಾಪ್ತಿಗೆ ತರುವವರೆಗೆ ವಿಶ್ರಮಿಸುವುದಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿದ್ದಾರೆ.

ಸೋಮವಾರ ಶ್ರೀಕಂಠೇಶ್ವರ ದೇವಾಲಯಕ್ಕೆ ಭೇಟಿ ನೀಡಿ, ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ ನಂತರ ನಗರದ ಪ್ರವಾಸಿಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆ.30 ರಂದು ಗೃಹಲಕ್ಷ್ಮಿ ಯೋಜನೆಗೆ ಮೈಸೂರಿನಲ್ಲಿ ಚಾಲನೆ ನೀಡಲಾಗುವುದು. ಈ ಹಿನ್ನೆಲೆಯಲ್ಲಿ ಶ್ರಾವಣ ಮಾಸವಾದ್ದರಿಂದ ಶ್ರೀಕಂಠೇಶ್ವರ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದಿದ್ದೇನೆ ಎಂದರು.

ಪ್ರತಿಯೊಬ್ಬರು ಈ ಯೋಜನೆಯ ವ್ಯಾಪ್ತಿಗೆ ಬರಲಿ ಎಂಬ ಉದ್ದೇಶದಿಂದ ಈಗಾಗಲೇ ಸಾಕಷ್ಟು ಜಾಹೀರಾತು ನೀಡಿ ಪ್ರಚಾರ ನಡೆಸಿ ಜನರಿಗೆ ತಿಳಿವಳಿಕೆ ಮೂಡಿಸಲಾಗಿದೆ. ಒಂದು ಕೋಟಿ 53 ಲಕ್ಷ ಎಪಿಎಲ್, ಬಿಪಿಎಲ್ ಕಾರ್ಡ್‌ದಾರರಿದ್ದು, ಆ ಪೈಕಿ, ಒಂದು ಕೋಟಿ 28 ಲಕ್ಷ ಕುಟುಂಬಗಳು ಮಾತ್ರ ಗೃಹಲಕ್ಷ್ಮಿ ಯೋಜನೆ ವ್ಯಾಪ್ತಿಗೆ ಒಳಪಡಲಿವೆ. ಈಗಾಗಲೇ ಸುಮಾರು ಒಂದು ಕೋಟಿ ಹತ್ತು ಲಕ್ಷ ಕುಟುಂಬಗಳು ಗೃಹಲಕ್ಷ್ಮಿ ಯೋಜನೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಶಿಶು ಅಭಿವೃದ್ಧಿ ಇಲಾಖೆಯ ಸದಸ್ಯರ ಮೂಲಕ ನೋಂದಣಿ ಕಾರ್ಯ ಮುಕ್ತಾಯಗೊಂಡಿದೆ. ಬಾಕಿ 18 ಲಕ್ಷ ನೋಂದಾವಣೆ ಕಾರ್ಯ ಮುಕ್ತಾಯಗೊಂಡಲ್ಲಿ ಗೃಹಲಕ್ಷ್ಮಿ ಯೋಜನೆ ಪೂರ್ಣಗೊಂಡು ಸಾರ್ವಜನಿಕರಿಗೆ ಅನುಕೂಲವಾಗಲಿದೆ ಅಲ್ಲಿಯವರೆಗೂ ನಾನು ವಿಶ್ರಾಂತಿ ಪಡೆಯುವುದಿಲ್ಲ ಎಂದರು.

ನೋಂದಣಿ ಮುಕ್ತಾಯಗೊಂಡ ಬಳಿಕ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಿಗೆ ಪಿಂಕ್ ಕಾರ್ಡ್ ದೊರಕಲಿದ್ದು, ಈ ಪಿಂಕ್ ಕಾರ್ಡ್‌ಗಳಲ್ಲಿ ಕ್ಯೂಆರ್ ಕೋಡ್ ಅಳವಡಿಸಲಾಗಿರುತ್ತದೆ. ಈ ಕ್ಯೂಆರ್ ಕೋಡ್‌ಗಳನ್ನು ಪಡಿತರ ಅಂಗಡಿಗಳಲ್ಲಿ ಸ್ಕ್ಯಾನ್ ಮಾಡಿದಾಗ ಫಲಾನುಭವಿಗಳ ಖಾತೆಗೆ ಹಣ ನೇರವಾಗಿ ವರ್ಗಾವಣೆಗೊಳ್ಳಲಿದೆ. ಫಲಾನುಭವಿಗಳು ಸ್ಕ್ಯಾನ್ ಮಾಡಿಸುವುದನ್ನು ಮರೆಯಬಾರದು ಎಂದರು.

ಇದೇ ಸಂದರ್ಭದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಅವರು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ನಗರಸಭಾ ಸದಸ್ಯರಾದ ಶ್ರೀಕಂಠಸ್ವಾಮಿ, ಪ್ರದೀಪ್, ಗಂಗಾಧರ್, ಎಸ್.ಪಿ.ಮಹೇಶ್, ಮುಖಂಡರಾದ ಗೋವಿಂದರಾಜು, ಹಂಡುವಿನಹಳ್ಳಿ ಪರಶಿವಮೂರ್ತಿ, ಸತೀಶ್ ಗೌಡ, ಸೋಮು, ಸಿಡಿಪಿಓ ಕವಿತಾ, ಮಂಜುಳಾ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

# ದಸರಾ ಮಹೋತ್ಸವ: ಈ ಬಾರಿ 135 ಕಿ.ಮೀ ರಸ್ತೆ, 119 ವೃತ್ತ ದೀಪಾಲಂಕಾರ

**● ವಿವಿಧೆಡೆ 30ಕ್ಕೂ ಹೆಚ್ಚು ಆಕೃತಿಗಳ ನಿರ್ಮಾಣ ● ಪಂಚ ಗ್ಯಾರಂಟಿ ಯೋಜನೆಗಳ ಆಕೃತಿಯೂ ಅಳವಡಿಕೆ ● 6.03 ಕೋಟಿ ರೂ. ವೆಚ್ಚದ ಅಲ್ಪಾವಧಿ ಟೆಂಡರ್ ನೀಡಲು ನಿರ್ಧಾರ**

**ಎಂ.ಟಿ.ಯೋಗೇಶ್ ಕುಮಾರ್**

ಮೈಸೂರು,ಆ.21– ಅದ್ದೂರಿಯಾಗಿ ಆಚರಿಸಲ್ಪಡುವ ಈ ಸಾಲಿನ ದಸರಾ ಮಹೋತ್ಸವದಲ್ಲಿ ಸಾಂಸ್ಕೃತಿಕ ನಗರಿ ಮೈಸೂರು ಝಗಮಗಿಸುವ ದೀಪಾಲಂಕಾರದಿಂದ ಮಿಂದೇಳಲಿದ್ದು, ಅದಕ್ಕಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತವು ಸಿದ್ಧತೆ ಮಾಡಿಕೊಳ್ಳುತ್ತಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯೂ ಆಗಿರುವುದರಿಂದ ದಸರಾ ಕಾರ್ಯಕ್ರಮಗಳು ವೈವಿಧ್ಯಮಯವಾಗಿ ಜರುಗಲಿವೆ. ಪ್ರಮುಖ ಆಕರ್ಷಣೆಯಾಗಿರುವ ದೀಪಾಲಂಕಾರಕ್ಕೆ ಹೆಚ್ಚು ಒತ್ತು ನೀಡಲು ನಿರ್ಧರಿಸಲಾಗಿದೆ. ದೀಪಾಲಂಕಾರಕ್ಕಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಭರ್ಜರಿ ಸಿದ್ಧತೆ ಮಾಡಿಕೊಳ್ಳಲಾರಂಭಿಸಿದೆ.

**ಬೆಳಗಲಿದೆ ಮೈಸೂರು:** ನವರಾತ್ರಿ ವೇಳೆ ಸಾಂಸ್ಕೃತಿಕ ನಗರಿ ಮೈಸೂರು ಪ್ರಕಾಶಿಸಲಿದೆ. ಈ ಬಾರಿ ಮೈಸೂರು ನಗರ ವ್ಯಾಪ್ತಿಯೊಳಗೆ 135 ಕಿ.ಮಿ ರಸ್ತೆಗೆ ದೀಪಾಲಂಕಾರ ಮಾಡಲು ನಿರ್ಧರಿಸಲಾಗಿದೆ. ಇದರೊಂದಿಗೆ ಪ್ರಮುಖ ವೃತ್ತಗಳೂ ಒಳಗೊಂಡಂತೆ 119 ವೃತ್ತಗಳಿಗೂ ಕಣ್ಮನ ಸೆಳೆಯುವ ದೀಪಾಲಂಕಾರ ಹಾಗೂ ದೊಡ್ಡಕೆರೆ ಮೈದಾನ, ಕೆ.ಆರ್.ವೃತ್ತ, ಚಾಮರಾಜವೃತ್ತ, ಜಯಚಾಮರಾಜ ವೃತ್ತ, ರಾಮಸ್ವಾಮಿ ವೃತ್ತ, ರೈಲ್ವೆ ನಿಲ್ದಾಣ ಸಮೀಪ, ಗನ್‌ಹೌಸ್, ಎಲ್‌ಐಸಿ ವೃತ್ತ ಸೇರಿದಂತೆ ವಿವಿಧೆಡೆ ವಿದ್ಯುತ್ ದೀಪಗಳಿಂದಲೇ ಮಾಡಿರುವ 30ಕ್ಕೂ ಹೆಚ್ಚು ಆಕೃತಿಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ. ಅ.15ರಿಂದ 24ವರೆಗೆ ನಡೆಯುವ ನವರಾತ್ರಿ ವೇಳೆ ದೀಪಾಲಂಕಾರದಿಂದ ಮೈಸೂರು ಕಂಗೊಳಿಸಲಿದೆ.

**ಸರ್ಕಾರಿ ಕಟ್ಟಡಗಳಿಗೂ ದೀಪಾಲಂಕಾರ:** ಒಂದೆಡೆ ಮೈಸೂರಿನ ರಸ್ತೆಗಳು ಝಗಮಗಿಸಲಿದ್ದರೆ, ಸರ್ಕಾರಿ ಕಟ್ಟಡಗಳು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಮಿಂಚಿ ಮಿನುಗಲಿವೆ. ಹೊಸ ಹಾಗೂ ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡ, ಮಹಾನಗರ ಪಾಲಿಕೆ, ಮೈಸೂರು ವಿವಿಯ ಕ್ರಾಫರ್ಡ್ ಭವನ, ಮುಡಾ, ಕಾಡಾ ಕಚೇರಿ, ಕೆ.ಆರ್.ಆಸ್ಪತ್ರೆ, ರೈಲ್ವೆ ನಿಲ್ದಾಣದ ಕಚೇರಿ, ಮಹಾರಾಜ ಕಾಲೇಜು ಸೇರಿದಂತೆ ಹಲವು ಸರ್ಕಾರಿ ಕಟ್ಟಡಗಳೂ ದೀಪಾಲಂಕಾರದಿಂದ ಕಂಗೊಳಿಸಲಿವೆ.

**6.03 ಕೋಟಿ ರೂ.ಗಳ ಟೆಂಡರ್:** ದಸರಾ ಮಹೋತ್ಸವದ ವೇಳೆ ದೀಪಾಲಂಕಾರಕ್ಕಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವತಿಯಿಂದ ಪ್ರಕ್ರಿಯೆ ನಡೆಸಲಾಗಿದ್ದು, ಒಟ್ಟು 6.03 ಕೋಟಿ ರೂ.ಗಳ ಟೆಂಡರ್ ಕರೆಯಲಾಗುತ್ತಿದೆ. 15 ವಿಭಾಗವಾಗಿ ವಿಂಗಡಣೆ ಮಾಡಿ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಆನ್‌ಲೈನ್ ಮೂಲಕ ಗುತ್ತಿಗೆದಾರರು ಅರ್ಜಿ ಸಲ್ಲಿಸಿದ್ದಾರೆ. 23 ಲಕ್ಷ ರೂ.ನಿಂದ 60.62 ಲಕ್ಷ ರೂ.ವರೆಗೆ ವಿವಿಧ ಕಾಮಗಾರಿಗಳನ್ನು ವಿಂಗಡಿಸಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆಯಲ್ಲಿ ಕಳೆದ ಕೆಲ ವರ್ಷಗಳಿಂದ ಪಾಲ್ಗೊಳ್ಳುತ್ತಿರುವ ಗುತ್ತಿಗೆದಾರರು ಸೇರಿದಂತೆ ಹೊಸ ಗುತ್ತಿಗೆದಾರರು ಅರ್ಜಿ ಸಲ್ಲಿಸಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

### ಈ ಬಾರಿ ಹೊಸತನವಿರಲಿ

ಕಳೆದ ಐದಾರು ವರ್ಷಗಳಿಂದ (ಕೊರೊನಾ ಹಾವಳಿ ವರ್ಷ ಹೊರತುಪಡಿಸಿ) ದಸರಾ ದೀಪಾಲಂಕಾರಕ್ಕಾಗಿ ಒಂದೇ ವಿನ್ಯಾಸದ ಸೀರಿಯಲ್ ಸೆಟ್ ಬಳಸಲಾಗುತ್ತಿದ್ದು, ಈ ಬಾರಿ ಹೊಸತನಕ್ಕೆ ನಾಂದಿ ಹಾಡಬೇಕು. ಕೆಲವು ವರ್ಷಗಳ ದೀಪಾಲಂಕಾರ ಛಾಯಾಚಿತ್ರ ಅವಲೋಕಿಸಿ, ಈ ಬಾರಿ ಹೊಸ ವಿನ್ಯಾಸ ಅಥವಾ ಹೊಸತನ ಅಳವಡಿಸಿಕೊಳ್ಳಬೇಕಾಗಿದೆ. ಲಕ್ಷಾಂತರ ರೂ. ಟೆಂಡರ್ ಪಡೆದವರು ಹಿಂದೆ ಅಳವಡಿಸಿರುವ ಸೀರಿಯಲ್ ಸೆಟ್‌ಗಳನ್ನೇ, ಹಳೆ ವಿನ್ಯಾಸದಲ್ಲೇ ಹಾಕುವ ಪದ್ಧತಿ ಅನುಸರಿಸುತ್ತಿದ್ದು, ಪ್ರವಾಸಿಗರಿಗೆ ಮುದ ನೀಡುವುದಿಲ್ಲ. ಪ್ರತಿ ವರ್ಷವೂ ಹೊಸ ಟೆಂಡರ್ ಕರೆಯುವುದರಿಂದ ಹೊಸ ವಿನ್ಯಾಸದ ದೀಪಾಲಂಕಾರ ಮಾಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಸೀರಿಯಲ್ ಸೆಟ್ ಬಳಕೆಯಿಂದ ನಾಡಹಬ್ಬ ದಸರಾ ಮಹೋತ್ಸವದ ವೈಭವಕ್ಕೆ ಕುಂದುಂಟಾಗಲಿದೆ. ದೀಪಾಲಂಕಾರಕ್ಕೆ ಕಳಪೆ ಗುಣಮಟ್ಟ, ಚೀನಾ ಸೀರಿಯಲ್ ಸೆಟ್‌ಗೆ ಕಡಿವಾಣ ಹಾಕಬೇಕಾಗಿದೆ. ಟೆಂಡರ್ ಪ್ರಕ್ರಿಯೆಯಲ್ಲೇ ಕೆಲವು ಷರತ್ತನ್ನು ವಿಧಿಸಿ ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಸೂಚನೆ ನೀಡಬೇಕೆಂದು ನಾಗರೀಕರು ಮನವಿ ಮಾಡಿದ್ದಾರೆ.

### ದೀಪಾಲಂಕಾರಕ್ಕಾಗಿ ಸಿದ್ಧತೆ

ದಸರಾ ಮಹೋತ್ಸವದ ದೀಪಾಲಂಕಾರಕ್ಕಾಗಿ ಟೆಂಡರ್ ಕರೆಯಲಾಗಿದೆ. ನಿಗಮವು ಅಲ್ಪಾವಧಿ ಟೆಂಡರ್ ಕರೆದಿದೆ. ಟೆಂಡರ್ ತೆರೆದ ಬಳಿಕ ಎಷ್ಟು ಜನ ಭಾಗವಹಿಸಿದ್ದಾರೆ ಎಂದು ತಿಳಿಯುತ್ತದೆ. ಈ ಬಾರಿ 6.03 ಕೋಟಿ ರೂ. ವೆಚ್ಚದಲ್ಲಿ ದೀಪಾಲಂಕಾರ ಮಾಡಲು ಉದ್ದೇಶಿಸಲಾಗಿದೆ. 135 ಕಿ.ಮಿ ರಸ್ತೆಗೆ, 119 ವೃತ್ತಕ್ಕೆ ದೀಪಾಲಂಕಾರ ಮಾಡಲಾಗುತ್ತದೆ. 30ಕ್ಕೂ ಹೆಚ್ಚು ಆಕೃತಿಗಳನ್ನು ವಿವಿಧೆಡೆ ಅಳವಡಿಸಲಾಗುತ್ತದೆ.

- **ಎ. ಸುನೀಲ್ ಕುಮಾರ್,** ಸೂಪರಿಟೆಂಡೆಂಟ್ ಇಂಜಿನಿಯರ್, ಚೆಸ್ಕಾಂ

# ಏಷ್ಯಾ ಕಪ್‌ಗೆ ಭಾರತ ತಂಡ ಪ್ರಕಟ

ನವದೆಹಲಿ, ಆ.21– ಬಹುನಿರೀಕ್ಷಿತ 2023ರ ಏಷ್ಯಾಕಪ್ ಪಂದ್ಯಾವಳಿಗೆ 17 ಆಟಗಾರರನ್ನೊಳಗೊಂಡ ಬಲಿಷ್ಠ ಭಾರತ ತಂಡವನ್ನು ಬಿಸಿಸಿಐ ಸೋಮವಾರ ಪ್ರಕಟಿಸಿದೆ.

ವಿಭಿನ್ನ ಗಾಯಗಳಿಂದ ಸಂಪೂರ್ಣವಾಗಿ ಗುಣಮುಖರಾಗಿರುವ ಕನ್ನಡಿಗ ಕೆ.ಎಲ್.ರಾಹುಲ್, ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಶ್ರೇಯಸ್ ಅಯ್ಯರ್ ಹಾಗೂ ಜಸ್‌ಪ್ರೀತ್ ಬುಮ್ರಾ ಭಾರತ ತಂಡ ಕೂಡಿಕೊಂಡಿರುವುದು ತಂಡಕ್ಕೆ ಆನೆ ಬಲ ಬಂದಂತಾಗಿದೆ. ಇನ್ನು ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಸಂಜು ಸ್ಯಾಮ್ಸನ್‌ಗೆ ಮತ್ತೊಮ್ಮೆ ನಿರಾಸೆಯಾಗಿದ್ದು, ವೆಸ್ಟ್ ಇಂಡೀಸ್ ಎದುರಿನ ಸರಣಿಯಲ್ಲಿ ಮಿಂಚಿದ್ದ ತಿಲಕ್ ವರ್ಮಾಗೆ ಮಣೆ ಹಾಕಲಾಗಿದೆ.

ಮುಂಬರುವ ಅ.5ರಿಂದ ಭಾರತದಲ್ಲಿ ನಡೆಯುವ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿ ಗಮನದಲ್ಲಿಟ್ಟುಕೊಂಡು ಏಷ್ಯಾಕಪ್‌ಗೆ ಭಾರತ ತಂಡವನ್ನು ಆಯ್ಕೆ ಮಾಡಲಾಗಿದೆ. ಎಂದಿನಂತೆ ಭಾರತ ತಂಡವನ್ನು ರೋಹಿತ್ ಶರ್ಮಾ ಮುನ್ನಡೆಸಲಿದ್ದಾರೆ. ಇನ್ನು ವಿಕೆಟ್ ಕೀಪರ್ ಬ್ಯಾಟರ್ ಆಗಿ ಕೆ.ಎಲ್.ರಾಹುಲ್ ಹಾಗೂ ಇಶಾನ್ ಕಿಶನ್ ಸ್ಥಾನ ಪಡೆದಿದ್ದು, ಸಂಜು ಸ್ಯಾಮ್ಸನ್ ಮೀಸಲು ಆಟಗಾರನಾಗಿ ಸ್ಥಾನ ಪಡೆದಿದ್ದಾರೆ. ಉಳಿದಂತೆ ಹಾರ್ದಿಕ್ ಪಾಂಡ್ಯಗೆ ಉಪನಾಯಕ ಪಟ್ಟ ಕಟ್ಟಲಾಗಿದೆ. ಆರಂಭಿಕರಾಗಿ ಶುಭ್‌ಮನ್ ಗಿಲ್, ಮೂರನೇ ಕ್ರಮಾಂಕದಲ್ಲಿ ಕೊಹ್ಲಿ ಬ್ಯಾಟ್ ಬೀಸಲಿದ್ದಾರೆ. ಇನ್ನುಳಿದಂತೆ ಸ್ಟಾರ್ ಆಲ್‌ರೌಂಡರ್ ರವೀಂದ್ರ ಜಡೇಜಾ, ಬೌಲಿಂಗ್ ಆಲ್‌ರೌಂಡರ್‌ಗಳಾದ ಅಕ್ಷರ್ ಪಟೇಲ್, ಶಾರ್ದೂಲ್ ಠಾಕೂರ್ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇನ್ನು ಬೌಲಿಂಗ್ ವಿಭಾಗದಲ್ಲಿ ತ್ರಿವಳಿ ವೇಗಿಗಳಾದ ಜಸ್ಪ್ರೀತ್ ಬುಮ್ರಾ, ಮೊಹಮ್ಮದ್ ಶಮಿ ಹಾಗೂ ಮೊಹಮ್ಮದ್ ಸಿರಾಜ್ ತಂಡದಲ್ಲಿ ಸ್ಥಾನ ಪಡೆದಿದ್ದು, ಕುಲ್ದೀಪ್ ಯಾದವ್ ತಜ್ಞ ಸ್ಪಿನ್ನರ್ ರೂಪದಲ್ಲಿ ಸ್ಥಾನ ಪಡೆದಿದ್ದಾರೆ.

**ಏಷ್ಯಾಕಪ್ ಟೂರ್ನಿಗೆ ಭಾರತ ತಂಡ:** ರೋಹಿತ್ ಶರ್ಮಾ (ನಾಯಕ), ಶುಭ್‌ಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ ಎಲ್ ರಾಹುಲ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜಾ, ಅಕ್ಷರ್ ಪಟೇಲ್, ಶಾರ್ದೂಲ್ ಠಾಕೂರ್, ಜಸ್ಪ್ರೀತ್ ಬುಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಕುಲ್ದೀಪ್ ಯಾದವ್, ಪ್ರಸಿದ್ಧ್ ಕೃಷ್ಣ.

# ಪಾಂಡವಪುರ ಬಳಿ ಪೆಟ್ರೋಲ್ ಬಂಕ್ ಧ್ವಂಸ

**ಸಾವಿರಾರು ಲೀಟರ್ ಪೆಟ್ರೋಲ್, ಡೀಸೆಲ್ ಮಣ್ಣುಪಾಲು, ಲಕ್ಷಾಂತರ ರೂ. ನಷ್ಟ**

ಪಾಂಡವಪುರ, ಆ.21– ಇತ್ತೀಚೆಗೆ ಆರಂಭವಾಗಿದ್ದ ನೂತನ ಪೆಟ್ರೋಲ್ ಬಂಕ್ ಅನ್ನು ದುಷ್ಕರ್ಮಿಗಳು ಧ್ವಂಸಗೊಳಿಸಿರುವ ಘಟನೆ ತಾಲೂಕಿನ ಬೇಬಿ ಗ್ರಾಮದ ಬಳಿ ನಡೆದಿದೆ. ಹಿರಿಯ ಹೋರಾಟಗಾರ ಹಾಗೂ ಕಾಂಗ್ರೆಸ್ ಮುಖಂಡ ಬಸ್ತಿರಂಗಪ್ಪ ಮಾಲೀಕತ್ವದ ಎನ್‌ಜಿ ಪೆಟ್ರೋಲ್ ಬಂಕ್ ನಾಶವಾಗಿದ್ದು, 10 ಲಕ್ಷ ರೂ.ಗಳಿಗೂ ಹೆಚ್ಚು ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ



ಬಸ್ತಿರಂಗಪ್ಪ ಅವರು ಜೂ.29 ರಂದು ಪೆಟ್ರೋಲ್ ಬಂಕ್ ಆರಂಭಿಸಿದ್ದರು. ಬಂಕ್ ಉತ್ತಮವಾಗಿ ನಡೆಯುತ್ತಿತ್ತು ಎನ್ನಲಾಗಿದೆ. ಆದರೆ ಶನಿವಾರ ರಾತ್ರಿ ಕಾವಲಿನಲ್ಲಿದ್ದ ಇಬ್ಬರು ಸಿಬ್ಬಂದಿ ಊಟಕ್ಕೆಂದು ಸಮೀಪದ ಅರಳಕುಪ್ಪೆ ಗ್ರಾಮಕ್ಕೆ ತೆರಳಿದ್ದರು. ಆದರೆ, ಮಳೆಯ ಕಾರಣಕ್ಕಾಗಿ ವಾಪಸ್ ಬಂದಿರಲಿಲ್ಲ. ಈ ವಿಷಯ ತಿಳಿದ ದುಷ್ಕರ್ಮಿಗಳು ಮಧ್ಯರಾತ್ರಿ ದಾಳಿ ನಡೆಸಿ ಎಲೆಕ್ಟ್ರಿಕ್ ಕೊಠಡಿಗೆ ಹಾಕಲಾಗಿದ್ದ ಬೀಗ ಮುರಿದು, ಸ್ಥಗಿತಗೊಳಿಸಲಾಗಿದ್ದ ಪಂಪ್‌ಗಳನ್ನು ಆನ್ ಮಾಡಿದ್ದಲ್ಲದೆ, ಎರಡೂ ಪಂಪ್‌ಗಳ ನಾಲ್ಕೂ ಗನ್‌ಗಳನ್ನು ನೆಲಕ್ಕಿಟ್ಟು ಸುಮಾರು 8 ಸಾವಿರ ಲೀಟರ್ ಡೀಸೆಲ್ ಹಾಗೂ 2 ಸಾವಿರ ಲೀಟರ್‌ಗೂ ಅಧಿಕ ಪೆಟ್ರೋಲ್ ನೆಲಕ್ಕೆ ಹರಿದು ಹೋಗುವಂತೆ ಮಾಡಿ ಪರಾರಿಯಾಗಿದ್ದಾರೆ. ಇದೇ ವೇಳೆ ಪಂಪ್, ಶೌಚಾಲಯ ಹಾಗೂ ಸೇಲ್ಸ್ ರೂಮಿನ ವಸ್ತುಗಳನ್ನು ಧ್ವಂಸ ಮಾಡಿದ್ದಾರೆ. ಭಾನುವಾರ ಬೆಳಗ್ಗೆ ಸಿಬ್ಬಂದಿ ಕೆಲಸಕ್ಕೆ ಬಂದಾಗ ಪ್ರಕರಣ ಬೆಳಕಿಗೆ ಬಂದಿದೆ.

ಸಿಸಿ ಕ್ಯಾಮರಾ ಹಾಗೂ ರಾತ್ರಿ ಕಾವಲಿನ ವ್ಯವಸ್ಥೆ ಇಲ್ಲದಿರುವುದನ್ನು ಗಮನಿಸಿಯೇ ದುಷ್ಕರ್ಮಿಗಳು ಈ ದುಷ್ಕೃತ್ಯ ಎಸಗಿದ್ದು ಸ್ಥಳೀಯ ಪೆಟ್ರೋಲ್ ಬಂಕ್ ಮಾಲೀಕರು ಕುಮ್ಮಕ್ಕು ನೀಡಿ, ವ್ಯವಹಾರಿಕ ದ್ವೇಷದಿಂದಲೇ ಈ ದಾಂಧಲೆ ನಡೆಸಿರಬಹುದು ಎಂಬ ಅನುಮಾನ ಸ್ಥಳೀಯರಲ್ಲಿ ಉಂಟು ಮಾಡಿದೆ.

ಈ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ದುಷ್ಕರ್ಮಿಗಳ ಪತ್ತೆಗಾಗಿ ಎರಡು ಪ್ರತ್ಯೇಕ ತಂಡ ರಚಿಸಲಾಗಿದೆ.

ಪೆಟ್ರೋಲ್ ಬಂಕ್ ಮಾಲೀಕ ಬಸ್ತಿರಂಗಪ್ಪ ಮಾತನಾಡಿ, ಇದು ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಿ ಗೊತ್ತಿರುವವರದ್ದೇ ಕೃತ್ಯ. ಯಾಕೆಂದರೆ ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್ ಹಾಕುವುದು ಚಾಲೂ ಆಗಬೇಕಾದರೆ ರಹಸ್ಯ ಸ್ವಿಚ್ ಇರುತ್ತದೆ. ಅದು ಅಲ್ಲಿನ ಸಿಬ್ಬಂದಿಯ ಮುಖ್ಯಸ್ಥ ಮತ್ತು ಮಾಲೀಕನಿಗೆ ಬಿಟ್ಟರೆ ಯಾರಿಗೂ ಗೊತ್ತಿರುವುದಿಲ್ಲ. ಆದರೆ ಇದು ಗೊತ್ತಿರುವವರೇ ಮಾಡಿರುವ ಕೃತ್ಯ. 10 ಲಕ್ಷ ರೂ. ನಷ್ಟವುಂಟಾಗಿದೆ. ಹೊಸ ಪೆಟ್ರೋಲ್ ಬಂಕ್ ಆಗಿರುವುದರಿಂದ ಸಿಸಿಟಿವಿ ಹಾಕುವ ಕಾಮಗಾರಿ ನಡೆಯುತ್ತಿತ್ತು. ಅಷ್ಟರಲ್ಲಿ ಈ ರೀತಿ ಮಾಡಿದ್ದಾರೆ ಎಂದರು.

ಪೆಟ್ರೋಲ್ ಮತ್ತು ಡೀಸೆಲ್ ಕಳ್ಳತನ ಮಾಡಿದ್ದರೆ ಬೇಸರವಾಗುತ್ತಿರಲಿಲ್ಲ. ಎರಡೂ ಪಂಪ್‌ಗಳ ನಾಲ್ಕೂ ಗನ್‌ಗಳನ್ನು ನೆಲಕ್ಕಿಟ್ಟು 8 ಸಾವಿರ ಲೀಟರ್ ಡೀಸೆಲ್ ಹಾಗೂ 2 ಸಾವಿರ ಲೀಟರ್‌ಗೂ ಅಧಿಕ ಪೆಟ್ರೋಲ್ ನೆಲಕ್ಕೆ ಹರಿದು ಹೋಗುವಂತೆ ಮಾಡಿದ್ದಾರೆ. ಇದಕ್ಕೆ ಏನು ಹೇಳೋಣ? ಎಂದು ಬೇಸರ ವ್ಯಕ್ತಪಡಿಸಿದರು.